ಕರ್ನಾಟಕ ಸರ್ಕಾರ



ಬೇಟೆನೆ ಬರ್ಸ

ಅಪ್ಪಯ್ಯ ಗೌಡ್ರು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ನಿಜ ಘಟನೆ ಆಧಾರಿತ ಬೇಟೆನ ಅನುಭವ ಕಥನ

ಡಾ. ಪ್ರಭಾಕರ ಶಿಶಿಲ ಇವರ
'ಸದ್ದಡಗಿದ ಶಿಕಾರಿಯ ಕೋವಿ' ಕೃತಿ ಆಧಾರಿತ



ಬೇಟೆನ ಬೀರ ಅಪ್ಪಯ್ಯೆಗೌಡ್ರು

ನಿಡ್ಯಮಲೆ ವೇದಾವತಿ ಅನಂತ ಬಡ್ಡಡ್ಕ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

BETENA BIRSA APPAYYA GOWDA written by Smt. Vedavathi Anantha, Goffethota, Peraje, Madikeri, Kodagu. Published by 'Karnataka Arebhase Samskrithi Mathu Sahitya Academy.

ಪ್ರಕಟಣೆ : **2015**

ಪ್ರತಿಗಳು : **500**

ಬೆಲೆ : ರೂ. 70/- Price : Rs. 70/-

ಪುಟಗಳು : ೧೨ + 81

ಸಲಹ ಸಮಿತಿ :

ಶ್ರೀ ಕೊಲ್ಯದ ಗಿರೀಶ್
ಡಾ. ಪೂವಪ್ಪ ಕಣಿಯೂರು
ಡಾ. ಕೋರನ ಸರಸ್ವತಿ ಪ್ರಕಾಶ್
ಶ್ರೀ ಮೋಹನ ಸೋನ
ಶ್ರೀಮತಿ ಸಂಗೀತ ರವಿರಾಜ್

ಪ್ರಕಾಶಕರು : ರಿಜಿಸ್ಟ್ರಾರ್
ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.
ಕಾಫಿ ಕೃಪ ಬಿಲ್ಡಿಂಗ್, ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.
ದೂ. : 08272–223055

ಮುಖಪುಟ ವಿನ್ಯಾಸ : **ಶ್ರೀ ಮೋಹನ ಸೋನ**
ಕಂಪ್ಯೂಟರ್ ವಿನ್ಯಾಸ : **ನಯನ ಸೋನ**

ಮುದ್ರಣ :
ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್,
ಮಡಿಕೇರಿ, ಕೊಡಗು
Ph : 08272-224919, 9448135592

ಅಧ್ಯಕ್ಷರ ಮಾತ್

ಅರೆಬಾಸೆಲಿ ಕಥೆ, ಕವನ, ನಾಟಕ ಬರೆಯುವ ಲೇಖಕರ್ನ ಕಂಡ್ರೆ ಖುಷಿ ಆದೆ. ಸರಕಾರ ರಚನೆ ಮಾಡ್ದ ಅರೆಭಾಷೆ ಅಕಾಡೆಮಿಗೆ ಕೂಡ ಸಾರ್ಥಕತೆ ಇದ್ದದೆ. ಶೂರುಗೆ 4 ಪುಸ್ತಕನ ಪ್ರಕಟನೆ ಮಾಡ್ದ ಗೌರವ ಅಕಾಡೆಮಿಗೆ ಸಲ್ಲಿದೆ ಮತ್ತೆ 6 ಪುಸ್ತಕನ ಪ್ರಕಟಣೆ ಮಾಡ್ತಾವೊಳೊ.

ಪುಸ್ತಕ ಬರ್ದ ಎಲ್ಲಾ ಲೇಖಕರಿಗೂ ನನ್ನ ಹೃತ್ಪೂರ್ವಕ ಅಭಿನಂದನೆನ ತಿಳಿಸ್ತಾವೊಳೆ. ಬರ್ದ ಎಲ್ಲಾ ಪುಸ್ತಕ ಶ್ರೇಷ್ಠ ಅಂತ ನಾನ್ ಹೇಳ್ದುಲೆ. ಲೇಖಕರ್ ಅವರ ಸೃಜನ ಶೀಲತೆನ ಈ ಲೇಖನಲಿ ತೋರ್ಸೊಳೊ. ಹಂಗೆ ಎಲ್ಲಾ ಪ್ರಕಾರಗಳ್ಲಿ ಅವರ ಸಾಮರ್ಥ್ಯನ ಓರೆಗೆ ಹಚ್ಚಿಯೊಳೊ.

ಈ ನಿಟ್ಟ್‌ಲಿ ಶ್ರೀಮತಿ ವೇದಾವತಿ ಅನಂತನವು ಡಾ. ಪ್ರಭಾಕರ ಶಿಶಿಲರ ಸದ್ದಡಗಿದ ಕೋವಿ ಕೃತಿಯ ಆಧಾರದ ಮೇಲೆ ಈ ಕೃತಿನ ರಚಿಸಿಯೊಳೊ. ಲೇಖಕಿಯ ಅಪ್ಪನೆ ಅಪ್ಪಯ್ಯಗೌಡ್ರುತೇಳ್ದು ಒಂದ್ ಹೆಮ್ಮೆಯ ವಿಚಾರ. ಈಗ ಬೇಟೆ ಮಾಡ್ದು ಕಾನೂನ್‌ನ ಪ್ರಕಾರ ಶಿಕ್ಷಾರ್ಹ ಅಪರಾಧ ಆಗುಟ್ಟು, ಆ ಕಾಲಲಿ ಬೇಟೆ ಮಾಡಿ ಕೃಷಿ ಹಂಗೆ ಜಾನುವಾರ್‌ಗಳ್ನ ಉಳ್ಸಿ ಜನರ ಪ್ರೀತಿಗೆ ಪಾತ್ರರಾಗಿದ್ದೊ, ಬೇಟೆ ಮಾಡ್ತಿದ್ದ ಅಪ್ಪಯ್ಯಗೌಡ್ರ್ ಸಸ್ಯಹಾರಿಂತೇಳ್ವ ವಿಷ್ಯ ಅಚ್ಚರಿ ಮೂಡ್ಸಿದೆ. ಅಪ್ಪನ ಹತ್ರಂದ ನೋಡ್ದ ಲೇಖಕರ್ ಅಪ್ಪನ ಗುಣನ ಒಳಗೂಡ್ಸಿ ಕಂಡ್ ಪ್ರೀತಿಲಿ ನೈಜ ಘಟನೆಗಳ್ನ ಕೃತಿಲಿ ಮೂಡ್ಸಿಯೊಳೊ. ಮುಖಪುಟ ವಿನ್ಯಾಸ ಮಾಡ್ದ ಮೋಹನ್ ಸೋನಾ, ಮುದ್ರಣ ಕಾರ್ಯಕ್ಕೆ ಸಹಾಯ ಮಾಡ್ದ ಡಾ. ಪೂವಪ್ಪ ಕಣಿಯೂರವ್ಕ ಪುಸ್ತಕ ಸಮಿತಿಯವ್ಕ ಅಕಾಡೆಮಿ ಸದಸ್ಯರಿಗೂ ನನ್ನ ಪ್ರೀತಿಯ ಕೃತಜ್ಞತೆನ ಸಲ್ಲಿಸ್ತಾವೊಳೆ.

ಕೊಲ್ಯದ ಗಿರೀಶ್
ಅಧ್ಯಕ್ಷರ್

ಮುನ್ನುಡಿ

ಬಡ್ಡಡ್ಕ ಅಪ್ಪಯ್ಯ ಗೌಡ್ರು ನನ್ನ ಅಜ್ಜಾಂತೇಳಿಕೆ ಬಾರೀ ಹೆಮ್ಮೆ ಆದೆ. ಪ್ರತಿಯೊಬ್ಬ ಮನುಷ್ಯಂಗೂ ಒಂದೊಂದು ಪ್ರತಿಭೆ ಇದ್ದದೆ. ಆದರೆ ಅಪ್ಪಯ್ಯ ಗೌಡ್ರು ಬಹುಮುಖ ಪ್ರತಿಭೆಯಿಂದ ಕೂಡಿದ ವ್ಯಕ್ತಿಯಾಗಿದ್ದೊ. ಅವು ಒಬ್ಬ ಕೃಷಿ ತಜ್ಞರಾಗಿದ್ದೊ. ಬೇಟೆಯ ಸಾಹಸಿಯಾಗಿದ್ದೊ, ವಿದ್ಯಾದಾನಿಯಾಗಿದ್ದೊ, ಆಯುರ್ವೇದ ಪಂಡಿತರಾಗಿದ್ದೊ, ಯಕ್ಷಗಾನ ಪೋಷಕರಾಗಿದ್ದೊ. ಊರಿಗೆ ಉಪಕಾರಿಯಾಗಿದ್ದೊ, ಜಾತ್ಯಾತೀತ ವ್ಯಕ್ತಿಯಾಗಿದ್ದೊ, ಜೇನು ಸಾಕುದರಲ್ಲಿ ಎತ್ತಿದ ಕೈಯಾಗಿದ್ದೊ. ಎಲ್ಲವುಕೆ ಬೇಕಾಗಿದ್ದೊ.

ನನ್ನ ಅಜ್ಜಿ ಆ ಕಾಲಲಿ ಸ್ವಲ್ಪ ವಿದ್ಯಾಭ್ಯಾಸ ಪಡ್‌ಕಂಡ್ ಕೃಷಿ ಕಾರ್ಯಲಿ ತೊಡಗಿಸಿಕಂಡೊ. ಆಗಿನ ಕಾಲಲಿ ಕಾಡು ತುಂಬಾ ಇತ್ತ್. ನಿತ್ಯ ಹರಿದ್ವರ್ಣ ಕಾಡ್, ಕಾಡ್ ತುಂಬಾ ಕಾಡ್ ಪ್ರಾಣಿಗ ವಾಸ ಇದ್ದೊ. ಆಗ ಜನಸಂಖ್ಯೆ ಕಡಿಮೆ. ಮನೆಗಳೂ ದೂರ ದೂರ. ಒಂದ್ ಮನೆಂದ ಇನ್ನೊಂದ್ ಮನೆಗೆ ಗರ್ನಾಲ್ ಹೊಡಿಸಿರೂ ಕೇಳ್‌ತಿತ್ತಲೆ. ಹೂಡುವ ಎತ್ತ್‌ಗ, ಹಾಲು ಕರೆಯುವ ಹಸ್‌ಗ ಕಂಚ್‌ಲ್‌ಲಿ ಕುಣಿಯುತ್ತಿದ್ದ ಕರುಗ, ಎಮ್ಮೆಗ, ಕೋಣಂಗ, ನಾಯಿಗ, ಕೊತ್ತಿಗ, ಕೋಳಿಗ, ಹಂದಿಗ ಎಲ್ಲವೂಇರುತ್ತಿದ್ದೊ.

ಗದ್ದೆ ಬೇಸಾಯ ಪ್ರಮುಖ ಕೃಷಿ ಆಗಿತ್ತ್. ಒಟ್ಟಿಗೆ ಅಡಿಕೆ, ತೆಂಗು, ಗೇರುಬೀಜ, ಒಳ್ಳೆ ಮೆಣಸ್, ಬಾಳೆ ಕೃಷಿನೂ ಮಾಡ್‌ತ್ತಿದ್ದೊ. ವರ್ಷಕ್ಕೆ ಮೂರು ಬೆಳೆ ತೆಗೆಯುತ್ತಿದ್ದ ಕಂಪ ಗದ್ದೆಗ. ಬೇಸಿಗೆಲಿ ಕುಮೇರಿ ಕಡ್ದ್ ಮಳೆ ಬಾಕೆ ಸುರು ಆಕನ ಗುಡ್ಡೆಲಿ ಉತ್ತುತ್ತಿದ್ದೊ. ಆ ಕಾಲದ ಗಮ್ಮತ್ತೇ ಬೇರೆ ಇತ್ತ್. ರೇಡಿಯೋ ಇಲ್ಲೆ. ಕರೆಂಟ್‌ಂತೇಳ್ರೆ ಗೊತ್ತೇ ಇತ್ತ್‌ಲೆ. ಆದರೂ ಜನ ನೆಮ್ಮದಿಲಿ ಇದ್ದೊ. ಕಾಯಿಲೆ ಬಾಕನ ಬೇರು, ಸೊಪ್ಪು, ತೊಗಟೆಗಳ ಮದ್ದಿಗಾಗಿ ಅವಲಂಬಿಸಿದ್ದೊ. ವಿದ್ಯಾಭ್ಯಾಸ ಮರೀಚಿಕೆಯಾಗಿದ್ದ ಕಾಲ ಅದ್. ಬ್ರಿಟೀಷರ ದಬ್ಬಾಳಿಕೆಯ ಕಾಲ. ಕಾಡು ಗುಡ್ಡೆಗಳ್‌ಲಿ ವಾಸ ಮಾಡ್ತಿದ್ದ ಕಾಲ ಅದ್. ವಿದ್ಯೆ ಇಲ್ಲದ ಅವಿದ್ಯಾವಂತರೇ ತುಂಬಿದ್ದ ಸಂದರ್ಭಲಿ ವಿದ್ಯೆಯ ಮಹತ್ವನ ತಿಳ್‌ಕಂಡಿದ್ದ ಅಪ್ಪಯ್ಯ ಗೌಡ್ರು 1949ನೇ ಇಸವಿಲಿ ಕೈಸಾಲೆ ಮಾಡಿ ಒಂದು ವಿದ್ಯಾಕೇಂದ್ರದ ಸ್ಥಾಪನೆಗೆ ನಾಂದಿ ಹಾಡ್ದೊ. ನಂತರ 1954ರಲ್ಲಿ ಸರಕಾರದ ಅನುಮೋದನೆ ದೊರಕಿಸಿಕಂಡ್ 'ಶ್ರೀ ರಾಮಕೃಷ್ಣ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ'ನ

ಕಟ್ಟಿದೊ. ಊರ್‌ನ ಜನಕ್ಕೆ ವಿದ್ಯಾಭ್ಯಾಸ ಮಾಡಿಕೆ ಅವಕಾಶ ಮಾಡಿಕೊಟ್ಟೊ. ಕಳೆದ 60 ವರ್ಷಂದ ಈ ಶಾಲೆ ಊರ್‌ನ ಮಕ್ಕಳಿಗೆ ವಿದ್ಯಾದಾನ ಮಾಡ್‌ತ್ತಾ ಉಟ್ಟು.

ಈ ಶಾಲೆಲಿ ಕಲ್ತವು ಇಂದ್ ಸಮಾಜಲಿ ಒಳ್ಳೆಯ ಸ್ಥಾನಲಿ ಒಳೊ. ಅಪ್ಪಯ್ಯ ಗೌಡ್ರು ಹುಚ್ಚುನಾಯಿ ಕಚ್ಚಿದವುಕೆ ಮದ್ದ್‌ಕೊಟ್ಟ್ ಅವರ ಬದುಕ್‌ಸ್ತಿದ್ದೊ. ಅವರ ಮದ್ದ್ ಬಾರಿ ಪರಿಣಾಮಕಾರಿಯಾಗಿತ್ತ್, ಹುಚ್ಚುನಾಯಿ ಕಚ್ಚಿದವುಕೆ ಔಷಧಿ ಇಲ್ಲದ ಆ ಕಾಲಲಿ ಅವು ದೇವರಾಂಗೆ ಕಾಪಾಡ್ತಿದ್ದೊ. ಅವು ಬಹುಮುಖ ಪ್ರತಿಭೆಯುಳ್ಳವಾಗಿದ್ದೊ. ಜೇನು ಸಾಕುವುದರಲ್ಲಿ ಎತ್ತಿದ ಕೈ. ಪುತ್ತೂರು ತಾಲೋಕ್‌ಲಿ ಜೇನು ಸಾಕುದರಲ್ಲಿ ಪ್ರಥಮ ಸ್ಥಾನಿಯಾಗಿದ್ದೊ. ಊರ್‌ಲಿ ಯಾರೇ ಕೋವಿ ತೆಗೆಯೋಕುಂತೇಳ್ರೆ ಅಪ್ಪಯ್ಯಗೌಡ್ರು ಅವರ ಒಟ್ಟಿಗೆ ಹೋಗಿ ಅವುಕೆ ಒಳ್ಳೆಯ ಕೋವಿ ತೆಗೆಯಕೆ ಸಹಾಯ ಮಾಡ್ತಿದ್ದೊ.

ನನ್ನ ಅಮ್ಮಂಗೆ ಹೃದಯ ಸಂಬಂಧ ಆರೋಗ್ಯ ಹದಗೆಟ್ಟ್ ಮಂಗಳೂರ್‌ನ ಆಸ್ಪತ್ರೆಲಿ ಶಸ್ತ್ರಚಿಕಿತ್ಸೆ ಮಾಡಿಸಿಕಂಡ್ ಮನೆಗೆ ಬಂದ್ ವಿಶ್ರಾಂತಿ ತೆಗೆದ್‌ಕಂಡ್ ಇರ್‌ಕನ ತುಂಬಾ ಬೇಸರ ಪಟ್ಟಿದ್ದೊ. ನನ್ನ ಕೈಲಿ ಮುಂದೆನ ಹಾಂಗೆ ಕೆಲಸ ಮಾಡಿಕೆ ಆಕಿಲ್ಲೆ. ನಾ ಪರಾವಲಂಬಿ ಆದೆ. ಎಂದೆಲ್ಲಾ ಬೇಸರ ವ್ಯಕ್ತಪಡಿಸಿಕಂಡ್ ಇರ್‌ಕಾಕನ ನಾ ಅವುಕೆ ನಿಂಗೆ ಬರೆಯಕೆ ಆದೆ. ನೀ ಅಪ್ಪನ ಅನುಭವನ ಅರೆಭಾಷೆಲಿ ಬರೀಂತ ಹೇಳ್ದೆ. ನನ್ನ ಅಮ್ಮ ಅವರ ಅಪ್ಪನ ಹಾಂಗೆ ಬಾರೀ ಸಾಹಸಿ ಹೆಂಗ್ಸ್. ಅಪ್ಪನ ಹಾಂಗೆ ಎಲ್ಲಾ ಕ್ಷೇತ್ರಲೂ ಕೈಯಾಡಿಸಿದ ಹೆಣ್ಣ್. ರಾಜಕೀಯವಾಗಿ, ಸಾಮಾಜಿಕವಾಗಿ, ಜೀವವಿಮಾ ಪ್ರತಿನಿಧಿಯಾಗಿ, ಕೃಷಿಕಳಾಗಿ, ಮಾತೆಯಾಗಿ, ಸಹಕಾರಿ ಧುರೀಣಳಾಗಿ ಊರಿನವುಕೆ ಬೇಕಾದವಳಾಗಿ ಜೀವನ ಸಾಗಿಸಿದವು. ಪಿತ್ರಾರ್ಜಿತ ಆಸ್ತಿಲಿ ಕೃಷಿ ಮಾಡಿಕಂಡ್ ಅಪ್ಪ ಕಟ್ಟಿಸಿದ ಶಾಲೆನ ಜವಾಬ್ದಾರಿ ಹೊತ್ತ್‌ಕಂಡ್ ಸಹಕಾರಿಯಾಗಿ ದುಡಿದ್‌ಕಂಡ್ ಇದ್ದವು. ಸುಳ್ಯ ತಾಲೂಕ್‌ಲಿ ಪ್ರಥಮವಾಗಿ ಜೀಪ್ ಓಡಿಸಿಕಂಡ್ ಬಡ್ಡಡ್ಕಂದ ಸುಳ್ಯಕ್ಕೆ ಬಂದ್‌ಅಡಿಕೆ ಮಾರಿ ಸಾಮಾನು ತೆಗೆದುಕೊಂಡ್ ಹೋಗುತ್ತಿದ್ದವು. ಸ್ವಾವಲಂಬಿಯಾಗಿ ಕಷ್ಟಗಳ ಎದುರಿಸಿಕಂಡ್ ಗಂಡ, ಮಕ್ಕಳಿಗೆ ಆಸರೆಯಾಗಿ ನಿಂತ್‌ಕಂಡ್ ವ್ಯವಹಾರ ಮಾಡ್ದವು. ಅವುಕೆ ಸುಮ್ಮನೆ ಕುದ್ರಿಕೆ ಆದುಲೆ. ಮನೆ ಸುತ್ತ ಹೂದೋಟ ಮಾಡಿ ಕೆಲಸದವುಕೆ ಕೆಲಸ ಹೇಳಿಕಂಡ್ ಸಮಾಜಕ್ಕೆ ಉಪಕಾರಿಯಾಗಿ ಜೀವನ ಸಾಗಿಸಿದವು. ಈಗ ವಯಸ್ಸಿನ ತೊಂದರೆಗೊಳಗಾಗಿ ಆರೋಗ್ಯ ಕಮ್ಮಿಯಾಕನ ಎಲ್ಲವೂ ಹೇಳಿಕಾಕನ ಸುಮ್ಮನೆ ಕಾಲ ಕಳೆಯಕೆ ಆಗದೆ ಚಡಪಡಿಸುತ್ತಿದ್ದೊ. ಆಗ ನಾ ಹೇಳ್‌ದ ಕೆಲಸನ ಶುರು ಮಾಡಿ ಅದರ ಮುಗ್ಸಿಯೊಳೊ.

ಡಾ॥ ಪ್ರಭಾಕರ ಶಿಶಿಲರ್ ಬರ್‌ದ ಬೇಟೆ ಕಥಾನಕನ ಅರೆಭಾಷೆಲಿ ಬರ್‌ದ್ ಅದಕ್ಕೆ ಬೇರೆ ರೂಪಕೊಟ್ಟ್. ಕೆಲವು ಹೊಸ ವಿವರಗ ಸೇರಿಸಿಕಂಡ್ ಈ ಪುಸ್ತಕ ಹೊರತಂದೊಳೊ. ಅರೆ ಭಾಷೆಲಿ ಬರಿಯೋದ್ ತುಂಬಾ ಕಷ್ಟ. ಆದರೂ ಬರ್‌ದೊಳೊ. ತಪ್ಪುಗ ಇರ್‌ದು. ಅದರ ಓದುವವು ಸರಿ ಪಡಿಸಿಕಂಡ್ ಇಳಿ ವಯಸ್ಸ್‌ಲಿ ಆರೋಗ್ಯ ಸರಿ ಇರದಿರ್‌ಕನ ಬರ್‌ದ ಈ ಪುಸ್ತಕನ ಎಲ್ಲವೂ ಓದೋಕೂಂತ ನಾ ಕೇಳಿಕಣೆ.

ಡಾ. ಎನ್.ಎ. ಜ್ಞಾನೇಶ್

ಸುಳ್ಯ.

ಬರ್‌ದವಳ ಮಾತ್

ಮನುಷ್ಯ ಹುಟ್ಟಿಕಾಕನ ಉಸಿರಿದ್ದದೆ, ಹೆಸರಿರ್‌ದುಲೆ ಆದರೆ ಸಾಯಕಾಕನ ಉಸಿರ್ ಇರುದುಲೆ.. ಹೆಸರ್ ಮಾತ್ರ ಉಳಿಯೋದ್ ಎಂದ್ ನಾಣ್ಣುಡಿ ಹೇಳ್‌ದೆ. ಪ್ರತಿಯೊಬ್ಬ ವ್ಯಕ್ತಿಯೂ ಉಸಿರ್ ಇರ್‌ಕನ ಮಾಡ್‌ದ ಒಳ್ಳೆ ಕೆಲಸ ಅವನ ಸಾಧನೆನ ಮಾತ್ರ ಮುಂದಿನ ಜನಾಂಗ ನೆನ್‌ಪಿಸಿಕೊಂಬದು. ನನ್ನ ಅಪ್ಪ ಬಡ್ಡಡ್ಕ ಅಪ್ಪಯ್ಯ ಗೌಡ್ರು ತುಂಬಾ ಹೆಸರ್ ಮಾಡಿದ ವ್ಯಕ್ತಿಯಾಗಿದ್ದೊ. ಅವರ ಜೀವನ ಒಂದು ದಂತಕಥೆಯಾಗಿ ಇಂದಿಗೂ ಜನರ ಮನಸ್ಸ್‌ಲಿ ಉಳ್‌ದುಟ್ಟು. ಕೃಷಿಕ ಕುಟುಂಬಲಿ ಜನಿಸಿ ಸ್ವಲ್ಪ ಮಟ್ಟಿನ ವಿದ್ಯಾಭ್ಯಾಸನ ಪಡ್‌ಕಂಡ್ ಎಲ್ಲವುಕೂ ಮಾದರಿಯಾಗಿ ಬದುಕಿದವು. ಸ್ವಂತಕ್ಕಾಗಿ ಹೆಚ್ಚಿಗೆ ಏನೂ ಮಾಡದೆ ಊರಿನ ಜನರ ಕಷ್ಟಗಳಿಗೆ ಆಸರೆಯಾಗಿ ನಿಂತವು.

1903ರಲ್ಲಿ ಹುಟ್ಟಿದ ಗೌಡ್ರು 1984ರವರೇಗೆ ಬದುಕಿ ಜನ ಮಾನಸಲಿ ತನ್ನ ವಿಶಿಷ್ಟ ಗುಣಗಳ್‌ಂದಾಗಿ ಗುರುತಿಸಿಕೊಂಡವು. ಸಣ್ಣ ಪ್ರಾಯಲೇ ಅಪ್ಪನ ಕೈಯಿಂದ ಬೇಟೆಯ ಅನುಭವ ಪಡ್‌ಕಂಡ್ ಅಪ್ಪ ಮನೆಲಿ ಇಲ್ಲದಿದ್ದ ಒಂದು ಸಂದರ್ಭದಲ್ಲಿ ಕೋವಿನ ಕೈಗೆ ತೆಕಂಡ್ ಹೂಡಿಕಾಕನ ಗದ್ದೆಗೆ ಬಂದ ಕಾಟಿನ ಗುಂಡು ಹೊಡೆದ್ ಬೀಳಿಸಿದವು. 14 ವರ್ಷ ಪ್ರಾಯಲಿ ಕಾಟಿನ ಹೊಡ್ದ ವೀರ ಅಪ್ಪಯ್ಯ ಗೌಡ್ರು, ಮುಂದೆ ಊರಿನ ಜನಂಗಳ, ದನ ಕರುಗಳ, ಸಾಕು ಪ್ರಾಣಿಗಳ ಕಾಡು ಪ್ರಾಣಿಗಳ್‌ಂದ ರಕ್ಷಣೆ ಮಾಡೋಕೂಂತ ಪಣತೊಟ್ಟು ಅಪ್ರತಿಮ ಬೇಟೆಗಾರನಾಗಿ ಎಲ್ಲರಿಂದಲೂ ಶಹಬಾಸ್ ಪಡ್‌ಕೊಂಡವು. ಬೇಟೆಯ ಒಟ್ಟಿಗೆ ಊರ್‌ನ ಮಕ್ಕಳ ವಿದ್ಯಾಭ್ಯಾಸದ ಮಹತ್ವನ ತಿಳಿದಿದ್ದ ಗೌಡ್ರು 1948ರಲ್ಲಿ ಒಂದು ಶಾಲೆ ಮಾಡಿ ಸಾವಿರಾರು ಹಳ್ಳಿ ಮಕ್ಕಳಿಗೆ ವಿದ್ಯಾಭ್ಯಾಸ

ಮಾಡಿಕೆ ಅನುಕೂಲ ಮಾಡಿಕೊಟ್ಟವು. ಬಡಜನರ ಹಿಂದುಳಿದವರ ಏಳಿಗೆಗಾಗಿ ದುಡ್‌ದವು.

ಹಳ್ಳಿಲಿ ವಾಸಿಸ್‌ತ್ತಿದ್ದ ಬಡಜನಕ್ಕೆ ರೋಗರುಜಿನ ಬಾಕನ ಅವುಕೆ ಬೇಕಾದ ಹಳ್ಳಿ ಮದ್ದ್ ಮಾಡಿ ಅವರ ಕಾಯಿಲೆನ ವಾಸಿ ಮಾಡ್‌ತ್ತಿದ್ದವು. ಹುಚ್ಚು ನಾಯಿ ಕಚ್ಚಿದವುಕೆ ಅವು ಕೊಡ್‌ತ್ತಿದ್ದ ಮದ್ದ್ ರಾಮಬಾಣವಾಗಿತ್ತ್. ಕೆಂಪುಗೆ ಮಂತ್ರಿಸಿ ನೀರು ಹೊಯಿತ್ತಿದ್ದೊ. ವಾತ, ಪಿತ್ತ, ಕಫಕ್ಕೆ ಅವು ಕೊಡ್‌ತಿದ್ದ ಮದ್ದ್ ಇಂದಿನ ಆಯುರ್ವೇದ ಪಂಡಿತರಿಗೂ ಕೊಡಿಕೆ ಆಕಿಲೆ.

ಕುಲಕಸುಬಾಗಿದ್ದ ಕೃಷಿಲಿ ಉತ್ತಮ ಜ್ಞಾನ ಗಳ್‌ಸಿ ಒಳ್ಳೆಯ ಕೃಷಿಕರಾಗಿ ಸಂಸಾರನ ಸಾಗಿಸಿದ್ದೊ. ಅವರ ತೋಟಗದ್ದೆಲಿ 15ಕ್ಕೂ ಹೆಚ್ಚಿನ ತರತರಹದ ಹಲಸಿನ ಹಣ್ಣ್‌ಗಳ ಬೆಳೆಸಿದ್ದೊ. ಜಂಬುನೇರಳೆ, ಪನ್ನೇರಳೆ, ಕುಂದ್ರಿ ಬಾಳೆ, ಕೆಂಪುಕೆಂದಾಳೆ, ಅರಸಿನ ಕೆಂದಾಳೆ, ಸಿಲೋನ್ ಅಡಿಕೆ, ಬೇರೆ ಬೇರೆ ತರಹದ ಮಾವಿನಹಣ್ಣ್. ಅವಳಿ ಹಲಸಿನ ಹಣ್ಣ್, ಎಲ್ಲಾ ತರಹದ ಮದ್ದ್‌ನ ಗಿಡಗಳ ಬೆಳಸಿದ್ದೊ. ಗದ್ದೆ ಬೇಸಾಯಲಿ ಬೇರೆ ಬೇರೆ ಜಾತಿಯ ಬತ್ತಗಳಾದ ರಾಜಕೈಮೆ, ಗಂಧಸಾಲೆ, ಐಆರ್8 ಮುಂತಾದ ಬತ್ತಗಳ ಬೆಳಿತ್ತಿದ್ದೊ. ಅವರ ಹಟ್ಟಿಲಿ 25 ರ್‌ಂದ 30 ನಡೆದನಂಗ, ಮನೆಲಿ 4ರ್‌ಂದ 5 ನಾಯಿಗ, 40ರ್‌ಂದ 50 ಕೋಳಿಗ ಇರ್‌ತ್ತಿದ್ದೊ. ವಿವಿಧ ಜಾತಿಯ ದಾಸವಾಳ ಗಿಡಗ, ಗುಲಾಬಿ ಗಿಡ, ಕಬ್ಬು, ಬಾಳೆ, ಯಾಲಕ್ಕಿ, ಲವಂಗ, ದಾಲ್ಚಿನಿ, ಜಾಯಿಕಾಯಿ, ಪೇರಳೆ, ಸೀತಾಫಲ, ಹಲವಾರ್ ಜಾತಿಯ ಬಣ್ಣದ ಎಲೆಗಳ ಗಿಡಗ, 40ರ್‌ಂದ 50 ಜೇನುಪೆಟ್ಟಿಗೆಗ ಇರ್‌ತ್ತಿದ್ದೊ.

ಯಕ್ಷಗಾನ, ತಾಳಮದ್ದಳೆ ಪ್ರೇಮಿಯಾಗಿದ್ದ ಗೌಡ್ರು ತನ್ನ ಶಾಲೆಲಿ ಪ್ರತಿವಾರ ತಾಳ ಮದ್ದಳೆ ಕಾರ್ಯಕ್ರಮ ಏರ್ಪಡಿಸ್‌ತ್ತಿದ್ದೊ. ಚೆಂಡೆ, ಮೃದಂಗ, ತಾಳ, ಜಾಗಟೆ, ಹಾರ್ಮೋನಿಯಂ, ಕೊಳಲು ಮುಂತಾದ ಸಂಗೀತ ಉಪಕರಣಗಳ ಹೊಂದಿದ್ದೊ. ಮನೆಲಿ ಬಾಳ್‌ಕತ್ತಿ, ಗುರಾಣಿ, ತೋಟೆ ಕೋವಿ, ಕೇಪುನ ಬೆಡಿ, ಚಿಲ್ಲ್, ಬೆಡಿಮದ್ದ್ ಯಾಗೊಳೂ ಇರ್‌ತಿತ್ತ್.

ಸಾಹಿತ್ಯ ಪ್ರೇಮಿಯಾಗಿದ್ದ ನನ್ನ ಅಪ್ಪ ಪತ್ರಿಕೆಗಳ ತರ್‌ಸಿ ಓದಿ ಅದರ ಸಂಗ್ರಹ ಮಾಡ್‌ತ್ತಿದ್ದೊ. ಒಂದನೇ ಮಹಾಯುದ್ಧ, ಎರಡನೇ ಮಹಾಯುದ್ಧ, ಸ್ವಾತಂತ್ರ ಸಂಗ್ರಾಮದ ವಾರ್ತೆಗಳಿದ್ದ ಪತ್ರಿಕೆಗ ನಮ್ಮ ಮನೆಲಿ ಇರ್‌ತಿತ್ತ್. ಹಳೇ ಕಾಲದ ವಸ್ತುಗಳ ಸಂಗ್ರಹ ಮಾಡ್‌ತ್ತಿದ್ದೊ. ಬ್ರಿಟೀಷರ ಕಾಲದ ಅಲಾರಂ, ರೇಡಿಯೋ, ಟಾರ್ಚ್ ಮುಂತಾದ ಅಪರೂಪದ ಸಲಕರಣೆಗಳ ಮಾಲೀಕರಾಗಿದ್ದೊ. 60 ವರ್ಷಗಳ ಪಂಚಾಂಗ ಪುಸ್ತಕಗಳ ಇಟ್ಟುಕೊಂಡಿದ್ದೊ. ಊರಿಗೆಯಾರೇ ಬರಲಿ ಮನೆಗೆ ಕರೆದ್‌ಕಂಡ್ ಹೋಗಿ ಊಟ ಹಾಕಿ ಕಳ್‌ಸ್‌ತ್ತಿದ್ದೊ. ಅವರ ಹಕ್ಕಲೆ ಇದ್ದದ್ದ್ 2 ಜೊತೆ ಅಂಗಿ ಮತ್ತ್ ಒಂದು ಪಂಚೆ, ಮತ್ತೆ ಒಂದು ಬಟ್ಟೆನ ಹೆಗಲು ಚೀಲ. ಅವರ ದುರಾಭ್ಯಾಸ ಎಂದರೆ ಬೀಡಿ ಸೇದುದು ಮಾತ್ರ. ಮದ್ಯಪಾನ ಜೀವನಲಿ ಒಮ್ಮೆಯೂ ಮಾಡ್‌ತ್ಲೆ. ಮಾಂಸಾಹಾರಿಯಾಗಿದ್ದವು ಅದರ ಬಿಟ್ಟ್ ಶುದ್ಧ ಸಸ್ಯಾಹಾರಿಯಾಗಿದ್ದೊ. ಅವರಲಿದ್ದ ಜ್ಞಾನ ಅಪಾರ. ಸಂಸ್ಕೃತ ಓದದಿದ್ದರೂ

ಸಂಸ್ಕೃತ ಶ್ಲೋಕ ಹೇಳ್‌ತ್ತಿದ್ದೊ. ಪೌರಾಣಿಕ ಕಥೆಗಳ, ರಾಮಾಯಣ, ಮಹಾಭಾರತ ನೀತಿ ಕಥೆಗಳ ಹೇಳ್‌ತ್ತಿದ್ದೊ. 50-60ರ ದಶಕಲಿ ಮಂಗಳೂರಿಗೆ ವಾರಕ್ಕೊಮ್ಮೆಯಾದರೂ ಬೇರೆ ಬೇರೆ ಕಾರಣಗಳಿಗಾಗಿ ಹೋಗುತ್ತಿದ್ದೊ. ಓದಿದವರ ಕಂಡರೆ ಅವುಕೆ ಬಹಳ ಪ್ರೀತಿ. ಅವುಕೆ ತುಂಬಾ ಗೌರವ ಕೊಡುತ್ತಿದ್ದೊ. ಎಲ್ಲಾ ಜಾತಿಯವರ, ಧರ್ಮದವರ ಪ್ರೀತಿಸುತ್ತಿದ್ದೊ. ಮರಾಠಿ ಜನಾಂಗ, ಮುಸ್ಲಿಂ ಜನಾಂಗ, ಬ್ರಾಹ್ಮಣರ್ ಬಂಟರ್‌ಗ, ಮಳೆಯಾಳಿಗ, ಕೃಷಿ ಕಾರ್ಮಿಕರ ಕಂಡರೆ ಅವುಕೆ ತುಂಬಾ ಪ್ರೀತಿ ಇತ್ತ್. ಕೂಲಿ ಕಾರ್ಮಿಕರ ಮನೆಯವರ ಹಾಂಗೆ ಕಾಂಬೊತ್ತಿದ್ದೊ. ಇಂತಹ ಹಲವಾರ್ ವಿಶಿಷ್ಟತೆಗಳ ಹೊಂದಿದ್ದ ನನ್ನ ಅಪ್ಪ ಅಪ್ಪಯ್ಯ ಗೌಡ್ರ ಮಹತ್ಸಾಧನೆಯಾದ ಬೇಟೆಯ ಬಗ್ಗೆ ಡಾ. ಚಿನ್ನಪ್ಪ ಗೌಡರು ಪ್ರಥಮವಾಗಿ ಉಜಿರೆಂದ ಬಂದ್ ಅವರ ಬೇಟೆನ ಬಗ್ಗೆ ಒಂದು ಲೇಖನ ಪ್ರಥಮವಾಗಿ ಪತ್ರಿಕೆಗಳಲ್ಲಿ ಬರೆದಿದ್ದೊ. ನಂತರ ಡಾ। ಪ್ರಭಾಕರ ಶಿಶಿಲರ್ ಅವರ ಬೇಟೆಗಳ ಬಗ್ಗೆ 'ಶಿಕಾರಿಯ ಸೀಳು ನೋಟ' ಎಂಬ ಪುಸ್ತಕ ಹೊರತಂದಿದ್ದೊ. ನಂತರ ಪುನಃ 'ಸದ್ದಡಗಿದ ಶಿಕಾರಿಯ ಕೋವಿ' ಎಂಬ ಪುಸ್ತಕ ಹೊರತಂದಿದ್ದೊ. ಇದೆಲ್ಲ ಬರವಣಿಗೆ ಕನ್ನಡ ಭಾಷೆಲಿಯೇ ಇತ್ತ್. 2014ರಲಿ ನಂಗೆ ಹೃದಯಕ್ಕೆ ಸಂಬಂಧಪಟ್ಟ ಕಪಾಟ ಬದಲಾವಣೆ ಆಪರೇಶನ್ ಆಗಿ ಮಂಗಳೂರಿನ ಆಸ್ಪತ್ರೆಯಿಂದ ಮನೆಗೆ ಬಂದ ಮೇಲೆ ಸುಮ್ಮನೆ ಕಾಲ ಕಳೆಯುತ್ತಾ ಮನೆಲಿ ಇರ್‌ಕನ ನನ್ನ ದೊಡ್ಡ ಮಂಜ ಜ್ಞಾನೇಶ್ ನನ್ನ ಹುರಿದುಂಬಿಸಿ ಅರೆಭಾಷೆಲಿ ಅಪ್ಪನ ಬೇಟೆನ ಅನುಭವನ ಬರಿ ಎಂದ್ ಹುರಿದುಂಬಿಸಿತ್. ಅದರಂತೆ ನಾನು ಡಾ। ಪ್ರಭಾಕರ ಶಿಶಿಲರ್ ಬರೆದ ಪುಸ್ತಕನ ಆಧಾರವಾಗಿರಿಸಿಕಂಡ್ ಇನ್ನೂ ಕೆಲವು ವಿವರಗಳ ಸೇರಿಸಿಕಂಡ್ ಈ ಬರವಣಿಗೆನ ಮುಗ್ಸಿಯೊಳೆ. ಬೇಟೆಯ ನಿಜ ಸಂಗತಿಗಳ ಬರೆಯೋದು ತುಂಬಾ ಕಷ್ಟ. ಆದರೂ ನಂಗೆ ಸಾಧ್ಯವಾದಷ್ಟೂ ಮಟ್ಟಿಗೆ ನಂಗೆ ಅಪ್ಪ ಹೇಳ್‌ದ ಅವರ ಅನುಭವಗಳ ಇಲ್ಲಿ ಬರ್‌ದೊಳೆ. ಆರೋಗ್ಯ ಸರಿಇಲ್ಲದಿರ್‌ಕನ ಬರ್‌ದ ಈ ಪುಸ್ತಕಲಿ ತಪ್ಪುಗಇರುವೊ. ಈ ಪುಸ್ತಕ ಬರೆಯಕೆ ನಂಗೆ ಸಹಾಯ ಮಾಡ್ದ ಡಾ। ಪ್ರಭಾಕರ ಶಿಶಿಲರ್, ತೇಜಕುಮಾರ್ ಬಡ್ಡಡ್ಕ, ನನ್ನ ಮಕ್ಕಳಾದ ಡಾ। ಜ್ಞಾನೇಶ್ ನಿಡ್ಯಮಲೆ, ಶ್ರೀಮತಿ ಜ್ಯೋತ್ಸ್ನಾ ಬಾಲಚಂದ್ರ, ಶ್ರೀ ಜಿತೇಂದ್ರ ನಿಡ್ಯಮಲೆ, ಡಾ। ಜಯದೀಪ್ ನಿಡ್ಯಮಲೆ, ತಿದ್ದಿಕೆ ಸಹಾಯ ಮಾಡ್ದ ಶ್ರೀ ಪ್ರಸನ್ನ ನಿಡ್ಯಮಲೆ, ಶ್ರೀ ಯಶವಂತ ಕುಡೆಕಲ್ಲು, ಕುಡೆಕಲ್ಲು ಮನೆತನದ ಮೊಕ್ತೇಸರರಾದ ಶ್ರೀ ಕುಡೆಕಲ್ಲು ವಾಸುದೇವ, ಟೈಪು ಮಾಡಿಕೊಟ್ಟ ಸುಳ್ಯ ವಿನೂ ಎಂಟರ್‌ಪ್ರೈಸರ್ಸ್ ಮತ್ತು ಗಣೇಶ್ ಪ್ರಿಂಟರ್ಸ್ ಇವರುಗಳಿಗೆ ಮತ್ತ್ ಈ ಕಥಾ ಸಂಕಲನನ ಅನುದಾನದ ಮೂಲಕ ಬಿಡುಗಡೆಗೊಳಿಸಿದ ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಮಡಿಕೇರಿ ಇದರ ಅಧ್ಯಕ್ಷರ್ ಮತ್ತೆ ಸಲಹಾ ಸಮಿತಿಗೆ ನನ್ನ ಹೃದಯ ತುಂಬಿದ ಕೃತಜ್ಞತೆಗ. ಈ ಪುಸ್ತಕನ ಕೊಂಡು ಓದುವ ಸಹೃದಯ ಓದುಗರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗೆ.

ನಿಡ್ಯಮಲೆ ವೇದಾವತಿ ಅನಂತ ಬಡ್ಡಡ್ಕ

ಅರ್ಪಣೆ

ನನ್ನ ಹುಟ್ಟಿಸಿ, ತಿದ್ದಿ, ತೀಡಿ ಬೆಳ್‌ಸಿದ ನನ್ನ ಅಪ್ಪ ದಿ। ಬಡ್ಡಡ್ಕ ಅಪ್ಪಯ್ಯ ಗೌಡ್ರುಗೆ, ಅಮ್ಮ ದಿ। ಕಮಲಾಕ್ಷಿಯವ್‌ಕೆ ಮತ್ತು ನನ್ನ ಕೈಹಿಡ್‌ದ್ ಬದ್‌ಕ್ ಕೊಟ್ಟ ನನ್ನ ಸಾಧನೆಗಳಿಗೆ ಪ್ರೇರಣೆ ಮತ್ತು ಕಾರಣರಾದ ನನ್ನ ಪತಿ ದಿ। ನಿಡ್ಯಮಲೆ ಅನಂತ ಲಾಯರ್ ಇವುಕೆ.



ದಿ। ಅಪ್ಪಯ್ಯ ಗೌಡ ಮತ್ತು ದಿ। ಶ್ರೀಮತಿ ಕಮಲಾಕ್ಷಿ



ದಿ। ನಿಡ್ಯಮಲೆ ಅನಂತ ಲಾಯರ್

ಬಡ್ಡಡ್ಕ ಅಪ್ಪಯ್ಯ ಗೌಡರನ್ನು ನೆನೆದು

ಸುಳ್ಯದಲ್ಲಿ ಅನೇಕ ಸಾಧಕರಿದ್ದರು. ಅವರಲ್ಲಿ **"ಬಡ್ಡಡ್ಕ ಅಪ್ಪಯ್ಯ ಗೌಡ"**ರು ಒಬ್ಬರು. ಕಳೆದ ಶತಮಾನದ ಉತ್ತರದ ಆದಿಯಲ್ಲಿ ಬಡ್ಡಡ್ಕದಲ್ಲಿ ಒಂದು ಶಾಲೆ ಸ್ಥಾಪಿಸಿ ಅನೇಕರ ಬಾಳಿಗೆ ಬೆಳಕಾದವರು ಅವರು. ಸುಳ್ಯದ ಶಿಲ್ಪಿ ಡಾ। ಕುರುಂಜಿ ವೆಂಕಟ್ರಮಣ ಗೌಡರು ಅಪ್ಪಯ್ಯ ಗೌಡರು ನನಗೆ ಮಾರ್ಗದರ್ಶಕರು ಎನ್ನುತ್ತಿದ್ದರು.

ಅಪ್ಪಯ್ಯ ಗೌಡರ ಬೇಟೆಯ ಸಾಹಸಗಳ ಕುರಿತು **"ಶಿಕಾರಿಯ ಸೀಳು ನೋಟ"** ಎಂಬ ಕೃತಿಯೊಂದನ್ನು ನಾನು 1985ರಲ್ಲಿ ರಚಿಸಿದ್ದೆ. ಅದನ್ನು ಆ ಬಳಿಕ **"ಸದ್ದಡಗಿದ ಶಿಕಾರಿಕೋವಿ"** ಎಂಬ ವಿಭಿನ್ನ ಕೃತಿಯಾಗಿ ರಚಿಸಿ ಮೂಲ ಕೃತಿಗೆ ಇನ್ನೊಂದು ಆಯಾಮ ನೀಡಿದೆ. ಎರಡೂ ಕೃತಿಗಳು ತುಂಬಾ ಜನಪ್ರಿಯತೆ ಪಡೆದವು.

"ಸದ್ದಡಗಿದ ಶಿಕಾರಿಕೋವಿ"ಯನ್ನು ಆಧಾರವಾಗಿಸಿಕೊಂಡು ಈಗ ಅಪ್ಪಯ್ಯ ಗೌಡರ ಸುಪುತ್ರಿ **"ಶ್ರೀಮತಿ ಯನ್.**

ವೇದಾವತಿ ಅನಂತ"ರು ಅರೆ ಭಾಷೆಯಲ್ಲಿ ಕೃತಿಯೊಂದನ್ನು ರಚಿಸಿದ್ದಾರೆ. ಅವರ ಉತ್ಸಾಹ ಮೆಚ್ಚುವಂತಹದ್ದು. ಆ ಮೂಲಕ ಅವರು ತಮ್ಮ ತೀರ್ಥರೂಪರನ್ನು ಮತ್ತೊಮ್ಮೆ ಜನಮಾನಸದಲ್ಲಿ ನೆಲೆಗೊಳಿಸಲು ಯತ್ನಿಸುತ್ತಿದ್ದಾರೆ. ಅಪ್ಪಯ್ಯ ಗೌಡರಂತಹ ಮಹಾನ್ ವ್ಯಕ್ತಿತ್ವಕ್ಕೆ ಹೀಗೆ ಗೌರವ ಸಲ್ಲುತ್ತಿರುವುದು ಶ್ಲಾಘನೀಯ.

ಅಪ್ಪಯ್ಯ ಗೌಡರು ಧನ ಮತ್ತು ಕೀರ್ತಿ ಆಕಾಂಕ್ಷಿಯಲ್ಲ. ಸಸ್ಯಹಾರಿ ಯಾಗಿದ್ದ ಅವರು ಕೃಷಿಯನ್ನು ಮತ್ತು ಜಾನುವಾರುಗಳನ್ನು ರಕ್ಷಿಸಲು ಮಾತ್ರವೇ ಬೇಟೆ ಆಡಿದವರು. ವಿನೋದಕ್ಕಾಗಿ ಖಗ-ಮೃಗಗಳನ್ನು ಕೊಂದವರಲ್ಲ. ಇಂದು ಕಾಡೇ ಇಲ್ಲ. ಅಳಿದುಳಿದ ಮೃಗ ಸಂಕುಲ ನಾಡಿಗೆ ಬರುತ್ತಿದೆ. ಈ ಸಂದಿಗ್ಧ ಕಾಲದಲ್ಲಿ ಅಪ್ಪಯ್ಯ ಗೌಡರ ಬೇಟೆಗೆ ಐತಿಹಾಸಿಕ ಮಹತ್ವವಿದೆ. ಇದು ಕಳೆದು ಹೋದ ಯುಗವೊಂದನ್ನು ಮತ್ತೆ ಬೆಳಕಿಗೆ ತರುವ ಪ್ರಯತ್ನವಾಗಿದೆ.

ಅಪ್ಪಯ್ಯ ಗೌಡರು ನನಗೆ ಪ್ರಾತಃ ಸ್ಮರಣೀಯರು. ಅವರಿಂದಾಗಿ ನಾನು ಸಾಹಿತ್ಯ ಲೋಕಕ್ಕೆ ಕಾಲಿಡುವಂತಾಯಿತು. ಅವರ ಸರಳತೆ, ಸಜ್ಜನಿಕೆ ಮತ್ತು ಪರೋಪಕಾರಗಳನ್ನು ನಾನು ಸದಾ ನೆನಪಿಸಿಕೊಳ್ಳುತ್ತಿದ್ದೇನೆ. ಎಲ್ಲಾ ಮೌಲ್ಯಗಳು ನಶಿಸುಸಿತ್ತಿರುವ ದುರಂತ ವರ್ತಮಾನದಲ್ಲಿ ಸಮೃದ್ಧ ಮೌಲ್ಯಯುತ ಜೀವನ ನಡೆಸಿ ಕಣ್ಮರೆಯಾದ ಅಪ್ಪಯ್ಯ ಗೌಡರು ಪದೇ ಪದೇ ನೆನಪಾಗಿ ಕಾಡುತ್ತಿರುತ್ತಾರೆ.

ಪೂರ್ವಜರನ್ನು ನೆನಪಿಸಿಕೊಳ್ಳುವ ಇಂತಹ ಕೆಲಸ ಇನ್ನಷ್ಟು ಜನರಿಂದ ಆಗಲಿ. ಅರೆಭಾಷೆಯಲ್ಲಿ ಇಂತಹ ಮೌಲ್ಯಯುತ ಕೃತಿಗಳು ಹೆಚ್ಚು ಹೆಚ್ಚು ಬರಲಿ ಎಂದು ಹೃತ್ಪೂರ್ವಕವಾಗಿ ಆಶಿಸುತ್ತೇನೆ.

ಇಳಿವಯಸ್ಸು ಮತ್ತು ಅನಾರೋಗ್ಯಗಳನ್ನು ಕಡೆಗಣಿಸಿ ವೇದಾವತಿ ಬಡ್ಡಡ್ಕರು ತನ್ನ ತೀರ್ಥರೂಪರಿಗೆ ಈ ಕೃತಿಯ ಮೂಲಕ ಗೌರವ ಸಲ್ಲಿಸಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ. ಈ ಕೃತಿಯನ್ನು ಎಲ್ಲರೂ ಓದಬೇಕಾಗಿ ವಿನಂತಿಸುತ್ತಿದ್ದೇನೆ.

ಡಾ| ಬಿ. ಪ್ರಭಾಕರ ಶಿಶಿಲ,
ಕಾಂತಮಂಗಲ

ಅನುಭವ ತೆನೆಗ

ಹುಟ್ಟಿದ ಮನೆ – ಮಾಡ್ದ ವಿದ್ಯಾದಾನ

1

ದಕ್ಷಿಣ ಕನ್ನಡ ಜಿಲ್ಲೆನ, ಸುಳ್ಯ ತಾಲೂಕುಲಿ ಕುಡೆಕಲ್ಲು ಎಂಬ ದೊಡ್ಡ ಮನೆತನ ಉಟ್ಟು. ಅದಕ್ಕೆ ಸೇರಿದಾಂಗೆ ಅವು ಪೂಜೆ ಮಾಡುವ ಮಹಾವಿಷ್ಣು, ಧರ್ಮದೈವ, ಪಾಷಾಣಮೂರ್ತಿ ದೈವದ ಕೋಲಕ್ಕೆ ಮಾರ್ಚ್ ತಿಂಗಳ ಅಖ್ಯೆರಿಲಿ ವರ್ಷಕ್ಕೊಮ್ಮೆ ವಿಶೇಷವಾಗಿ ಪೂಜೆ ಮಾಡುವ ಸಮಯಲಿ ಕೊಡಗ್‌ನ ಮೇಲೆಕುಡೆಕಲ್ಲ್‌ನ (ಮುತ್ತಾರ್ ಮುಡಿ) ಗ್ರಾಮದವೂ, ಆಲೆಟ್ಟಿಲಿರುವ ಕುಡೆಕಲ್ಲವೂ ಒಟ್ಟಿಗೆ ಸೇರಿ ನಡ್ಸವೆ. ಈ ಕಾರ್ಣಿಕದ ದೈವಗಳಿಗೆ ತಿಂಗಳಿಗೊಮ್ಮೆ ಸಂಕ್ರಮಣ ಭೂತದ ಕೋಲ ದಿನಗಳಲಿ ಪಾಷಾಣ ಮೂರ್ತಿಗೆ ವಿಶೇಷ ಪೂಜೆ ಉಟ್ಟು. ಮೇಲೆಕುಡೆಕಲ್ಲವೂ, ಊರ ಪರವೂರ ಜನನೂ ಬಂದ್ ಅವವು ಹೇಳಿಕಂಡ ಹರ್ಕೆಗಳ ತೀರ್ಸಿಕಂಡವೆ. 1800 ಇಸವಿನ ಅಖೇರಿ ಸಮಯಲಿ, ಕುಡೆಕಲ್ಲು ದೇವಯ್ಯ ಗೌಡ್ರು ಕುಟುಂಬದ ಯಜಮಾನರ್ ಆಗಿದ್ದೊ. ಅವರ ಹೆಣ್ಣು ಕ್ಯೊಕುಳಿ ಮನೆತನದ ಮುತ್ತಮ್ಮನವು. ಇವು ಕುಡೆಕಲ್ಲಿಂದ ಬಡ್ಡಡ್ಕಕೆ ಹೋಗಿ ನೆಲ್‌ಸಿದೊ. ಇವರ ದೊಡ್ಡ ಮಂಜ ಬಡ್ಡಡ್ಕ ರಾಮಯ್ಯ ಗೌಡ್ರು (ಅವರ ಮಂಜ ರವೀಂದ್ರ ಗೌಡ್ರ್ ಮತ್ತ್ ಶ್ರೀಮತಿ ಸಾವಿತ್ರಿಯವುಕೆ ಮೂರು ಜನ ಮಕ್ಕ. ಜವಹರ, ತೇಜಕುಮಾರ ಮತ್ತು ವಿದ್ಯಾಧರ ಬಡ್ಡಡ್ಕ.) ಇವ್ಕೆ ಎರಡು ವರ್ಷಕ್ಕೆ ತಮ್ಮ ಆಗಿ ಬಡ್ಡಡ್ಕ ಅಪ್ಪಯ್ಯ ಗೌಡ್ರು 1903ನೇ ಇಸವಿಲಿ ಹುಟ್ಟಿದೋ. ಅಪ್ಪ

ದೇವಯ್ಯ ಗೌಡ್ರು, ರಾಮಯ್ಯ ಗೌಡ್ರ ಕೊಡಗ್‌ಲಿ ಓದಿಸಿದೋ. ಅಪ್ಪಯ್ಯ ಗೌಡ್ರು ಆಲೆಟ್ಟಿ ರಾಮಣ್ಣ ಶಗ್ರಿತ್ತಾಯರ್ ಸುರುಮಾಡ್ದ ಶಾಲೆಗೆ ಕಳ್ಸಿದೊ. ಹಂಗೆ ಹಂಞ ವಿದ್ಯೆ ಕಲಿಯುವ ಹಾಂಗೆ ಅಂದ್‌ನ ಕಾಲಲಿ ಏರ್ಪಾಡು ಮಾಡಿದ್ದೊ. ಹೀಂಗಾಗಿ ಅಪ್ಪಯ್ಯ ಗೌಡ್ರಿಗೆ ಹಂಞ, ಇಂಗ್ಲೀಷ್, ಕನ್ನಡಲಿ ಒಳ್ಳೆ ಅಕ್ಷರ ಜ್ಞಾನ, ಯಕ್ಷಗಾನಲಿ ಕುಷಿ, ಸಂಸ್ಕೃತ ಶ್ಲೋಕ ಓದುದು ಹವ್ಯಾಸ ಇತ್ತ್.

ಪಂಚಾಂಗ ಪುಸ್ತಕಂದ ಹಂಞ ತಿಳ್ಕಂಬದು ಎಲ್ಲಾ ಅಭ್ಯಾಸ ಇತ್ತ್. ಹೀಂಗೆ ಎಲ್ಲಾ ಹಂಞ ಗೊತ್ತು ಮಾಡಿಕಂಡೊ. ಹಾಂಗಾಗಿ ಸ್ವಸಂತ್ರ ಸಿಕ್ಕಿಕೆ ಮುಂದೆ ಬಾತಿದ್ದ ಪೇಪರ್‌ಗ, ಕಲಿಯುಗ, ಲೋಕದ ರಹಸ್ಯ, ಆರೋಗ್ಯ ಚಂದ್ರಿಕೆ ರಾಷ್ಟ್ರಬಂಧು, ಮದರಾಸು ಸಮಾಚಾರ ಇವುಗಳ ತರಿಸ್‌ತಿದ್ದೊ. ಅವರ ಅಪ್ಪ ಬೇಡ ಬೇಡಂತೇಳ್ರು, ಬೆದ್‌ರ್‌ನ ಓಟೆಗೆ ಚೆರೆ ತುಂಬಿಸಿ ಇದರ ಹೊಡ್ಸಿಕೆ ಕಲ್ತ್‌ಕೊಂಡೊ. 1922ರಲಿ ಬರ್ದ ಗಿಡಮೂಲಿಕೆ ಮದ್ದ್‌ನ ಪುಸ್ತಕಗ, ಜ್ಯೋತಿಷ್ಯ ಪುಸ್ತಕಗ, ಯಕ್ಷಗಾನ ಪ್ರಸಂಗ ಪುಸ್ತಕಗ ಇವರ ಹಕ್ಕಲೆ ಇತ್ತ್. ಅವರ 12ನೇ ಪ್ರಾಯಲಿ ಗದ್ದೆಗೆ ಬಾತಿದ್ದ ಕಡೆನ ಹೊಡ್ಡ್‌ದ್ದರ್‌ಂದ ಸುರು ಆಗಿ ಎಷ್ಟೋ ಕಾಡು ಪ್ರಾಣಿಗಳ ಕೊಂದು ಜನಕ್ಕೆ ಉಪಕಾರ ಮಾಡಿಕೆ ಸುರುಮಾಡ್ದೋ. ಅಂದ್‌ನ ಕಾಲಲಿ ಬೇಟೆ ಆಡೋಕಾಗಿತ್ತ್. ಬೇಟೆ ಆಡುವವಂಗೆ ವೀರ ಸೈನಿಕನ ಸ್ಥಾನ ಸಿಕ್ಕ್‌ತ್ತಿತ್ತ್. ಬೇಟೆಗೆ ಸರಕಾರದ ಒಪ್ಪಿಗೆ ಇತ್ತ್. ಹುಲಿ ಹೊಡ್ದರೇ ಮರ್ಯಾದೆ ಹಣದ ರೂಪದಲ್ಲಿ ಸಿಕ್ಕ್‌ತಿತ್ತ್. ಎತ್ತ್‌ಗಳ ಮೇಲೆ ಹುಲಿ ಎಗರಿ ಬೀಳ್‌ತಿತ್ತ್. ದನಗಳ ಕೊಟ್ಟಿಗೆಗೆ, ಭತ್ತದ ಗದ್ದೆಲಿ ಹೂಡಿಕೆ ಕಟ್ಟಿದ ಎತ್ತ್‌ಗಳ ಮೇಲೆ ಹುಲಿ ಎಗರಿ ಬೀಳ್‌ತ್ತಿತ್ತ್. ಬೆಳೆದ ಬೆಳೆಗ ಕಾಡು ಪ್ರಾಣಿಗಳ್‌ಂದಾಗಿ ಹಾಳಾತಿತ್ತ್. ಪೂಮಲೆ ಗುಡ್ಡೆಲಿ ಸರಕಾರ ಸಾಗುವಾನಿನ ಬೆಳ್ಸಿಕೆ ಸುರು ಮಾಡ್ಕನ ಕಾಡೆಮ್ಮೆ, ಕಾಡು ಕೋಣಗ ಹಿಂಡ್, ಜಿಂಕೆಗ, ಕಾಡ್ ಹಂದಿಗ ನಟ್ಟ ಗಿಡಗಳ ಹಾಳು ಮಾಡತಿದ್ದೊಗಡ. ಆಗ ಇಂಗ್ಲೀಷರ್ ಕಾಗದ ಬರ್ದ್ ಇವರ ಕರ್ಸಿಕಂಬತಿದ್ದೊಗಡ. ಹೀಂಗೆ ಜನಕ್ಕೆ ಅವರ ಸಾಂಕುವ ಪ್ರಾಣಿಗಳಿಗೆ, ಬಿತ್ತಿದ ಬೆಳೆಗೆ ತೊಂದರೆ ಆಗದ ಹಾಂಗೆ, ರಕ್ಷಣೆ ಕೊಟ್ಟವುಕೆ ಇಂಗ್ಲೀಷರ್ ಕೊಡುವ ಮರ್ಯಾದೆನ ಕೊಡ್ತಿದ್ದೊಗಡ. ಗೌಡ್ರು ಜಾತಿಗೇಂತ ಮರ್ಯಾದೆ ಕೊಡದೆ ಮನುಷ್ಯತ್ವಕ್ಕೆ ಮರ್ಯಾದೆ ಕೊಡ್‌ತಿದ್ದೊ. ದಲಿತರ ಮನೆಗೆ ಹೋಗಿ ಅವರ ಮಕ್ಕಳ ಕರ್ಕಂಡ್ ಬಂದ್ ಶಾಲೆಲಿ ಒಳ್ಳೆ ಹೆಸರ್‌ಗಳ ಇಸಿ, ಶಾಲೆಗೆ ಸೇರಿಸ್‌ತಿದ್ದೊ. ಅವರ ಒಟ್ಟಿಗೆ ಬೇಟೆಗೆ ಬಾತಿದ್ದವು ಗಿರಿಜನಂಗ ಮತ್ತು ಮುಸ್ಲೀಂ ಜನಂಗಳೂ ಇರ್ತಿದ್ದೊ. ಈ ಮುಸ್ಲಿಂ ಜನಂಗ, ಪ್ರಾಣಿಗೆ ಗುಂಡು ಹೊಡ್ದ್ ಆದ ಮೇಲೆ ಅದ್ ಪೂರ ಸಾಯಕೆ ಮುಂದೆ ಅದ್ಕೆ ಚೂರಿ ಹಾಕಿ ಮಾಸನ ಉಪಯೋಗಿಸ್‌ತಿದ್ದೊ. ಹೀಗಾಗಿ ಕಾಟಿ ಬೇಟೆ, ಜಿಂಕೆ ಬೇಟೆಗೆ ಗೌಡ್ರು ಅವರ ಬಾಕೆ ಹೇಳಿ ಕಳ್ಸ್‌ತಿದ್ದೊ. ಸುಳ್ಯದ ಬಿಸ್ಮತ್ ಮಾಡುವ ಅದ್ರಾಮಿಚ್ಚ, ಹಾಜಿ ರೆಹಮಾನ್, ಹಾಜಿ ಕಟ್ಟೆಅಬ್ದುಲ್ (ಕಟ್ಟೆಕ್ಕಾರ್‌ಸ್‌ರವರ ಅಜ್ಜ) ಕಟ್ಟೆ ಅಬೂಬಕ್ಕರ್ ಹಾಜಿ, ಪೆರಾಜೆಯಿಂದ ಪೇರೆ ಅಬ್ದುಲ್ಲ, (ಸುಳ್ಯ ಮಹಮ್ಮದ್ ಹಾಜಿಯವರ ಅಪ್ಪ (ದುಮ್ಮಿಚ್ಚ), ಕುಂಬ್ಳೆ ಖಾದಿರಿ ಬ್ಯಾರಿ,

ಅಸೆನಾರ್, ಮೂಸೆ. ಅವು 1945ನೇ ಇಸವಿ ಮಾರ್ಚ್ ತಿಂಗಳ್‌ಂದ ಮಾಂಸಹಾರ ಬುಟ್ಟಿದ್ದೊ. ಹಾಂಗಾಗಿ ಮುಸ್ಲಿಂ ಭಾಂದವರು ಬಾಕೆ ಆಕನ ನಮ್ಮ ಮನೆಲಿ ಅವುಕೆ ಚಾ ತಿಂಡಿ ತಿಂಬಕೆ ಆತಿತ್. ಆಗಿನ ಗಿರಿಜನಾಂಗದವು ನಾಯ್ಕಂಗಂತ ಹೆಸರಿನ ಮುಂದೆ ಉಪಯೋಗಿಸಿದವರ ಕಂಡರೆ ಬಾರಿ ಇಷ್ಟ. ಹಾಂಗೆ ತಲೆಪಳ ಐತ್ತು ನಾಯ್ಕರ್, ಕೂರ್ನಡ್ಕ ರಾಮಣ್ಣನಾಯ್ಕರು, ಬಡ್ಡಡ್ಕ ಸಿಂಗ ನಾಯ್ಕರು, ತಿಮ್ಮನಮೂಲೆ ವೆಂಕಪ್ಪ ನಾಯ್ಕರು, ಬಡ್ಡಡ್ಕ ಮಾರ್ಡು ನಾಯ್ಕ ಇವರಂತ ಸುಮಾರು ಜನ ಎಲ್ಲ ಅಪ್ಪನ ಸಹಪಾಠಿಗ ಆದೊ. ಅವುಕೆ ಕೆಲವು ಜನ ನಾಯ್ಕಂಗಳೆ ಗೌಡ್ರ ಕುಟುಂಬಂತೂ ಹೇಳ್ತೊತಿದ್ದೊಗಡ. ಗುಂಡ್ಯ ಬೊಳ್ಳು ಕುಂಞಯವರ ಅಪ್ಪ ಚೋಯಂಬಣ್ಣನವು ಅಪ್ಪನ ನಿತ್ಯದ ಬೇಟೆಗೆ ಕೂಟ ಆಗಿದ್ದದ್ರ್‌ರ ನಾ ಇಲ್ಲಿ ಬರೆಯೊಕಾದೆ. ಭಟ್ಟರ್‌ಗಳ ಮೂರು ಹೆಸರ್ ಪ್ರತೀ ಕಥನಗಲ್ಲ್ ಬಂದದೆ. ಆಲೆಟ್ಟಿ ರಾಮಣ್ಣ ಶಗ್ರಿತ್ತಾಯರ್ – ನೆಡ್ಚಿಲ್ ಈಶ್ವರ ಭಟ್ರು (ಪಟೇಲರ್)– ಬಡ್ಡಡ್ಕ ರಾಮಚಂದ್ರ ಕಲ್ಲೂರಾಯರ್ ಹೆಸರ್‌ಗ ಅಪ್ಪನ ಜೀವನಲಿ ಮುಖ್ಯ ಹಿರಿಯವು ಆಗಿದ್ದೊ. ತನ್ನ ಸೇವೆನ ಬೇಟೆ ಮುಖಾಂತರ ಮಾಡಿ ಜನರ ಕಾಪಾಡಿ ಅವರ ಮನಸ್ಸ್‌ಲಿ ನಿಂತೊ. ಕೆಟ್ಟ, ಅಪಾಯ ಪ್ರಾಣಿಗಳಿಗೆ ಅಡಂಗಿ ಕುದ್ದ್ ಹೊಡೆವ ಅಭ್ಯಾಸ ಅವುಕ್ಕೆ ಇತ್ತ್‌ಲ್ಲೆ. ಏನಿದ್ದರು ಹುಡುಕಿ ಸತ್ತರೂ ಆತ್, ಬದುಕಿದರೂ ಆತೂಂತ ಹುಲಿಗಳಿಗೆ ಎದ್‌ರೆದುರೇ ಗುಂಡು ಹೊಡ್ದವು. ಪ್ರಾಣಿಗಳ ಎಬ್ಬಿಸಿ, ಕುದ್ದ ಹಕ್ಕಿನ ಹಾರಿಸಿ ಗುಂಡು ಹೊಡಿತಿದ್ದೋಂತ ಇನ್ನೂನು ಹೇಳುವ ಜನ ಒಳೊ. ಒಂದೇ ಸಮಯಲಿ ಎರಡು ಹುಲಿಗಳಿಗೆ, ಜೋಡಿ ಕಾಟಿಗಳಿಗೆ, ಜೋಡಿ ಹಂದಿಗಳಿಗೆ, ಒಂದಕ್ಕೆ ಈಡಿಸಿರೆ ಇನ್ನೊಂದರ್‌ಂದ ಅಪಾಯ ಅಂತ ಗೊತ್ತಿದ್ದರೂ ಕಣ್ಣು ಮುಚ್ಚಿ ಬುಡಿಕನ ಒಟ್ಟೊಟ್ಟಿಗೆ ಗುಂಡ್ ಹೊಡ್ದ್ ಸಾಯಿಸಿದೊ. ಹಾರುವ ಕಾಡು ಕೋಳಿಗೆ, ಬಾನಲಿ ಹಾರುವ ಪಾರಿವಾಳಕ್ಕೆ ಈಡಿಸಿ ಬೀಳ್ಸಿ ಶಿಪಾರಸ್ ತೆಕೊಂಡೊ. ಸೂಕ್ಷ್ಮಾತಿ ಸೂಕ್ಷ್ಮಲಿ ಪಂಚೇಂದ್ರಿಯಂದ ಹೆಚ್ಚಾಗಿದ್ದ ಒಂದು ವಿಶೇಷ ಶಕ್ತಿಲಿ ಎಂತ ಸಂದರ್ಭಲಿನೂ ಅವರ ಅವೇ ಹೇಂಗೆ ಕಾಪಾಡಿಕಣ್ತಿದ್ದೋಂತ ಕೇಳುವವುಕೆ ಆಶ್ಚರ್ಯ ಆಕು. "ಪಂಚಭೂತಗಳ್‌ಂದ ಸುತ್ತಿಕಂಡಿರುವ ಪ್ರಕೃತಿ ಶಕ್ತಿ ಅಪ್ಪನ ಅಪ್ಪಂದ ನೆತ್ತರ್‌ಲೇಬಂದ ಆ ಶಕ್ತಿ, ಮತ್ತ್ ದೇವರ ದಯ ಅವರ ಕಾಪಾಡ್‌ತ್ತಿತ್ತ್‌ಂತ ಕಂಡದೆ.

ಇವು ಬೇಟೆ ಮಾಡ್‌ತಿದ್ದ ವಿಷಯ ಅಂದ್‌ನ "ರಾಷ್ಟ್ರಬಂಧು" ಪೇಪರ್‌ಲಿ ಬಾತಿತ್. 1980ರ ಸಮಯಲಿ ಅಪ್ಪಯ್ಯ ಗೌಡ್ರು ಬೆಡಿ ಮಾರಾಟ ಮಾಡುವೇಂತ ಸುದ್ದಿ ಹಬ್ಬಿ ಉಜಿರೆನ ಡಾ. ಚಿನ್ನಪ್ಪ ಗೌಡ್ರು ಒಮ್ಮೆ ನಮ್ಮ ಮನೆ ಬಡ್ಡಡ್ಕಕ್ಕೆ ಬಂದಿದ್ದೊ. ಅಪ್ಪನ ಹಕ್ಕಲೆ ಬೇಟೆನ ಹಂಞ ವಿಷಯಗಳ ಕೇಳಿ ತಿಳ್ಕಂಡ್ ಸುರೂಲಿ 1981ರ ನವೆಂಬರ್ ತಿಂಗಳ "ಸಂತೋಷ"ಂತ ಹೆಸರ್‌ನ, ತಿಂಗಳಿಗೆ ಒಮ್ಮೆ ಬಿಡ್‌ಗಡೆ ಆವ ಪುಸ್ತಕಲಿ "ಶಿಕಾರಿಯ ಸೀಳುನೋಟ" ಎಂದು ಉಲ್ಲೇಖ ಕೊಟ್ಟ್ ಒಂದು ಬರವಣಿಗೆ ಬರ್ದದ್ ಪುಸ್ತಕಲಿ ಬಾತ್. ಅದರ್‌ಂದ ಮುಂದೆ, ಪುತ್ತೂರ್ ಕೆದಂಬಾಡಿ ಜತ್ತಪ್ಪರೈಗ ಬರ್ದ– "ಈಡೊಂದು

ಹುಲಿಯೆರಡು" ಮತ್ತ್ "ಬೇಟೆಯ ನೆನಪುಗಳು" ಎಂಬ ಹೆಸರ್‌ನ ಬೇಟೆನ ವಿಷಯ ಬರ್ದ ಎರಡು ಪುಸ್ತಕ ಬುಡುಗಡೆ ಆಗಿ ಸುಳ್ಯದ ಎಲ್ಲಾ ಓದುವವರ ಕೈಗೆ ಸೇರಿದ್ದೊ.

ಒಂದು ದಿನ ನೆಹರೂ ಮೆಮೊರಿಯಲ್ ಕಾಲೇಜ್‌ಲಿ ಮಾಣಿಬೆಟ್ಟ್ ರಾಧಾಕೃಷ್ಣನವು ಡಾ. ಪ್ರಭಾಕರ ಶಿಶಿಲರ ಒಟ್ಟಿಗೆ ಮಾತಾಡ್‌ಕನ ಬಡ್ಡಡ್ಕಲಿ ಹುಲಿ ಅಪ್ಪಯ್ಯ ಗೌಡ್ರುಂತ ಒಬ್ಬ ಒಳೊ. ಭಾರೀ ಹುಲಿ ಹೊಡ್ದವ್ರೂಂತ ಹೇಳ್ದೊ ಗಡ. ಅದರ ಕೇಳ್ದ– ಶಿಶಿಲರ್ ಬಡ್ಡಡ್ಕಕ್ಕೆ ನಡ್ಕಂಡ್ ಬಂದ್, ಗೌಡ್ರು ಹೇಳ್ದ ಬೇಟೆನ ವಿಷಯಗಳ ಕೇಳಿಕಂಡ್, ತಾಳ್ಮೆಂದ ಅವು ಹೇಳ್ದರ ಬರ್ಕಂಡ್, ಗೌಡ್ರ ಬೇಟೆ ಸ್ವಾರಸ್ಯಗ ಶಿಶಿಲರ ಎದುರೇ ನಡ್ದ ಹಾಂಗೆ ಗ್ರಹಿಸಿಕಂಡ್, ನಡ್ದ ಸಂಗತಿಗಳ ಭಾರಿ ಭಾರಿ ಪೊರ್ಲುಲಿ ತುಂಬ ಜಾಗ್ರತೆಲಿ ತೆಕಂಡ್ ಬರವಣಿಗೆ ಮಾಡಿ ಪುಸ್ತಕಲಿ ಇರುದರ ಇದ್ದ ಹಾಂಗೆ ಬರ್ದೊ. ಆಗ ದುಡ್ಡ್ ಇಲ್ಲದ ಕಾಲ. ರಬ್ಬರೂ ಇತ್ತ್‌ಲ್ಲೆ, ಅಡಿಕೆಗೆ, ಗೇರುಬೀಜಕ್ಕೆ ಆಗ ರೇಟೂ ಇತ್ತ್‌ಲ್ಲೆ. ಶಿಶಿಲರು ಪುಸ್ತಕ ಅಚ್ಚು ಹಾಕಿ ಮಾಡೊಮ್ಮೊಂತ ಹೇಳ್ಕನ ಅಪ್ಪ ಅಂಥ ದುಡ್ಡು ಇದ್ದರೆ ನಾನು ಅದರ ಬದಲ್ ಶಾಲೆಗಾಗಿ ಖರ್ಚು ಮಾಡುವೇಂತ ಹೇಳ್ದೊಗಡ.

ಮತ್ತೆ 1984ನೇ ಇಸವಿಲಿ ಆಗಸ್ಟ್ 2ಕ್ಕೆ ತೀರಿಹೋದೊ. 1985ರ್ಲಿ ಬಡ್ಡಡ್ಕ ಪ್ರಕಾಶನದವರ ಜವಾಬ್ದಾರಿಕೆಲಿ ಸುರುನ ಅಚ್ಚ್ ಹಾಕ್ಸಿದೊ.

ಅದರ ಕೆದಂಬಾಡಿ ಜತ್ತಪ್ಪ ರೈಗಳೇ ಬುಡುಗಡೆ ಮಾಡಿದೊ. 2007ರ್ಲಿ ಅಪ್ಪನ ನೆನ್ಪುಲಿ ನಾನ್ ಬಡ್ಡಡ್ಕಲಿ ಒಂದು ರಂಗಮಂದಿರ ಕಟ್ಟಸಿದ ಲೆಕ್ಕಲಿ ಶಾಲಾ ಕಾರ್ಯಕ್ರಮ ಮಾಡಿಕನ, ಸುಳ್ಯದ ಜನ ಎಲ್ಲ ರೀತಿಲಿನೂ ಉದ್ಧಾರ ಆಕೆ ಕಾರಣ ಆದ, ನಮ್ಮ ಕುರುಂಜಿ ವೆಂಕಟ್ರಮಣ ಅಣ್ಣನವು ಅಮೃತಕ್ಕೆ ಸಮ ಆಗಿದ್ದ ಅವರ ಕೈಲಿ "ಸದ್ದಡಗಿದ ಶಿಕಾರಿ ಕೋವಿ" ಹೆಸರ್‌ನ ಪುಸ್ತಕ ಬುಡುಗಡೆ ಮಾಡಿದೊ. ಹೀಂಗೆ ಅದ್ ಜನರಿಗೆ ಅರ್ಪಣೆ ಆತ್.

ಗೌಡ್ರು ಹನ್ನೆರಡ್ ವರ್ಷ ಪ್ರಾಯ ಆಕನ ಸಂದರ್ಭ ಹೊಂದಿಕಂಡ್ ಗದ್ದೆಗೆ ಬಾತಿದ್ದ ಕಡೆನ ಹೊಡ್ತ್ ಸುರು ಮಾಡ್ದ ಬೇಟೆ, ಸುಮಾರು 1950ರ ಮುಟ್ಟ ಮುಂದುವರ್ಕಂಡ್ ಬಾತ್. ರಾಮಣ್ಣ ಶಗ್ರಿತ್ತಾಯರ್ ಗೌಡರ ಬಾಲ್ಯಲಿ ಆಲೆಟ್ಟಿಲಿ ಶಾಲೆ ಮಾಡಿ ಅಪ್ಪಯ್ಯ ಗೌಡರ ವಿದ್ಯೆಗೆ ಕಾರಣ ಆದೊ. ಅವರ ಮೇಲೆ ಭಕ್ತಿ ಇಸಿದ ಇವ್‌ಕೆ ಬಡ್ಡಡ್ಕಲಿ ಶಾಲೆ ಕಟ್ಟಿಸೊಕು, ಮನುಷ್ಯರ ಎಲ್ಲ ಏಳಿಗೆಗೆ ಮುಖ್ಯವಾಗಿ ಬೇಕು. ನಾ ಕಲ್ತಂಗೆ ಎಲ್ಲವೂ ಕಲಿಯೋಕು. ಒಂದು ಶಾಲೆ ಬೇಕೂಂತ ಅನ್ಸಿದ್. ಸುತ್ತಮುತ್ತನವರ ಸೇರ್ಸಿಕಂಡ್ – 1950ನೇ ಇಸವಿಲಿ ಸೋಗೆ ಮಾಡ್‌ನ ಕೈ ಸಾಲೆ ಒಂದು ಸುರು ಮಾಡಿದೊ. ಗಬ್ಬಲ್ಕಜೆ ಕೊರಗಪ್ಪನವರ್ ಮಾಸ್ಟ್ರ್ ಆಗಿ, ಶಾಲೆಲಿ ಕಲ್ಸಿಕೆ ಅವುಕೆ ಸಂಬಳ ವಂತಿಗೆ ಹಾಕಿ ಕೊಡ್ತಿದ್ದೊ. 1954ರ ಇಸವಿಲಿ ಸರಕಾರದ ಒಪ್ಪಿಗೆ ತಕಂಡ್ ಅವರ ಕ್ರಮದ ಪ್ರಕಾರ ಅಂದ್‌ನ ಕಾಲಲಿ ಮಾಯ್ಪಾಡಿಲಿ ಕಲ್‌ಸುವ ತರಬೇತಿ ಪಡ್ದಿದ್ದ ಕುದ್ಕುಳಿ ವಾಸಪ್ಪ ಗೌಡ್ರು ಶಾಲೆಲಿ ಮಕ್ಕಳಗೆ ಪಾಠ ಕಲ್ಸಿಕೆಂತ ಸೇರಿಕಂಡೊ. ಒಬ್ಬನೆ ಮಾಸ್ಟ್ರು ಕೈಶಾಲೆ ನಡೆಸಿದೊ. ಅವುಕೆ ಸರಕಾರದ

ಸಂಬಳ ಸಿಕ್ಕ್‌ತ್ತಿತ್ತ್. ಸರಕಾರದ ಕಾನೂನಿಗೆ ಹೊಂದಿಕಂಡ್ ಒಂದು ಒಳ್ಳೆ ಕಟ್ಟಡ ಆಕಾಗಿತ್ತ್. ಅದಕ್ಕೆ ದುಡ್ಡು ಬೇಕಾದ್ದರ್‌ಂದ ಸಾಲ ಮಾಡಿಕೆ ಈಗ ಕೆ.ವಿ.ಜಿ ಹೈಸ್ಕೂಲ್‌ಲಿ ಇಂಗ್ಲೀಷ್ ಮೇಡಂ ಆಗಿರುವ ಶಾಂತಾ ಬೈಪಡಿತ್ತಾಯರ ಯಜಮಾನ್ರು ಆಲೆಟ್ಟಿ ಬಾಲಕೃಷ್ಣ ಬೈಪಾಡಿತ್ತಾಯರ ಅಪ್ಪ ಶಂಕರನಾರಾಯಣ ಬೈಪಡಿತ್ತಾಯರಿಗೆ ಅಪ್ಪಯ್ಯ ಗೌಡ್ರು ಆಸ್ತಿ ಅಡವು ಮಾಡಿ ಹಣ ತೆಕಂಡ್ ಶಾಲೆ ಕಟ್ಟಡಕ್ಕೆ ದುಡ್ಡು ಖರ್ಚು ಮಾಡ್ದೋ.

ಸುಳ್ಯದ ಕಮಲಾಕ್ಷಿ ಟೀಚರ ಅಣ್ಣ ಸುಳ್ಯ ಗ್ರಾಮ ಸೇವಕರಾಗಿದ್ದ ಮಹಾಬಲ ಶೆಟ್ಟಿರ್ ಆಫೀಸ್ ಕೆಲ್ಸಗಳಿಗೆ ತುಂಬಾ ಸಹಾಯಮಾಡ್ದೊ. 'ರಾಮ' 'ಕೃಷ್ಣ'ಂತ ಬಂಗ ಬಂದ್ ಮಾಡ್ದ ಈ ಶಾಲೆಗೆ "ರಾಮಕೃಷ್ಣ" ಎಂಬ ಹೆಸರ್ ಇಸಿದೊ. ಈ ಶಾಲೆ ಮುಂದುವರ್ಕಂಡ್ ಬಂದ್ ಈಗಳೂ ನಾ ಏನ್ ಕಮ್ಮಿ ಇಲ್ಲೆಂತ ತಲೆಎತ್ತಿ ನಿತ್ತುಟ್ಟು. ಸುರುನ ದಿನಗಳ್ಲಿ 450 ಮಕ್ಕ ಬರಕಲಿವವು, ಎಂಟು ಮಂದಿ ಮಾಷ್ಟ್ರುಗ ಪಾಠ ಕಲಿಸಿಕೆ ಇದ್ದ ಶಾಲೆ ಆಗಿತ್ತ್. ಇಂಥ ಶಾಲೆನ ಹುಟ್ಟು ಹಾಕಿದ ಇವುಕೆ ಗಂಡು ಮಕ್ಕ ಇಲ್ಲದಿದ್ದರೂ ಶಾಲೆಗೆ ಬರುವ ಮಕ್ಕ ಎಲ್ಲವೂ ಅವರ ಮಕ್ಕಳಂತೇಳಿ ಪ್ರೀತಿಸುತಿದ್ದೊ. ಸುಳ್ಯದ ಹೈಸ್ಕೂಲ್‌ಲಿ ಆಗ ಮಾಸ್ಟ್ರು ಆಗಿದ್ದ ಶೀಂಟೂರು ನಾರಾಯಣ ರೈಯವೂ (ಸವಣೂರು ಸೀತಾರಾಮ ರೈಯವರ ಅಪ್ಪ) ಅಪ್ಪಂಗೆ ಬೇಕಾದ ಸಲಹೆ ಸೂಚನೆ ಕೊಡ್ತಿದ್ದೊ. ಗೌಡ್ರು ಮೂಲವ್ಯಾಧಿ, ಸರ್ಪಸುತ್ತು, ಚರ್ಮ ಕಾಯಿಲೆಗಳಿಗೆ ಮದ್ದು ಕೊಡ್ತಿದ್ದೊ. ವಿಶೇಷ ಆಗಿ ಹುಚ್ಚುನಾಯಿ ಕಚ್ಚಿದವುಕ್ಕೆ ಮದ್ದು ಕೊಡ್ತಿದ್ದದ್ದ್ ಅವರ ಹೆಗ್ಗಳಿಕೆ. ಇದ್ಕೆ ಎಷ್ಟೋ ಉದಾಹರಣೆ ಒಳೋ. ಒಂದು ಸಂದರ್ಭನ ಹೇಳಿಕೆ ಇಷ್ಟಪಟ್ಟನೆ.

1982ನೇ ಇಸವಿಲಿ ಒಮ್ಮೆ ಕೋಲ್ಚಾರ್‌ನ ಪಾಲಾರ್ ಗುಂಡ್ಯ ಬೆಳ್ಯಪ್ಪನವುಕ್ಕೆ ಕುದ್ಕ (ನರಿ) ಕಚ್ಚಿತ್ತ್. ಸರಕಾರಿ ಆಸ್ಪತ್ರೆಲಿ ಅವುಕೆ ಹುಚ್ಚು ಕುದ್ಕ ಕಚ್ಚಿದಕ್ಕೆ ಸೂಜಿಮದ್ದ್ ಕೊಟ್ಟ್ ಆಗಿತ್ತ್. ಆದರೂ ಬೆಳ್ಯಪ್ಪನವುಗೆ, ರಾತ್ರೆ ನಿದ್ದೆ ಬಾರದೆ ಇದ್ದ್ ಬೆನ್ನ್‌ನ ನರ ತಲೆಮುಟ್ಟ ಎಳ್ತ ಶುರು ಆಗಿ ಅವ್ಕೆ, ಸೂಜಿ ಮದ್ದ್‌ನ ಮೇಲೆ ಸಂಶಯ ಆಗಿ, ಅವರ ಮಂಜ ಸುಂದರ ಗೌಡ್ರು ಅಪ್ಪಯ್ಯ ಗೌಡ್ರ ಹಕ್ಕಲೆ ಬಂದೊ. ವಾಹನ ಹೋಗದ ದಾರಿಲಿ ಬೆನ್ನ್‌ಲಿ ಹೊತ್ತುಕಂಡು ಹೋಗಿ ಮದ್ದು ಕೊಡ್ಸಿದೋ. ಈ ಮದ್ದ್ ಕುಡಿಯಕನ, ಜಲಭಯ ರೋಗದ (ನೀರ್‌ನ ಕಾಂಬಕನ ಹೆದರುದು), ಕ್ರಿಮಿಗ ಜೀವಲಿ ಇದ್ದರೆ ಒಮ್ಮೆಗೆ ಹುಚ್ಚು ಎಳ್ಗಿದೆ. ಸ್ವಲ್ಪ ಹೊತ್ತು ಹುಚ್ಚು ಹಿಡ್ದಾಕನ ತಲೆಗೆ ಮಜ್ಜಿಗೆ ನೀರ್, ತಣ್ಣೀರ್ ಹೊಯ್ಸಕು. ಹಾಂಗೆ ಮಾಡಿ ಅವರ ಹುಚ್ಚು ಇಳ್ದು ಸುಮಾರು 13ವರ್ಷ ಬದುಕಿದೋ ಗಡ. ಇದು ಒಂದು ವಿಷಯ ಆದರೂ ಎಷ್ಟೋ ಜನಕ್ಕೆ, ಪ್ರಾಣಿಗಳಿಗೆ ಅವು ಮದ್ದು ಕೊಟ್ಟು ಬದುಕಿಸಿಯೊಳೋ. "ಕುಡೆಕಲ್ಲು ವಿಷ್ಣುಮೂರ್ತಿ ಭಂಡಾರಕ್ಕೆ 10ರೂಪಾಯಿ ಹಾಕಿ" ಅಂತ ಹೇಳ್‌ತಿದ್ದೊ ಹೊರ್ತ್ ಏನೂ ತಕಂಬತಿಲ್ಲೆ. ಹೀಂಗೆ ಗೌಡರ್ ಮೇಲೆ ಎಲ್ಲವುಕೆ ನಮ್ಮವೇಂತ ಮನಸ್ಸಿಲಿ, ಪ್ರೀತಿ ಇತ್ತ್.

ಅಪ್ಪಯ್ಯ ಗೌಡರ ಒಳ್ಳೆ ಕೃಷಿಕರಾಗಿದ್ದೊ. ಮದ್ದಿಗೆ ಆಗುವ ಗಿಡಗಳ, ವಿವಿಧ

ಜಾತಿನ ಚಾಳೆ, ಕಮ್ಮುನ ದೈಗಳ, ಬೇರೆ ಬೇರೆ ಹಣ್ಣ್‌ನ ಗಿಡಗಳ ಬೆಳ್ಸುದರ್ಲಿ ಭಾರಿ ಇಷ್ಟದ ಸ್ವಭಾವಲಿ ಇದ್ದೊ. 'ಜೇನು ಸಾಕಾಣಿಕೆ'ಲಿ ಮಾನ್ಯ ಕೋಟೆ ಲಕ್ಷ್ಮಿನಾರಾಯಣನವು ಮತ್ತ್ ಕೋಟೆ ವಸಂತಕುಮಾರ್‌ನವು ಪುತ್ತೂರ್‌ನ ಜೇನು ಬೆಳೆಸುವವರ ಸಂಘದ ಅಧ್ಯಕ್ಷರಾಗಿರ್ಕನ "ಪುತ್ತೂರು ತಾಲೂಕು ಮಟ್ಟದ ಮರ್ಯಾದೆ"ನ ಎರಡ್ ಸರ್ತಿ ಗೆದ್ದುಕೊಂಡೋಳೊ. ಮರದ ಒಟ್ಟೆಲಿ ಇದ್ದ ಜೇನು ನೊಣಗಳ ಹಿಡಿಯಕೆ ಸಣ್ಣ ಕೈ ಆಕೂಂತ 7ವರ್ಷದ ಪ್ರಾಯಲಿ ಪೆಟ್ಟಿಗೆಗೆ ಜೇನು ತುಂಬಿಸಿಕೆ ನನ್ನ ಅಪ್ಪ ನನ್ನ ಕರ್ಕಂಡ್ ಹೋತಿದ್ದೊ.

ಸುಳ್ಯ ವಿಭಾಗದ ಶ್ಯಾನುಭೋಗರ್ ಆಗಿದ್ದ ಮಾನ್ಯ ತುದಿಯಡ್ಕ ಕೃಷ್ಣ ರಾವ್ ಅವರ ಬಡ್ಡಡ್ಕಕ್ಕೆ ಕರ್ಕಂಡ್ ಬಂದ್, ಪರಿಸರದ ಬಡವುಕೆ ಅಪ್ಕಿದ್ದ ಜಾಗೆ ಹಕ್ಕು ಅವವುಕೆ ಸಿಕ್ಕುವ ಹಾಂಗೆ, ಸ್ವಾರ್ಥ ಇಲ್ಲದೆ ಕೆಲಸ ಮಾಡ್ತಿದ್ದೊ. ಅವು ಕಟ್ಟಿದ ಶಾಲೆಲಿ ತಿಂಗಳಿಗೊಮ್ಮೆ ತಾಳಮದ್ದಳೆ ಮಾಡ್ಸಿ, ಬಂದವುಕೆ, ತಿಂಡಿ ಕಾಪಿ ವ್ಯವಸ್ಥೆ ಮಾಡ್ತಿದ್ದೊ. ಸಮಾಜಲಿ ಎಲ್ಲವುಕೆ ಉಪಕಾರಕ್ಕೆ ಆಗಿ ಬೊದ್ಕಿದ್ದ ಅಪ್ಪನ ಮಗಳಾಗಿ ಹುಟ್ಟಿದೇ ನನ್ನ ಪುಣ್ಯಂತ ನಂಗೆ ಅನ್ಸಿದೆ. ಸಣ್ಣವಳಾಗಿ ಇರ್ಕನೇ ಕೆರೆಲಿ ಮಿಂದಿಕೆ (ಈಜಲು) ಕಲ್ಸುದು, ಚೇಳು ಬಗ್‌ಸುದು, ಪಾಠ ಹೇಳಿಕೊಡ್ದು, ಏಳು ವರ್ಷ ಪ್ರಾಯಲಿ ಸೈಕಲ್ ಬೇಲೆನ್ಸ್, ಸಂಗೀತ ಕಲ್ಸಿದ್ ಎಲ್ಲಾ ನೆನ್ಪಾದೆ.

"ನೀನು ಹಚ್ಚಿದ ದೀಪ ಕಾರ್ಗತ್ತಲ ಬೆಳಗಿ, ಸರಸ್ವತಿಯ ಭಂಡಾರ ಸೂರೆಯಾಗಿ ಹರಡಿ ಚೆಲ್ಲಿದೆ". 'ವಿದ್ಯೆಯಾಭರಣ' ದಿಕ್ಕು ದಿಕ್ಕಲಿ ಮೆರೆದು ಭವ್ಯವಾಗಿ ಮೆರ್ದ್, ಹೀಂಗೆ ಕಾಣದಾಂಗೆ ಆದೊ"ಎಂದು ಬಡ್ಡಡ್ಕ ತೇಜ ಕುಮಾರ್ ಬರ್ದ ಹಾಂಗೆ, ನಮ್ಮ ಹಿರಿಯವರ ದಿವ್ಯಾತ್ಮನ ಚೇತನ ಶಕ್ತಿ, ನಮಗೆ ದಾರಿದೀಪವಾಗಿರ್ಲಿ, ನಮ್ಮ ಬದ್‌ಕ್‌ನ ದಾರಿನ ಬೊಳ್ಪು ಆಗಿರ್ಲಿ, ಅವರ ಗುರಿ ತಪ್ಪದ ಆದರ್ಶದ ಬದುಕು ನಾವುಗೆ ಹುಮ್ಮಸ್ಸ ಕೊಡಲೀಂತ ದೇವರ ಬೇಡಿಕಣ್ತಾ ಒಳೊ.

2

'ಹನ್ನೆರಡು ವರ್ಷಲಿ ಹೊಡ್ದ ಕಡೆ'

ಸುಳ್ಯಂದ ಬಡ್ಡಡ್ಕಕ್ಕೆ ಸುಮಾರು 5ಮೈಲು ದೂರ ಉಟ್ಟು. ನಿತ್ಯ ಹರಿವ ಪಯಸ್ವಿನಿನ ಅಬ್ಬರ. 1962ರ ಮುಂದೆ ಮಳೆಗಾಲಲಿ ನೀರು ಭಾರೀ ಬಂದು ಹೊಳೆ ಆಚೆ ಮಡೆ ಈಚೆ ಮಡೆ ಒಂದಾಗುವೆಷ್ಟು ತುಂಬಿ ಹರಿಯತಿತ್ತ್. ಮಳೆಗಾಲಲಿ ಕೆಂಪಾದ ನೀರ್ ಬಂದ್, 1926ರ ಮಳೆಗಾಲಲಿ ಸುಳ್ಯ ಮೊಗರ್ಪಣೆ ಸೇತುವೆ ಮುಳ್‌ಗಿದ ದಾಖಲೆ ಉಟ್ಟು. ಕೃಷಿನ ಉತ್ಪತ್ತಿಗಳ ಕೊಡಿಕೆ, ಮನೆಗೆ ಸಾಮಾನು ತಾಕೆ, ಮಕ್ಕಳಿಗೆ ಹೈಸ್ಕೂಲಿಗೆ ಹೋಕೆ, ಸುಳ್ಯಂದ ಟಪ್ಪಾಲಿನ ಆಲೆಟ್ಟಿಗೆ ತಾಕೆ ಇರುವವುಕೆ, ಹೊಳೆನ ದಾಟಿಕೆ ದೋಣಿ ಬೇಕಾಗಿತ್ತ್. ಒಂದು ದೊಡ್ಡ ದೋಣಿನೂ ಇರ್ತಿತ್ತ್‌ಲ್ಲೆ. 10–12 ಜನ ಕುದ್ರುವ ದೋಣಿ ಇತ್ತ್. ದೋಣಿ ಮುಳ್ಗಿಕೆ 4 ಇಂಚ್ ಮಾತ್ರ ಬಾಕಿ ಇದ್ದರೆ ಹೆಚ್ಚ್ ನೀರು ಉಟ್ಟೂಂತ ಅರ್ಥ. ಆಗ 4–5 ಜನನ ಮಾತ್ರ ದೋಣಿಲಿ ಕುದ್ರುಸುತ್ತಿದ್ದೊ. ಹೊಳೆ ಮಡೆನ ಕೆಸರ್‌ನ ದಾಟಿ ದೋಣಿಲಿ ಕುದ್ರೊಕು. ಹೊಳೆನ ಮಧ್ಯ ಭಾಗಲಿ ಹೋಕಾಕನ, ಹೊಳೆಲಿ ಬರುವ ದೊಡ್ಡ ಮರದ ತುಂಡುಗ ನೀರ್‌ಲಿ ಬರ್ತಿದ್ದೊ. ಅದ್ ಎಲ್ಲಿ ಆದರೂ ದೋಣಿಗೆ

ಕುಟ್ಟಿರೆ ದೋಣಿ ನಿಗಂಟಾಗಿ ಮಗುಚಿದೆ. ಅಪಾಯ ಖಂಡಿತನೇಂತ ಹೆದ್ರಿಕೆ ಆತಿತ್. ಆ ಕ್ಷಣಲಿ ಶಿವ ಶಿವಂತೇಳಿ ದೇವರಿಗೆ ಕೈ ಮುಗಿಯದವು ಯಾರೂ ಇರಿಕಿತ್ಲೆ. ಅಂತೂ ನಾಗಪಟ್ಟಣ ಶಿವ ದೇವರು ಯಾರಿಗೂ ತೊಂದರೆ ಆಗದ ಹಂಗೆ ಕಾಪಾಡ್ದ್ ವಿಶೇಷ. ಹೀಂಗೆ ಸುಳ್ಯಂದ 15.8ಕಿ.ಮೀ ಉದ್ದ ಅಗಲಕ್ಕೆ ಇರುವ 16ಸಾವಿರದ 428ಎಕ್ರೆಲಿ ಬದುಕುವ ಆಲೆಟ್ಟಿ ಗ್ರಾಮದವು ದೋಣಿನ ಹೊಂದಿಕಂಡೇ ಬದ್ಕಿಕೊಂಡಿದ್ದೊ. ಹಾಂಗಾಗಿ ಆಲೆಟ್ಟಿನ ಬೇಸಾಯ ಮಾಡುವವು ಸುಳ್ಯಂದ ಮಳೆ ಸುರು ಆಕೆ ಮುಂದೆನೇ ಗೋಣಿ ಗೋಣಿ ಅಕ್ಕಿ ಚೀಲ, ಬೆಲ್ಲದ ಚೀಲ, ಉಪ್ಪು ಎಲ್ಲದರ ದಾಸ್ತಾನು ಮಾಡ್ತಿದ್ದೊ. ಮನೆಲಿ ಬೆಸಗೆಲಿ ಇಸಿಕಣ್ತಿದ್ದೊ. ಸುಳ್ಯಲಿ ಸೂಂತೋಡು ಅಪ್ಪಣ್ಣ ಗೌಡ್ರ ಭಂಡಸಾಲೆ ಇತ್ತ್. ಅವರ ಮನೆಲಿ ಹಳ್ಳಿಂದ ಬಂದವುಕೆ ಅನ್ನ, ಒಳ್ಕಣಿಕೆ ವ್ಯವಸ್ಥೆ ಎಲ್ಲ ಕೊಡ್ತಿದ್ದೊ. ಅಪ್ಪಯ್ಯ ಗೌಡ್ರು ಬೆಡಿಗೆ ಬೇಕಾದ ತೋಟೆ ಎಲ್ಲ ಅಲ್ಲೇ ತೆಗಿತಿದ್ದೊ. ಈಗನ ವಿಶ್ವಾಸ್ ಸ್ಟೋರ್ಸ್‌ನ ಸೂರಯ್ಯನವರ ಅಜ್ಜ ಅಪ್ಪಣ್ಣ ಗೌಡ್ರಿಗೂ, ಅಪ್ಪಯ್ಯ ಗೌಡ್ರಿಗೂ ಬಹಳ ಸ್ನೇಹ ಇತ್ತ್.

ಆಗ ಈಗ ಇರುವ ನಾಗಪಟ್ಟಣ ಭಾರಿ ಕಾಡ್. ಒಬ್ಬೊಬ್ಬ ಆಗಿ ಹೋಕೆ ಆಗದ ಕಾಡ್. ನಡು ಬಿಸ್ಲಿಲೂ ರಾತ್ರಿ ಮಾತ್ರ ಮರ್ಡುವ ಉಚ್ಚುಗ, (ಜೀರುಂಡೆ) ಹಗಲು ಹೊತ್ತ್‌ಲೇ ಕೀರಿ ಕೀರಿಂತ ಕಿರುಚುತಿದ್ದೊ. ಈ ಬಗೆ ಬಗೆ ರೀತಿನ ಪ್ರಾಣಿಗ, ಪಕ್ಷಿಗಳ ಕೂಟ ಅಲ್ಲಿತ್ತ್. ದೊಡ್ಡ ದೊಡ್ಡ ಮರಗ, ಅದಕ್ಕೆ ಹತ್ತಿದ ಬಳ್ಳಿಗ, ಅದರ್‍ಲಿ ಒಡಾಡಿಕಂಡ್ ಇರುವ ಕುರೆಗ, ಮುಚ್ಚಂಗ, ದರ್‍ಗ್ಲಿ, ಉಂಬ್ಲುಗ (ಜಿಗಣೆ), ಹಾವುಗ, ಹುಲಿ, ಕಾಟಿಗ ಎಲ್ಲಾ ಇದ್ದೊ. ಆಗನ ಕಾಲಲಿ ಬೆಡಿ, ದೊಣ್ಣೆ ಕೈಲಿ ಹಿಡ್ಕಂಡ್ ಹೋವ ಕಾಲ. ನಡಿಯಕೂ ಸರಿದಾರೀಂತ ಇತ್ಲೆ. ಆಗ ದಾರಿಲಿ ನಡೆವವುಕೆ, ಕಟ್ಟ್ ಹೊತ್ತುಕಂಡ್ ಹೋವವ್ಕೆ, ಬಚ್ಚಿಕಾಕನ ದಾರಿಲಿ ನೀರ್ ಕುಡಿಯಕೆ ಬೇಕಾತಿತ್. ಹೀಂಗೆ ಬೇಕಾಗಿದ್ದದರ ಜನಗಳಿಗೆ ಕೊಡುವ ಪುಣ್ಯಾತ್ಮರೂ ಆಗ ಇದ್ದೊ. ಸುಳ್ಯಂದ ಹೊರ್‍ಟು ಸುರೂಗೆ ಸಿಕ್ಕುದು ಮಡಿವಾಳರ್ ಆಗಿದ್ದ ಬಾಬುಂತ ಹೆಸರಿರುವವರ ಮನೆ. ಹೊಳೆ ದಾಟಿರೆ, ದೋಣಿ ಕಡವುನವರ ಬಿಡಾರ. ಅಲ್ಲಿಂದ ದೇವಸ್ಯ ರಾಮಯ್ಯ ಗೌಡ್ರ ಮನೆ. ಮತ್ತೆ ಆಲೆಟ್ಟಿಗೆ ಹೋಕನ ಅಪ್ಪುಪಾಟಾಳಿಯವರ ಮನೆ. ಆಲೆಟ್ಟಿಲಿ ಇತ್ತಿಚೆಗೆ ಆಲೆಟ್ಟಿ ಸೊಸೈಟಿನ ಕಾರ್ಯನಿರ್ವಾಹಕರು ಆಗಿದ್ದ ಸುದಾಮನವರ ಅಪ್ಪ ನಾರಾಯಣ ಮಣಿಯಾಣಿಯವರ ಹೋಟೇಲ್. ದಾರಿಲಿ ಹೋವವುಕೆ ನೀರೂ ಕೊಡ್ತಿದ್ದೊ. ಆಲೆಟ್ಟಿ ಕಳ್ದ್ ಹೋದರೆ ಗುಂಡ್ಯ ಚೋಯಂಬುನವರ ಮನೆ. ಹಂಞ ಮುಂದೆ ಹೋದರೆ ಯಾಗೊಳೂ ಬರುವ ಒರತೆ ನೀರ್, ಮತ್ತೆ ಬಡ್ಡಡ್ಕ, ಕರಿಕೆ, ಕಲ್ಲಪಳ್ಳಿ ರಂಗತ್ತಮಲೆಗೆ ಹೋವು ಕುಡೆಕಲ್ಲು ರಾಮಯ್ಯ ಗೌಡ್ರಲ್ಲಿಗೆ ಮತ್ತು ಅಪ್ಪಯ್ಯ ಗೌಡ್ರಲ್ಲಿ ಹೋಗಿ ಕೊಟ್ಟ ಗಂಜಿನ ಉಂಡೋ, ಮಜ್ಜಿಗೆ ನೀರು ಕುಡ್ದೋ ಮುಂದೆ ಹೋತಿದ್ದೊ. ಹಾಂಗಾಗಿ ಹಿಂದೆ ನೀರ್ ಕುಡಿದ ಮನೆನ ಸಹ ಮರೆಯಕೆ ಆಗದ್‌ಂತ ಇವರ ಹೆಸರ್‌ಗಳ ಇಲ್ಲಿ ಬರ್‍ದೋಳೆ. ಹಿಂದೆ ಕಷ್ಟಲಿ ಬಾಳಿ ಬದ್‌ಕಿದ ಜನರ ಮೋರೆಗ ಇನ್ನೂ ನಂಗೆ ನೆನ್ಪುಲಿ ಉಟ್ಟು.

ಯಾಕೆ ಹೀಂಗೆ ಜನ ಗುಡ್ಡೆ ಗುಡ್ಡೆ ಹತ್ತಿ ಹುಡ್ಕಿ ಅಲ್ಲಿ ಕೃಷಿ ಮಾಡಿಕಂಡ್ ಬದುಕ್ಯೊಳೋಂತ ನಾವುಗೆ ಆಶ್ಚರ್ಯ ಆದೆ. ಹಿಂದೆ ರಾಜರ್‌ಗ ಅವರವರ ಜಾಗನ ಅಗಲ ಮಾಡಿ ದೊಡ್ಡದ್ ಮಾಡಿಕಂಡ್, ಬಾಕನ ಯುದ್ಧ ಆತಿತ್ತ್. ದಂಡ್‌ಗೆ (ಸೈನ್ಯ) ಸೇರ್‌ಸಿಕಣ್‌ಕಾಕನ, ಮತಾಂತರ ಮಾಡಿಕನ ಜಾತಿ ಬೇರೆ ಆಕೆ ಒಪ್ಪದಿದ್ದವರ ತೆಗೆದ್ ಕಿಚ್ಚಿಗೆ ಹಾಕ್‌ಕನ ಕಾಡಾದರೂ ಆದು, ಊರು ಬೇಡಾಂತ ದೂರದ ಗುಡ್ಡೆಗಳಿಗೆ, ಅಲ್ಲಿಗೆ ಪಕ್ಕ ಯಾರೂ ಬಾಕಿಲ್ಲೆ ಎಂತ ಹೇಳುವ ಧೈರ್ಯಲಿ ಗುಡ್ಡೆಗೆ ಹತ್ತಿ, ಕಾಡು ಪ್ರಾಣಿಗಳ ಕಾಟ ಆದರೂ ಆದು, ಊರ ಪ್ರಾಣಿಗಳ ಕಾಟ ಬೇಡಾಂತ ಗುಡ್ಡೆಲಿ ಕೃಷಿ ಮಾಡಿ ಕಷ್ಟಲಿ ಬದ್‌ಕಿಕೆ ಸುರು ಮಾಡ್ದೋಂತ ಅನ್ನಿದೆ. ಸೈನ್ಯದವು ಕೆಲವು ಜನರ ಮತಾಂತರ ಮಾಡಿದೊ. ಹಾಂಗೆ ಮತಾಂತರ ಮಾಡ್ಸಿಕಂಡವು ಸುಳ್ಯಲಿ ಕೆಲವು ಒಳ್ಳೆ ಕೂಟದವು ಜನರ ಒಟ್ಟಿಗೆ ಒಳ್ಳೆದರ್ಲಿ ನಡ್ಕಂಬವು ಈಗಲೂ ಒಳೋಂತ ಹೇಳುವ ವಿಷಯ ಹಿರಿಯರ್‌ಂದ ಬಂದ ಮಾತ್. ಹೀಂಗೇ ಕಾಡೇ ಅಕ್ಕೂಂತ ಹೋದವು ಹೇಂಗಾರು ಕೃಷಿ ಮಾಡಿಕೆ, ಕುಡಿಯಕೆ ನೀರ್ ಇದ್ದರೆ ಆತೂಂತ "ಏರ ಮುತ್ತನೆ ಹತ್ತಿ ಈರ ಮುತ್ತನೆ ಇಳ್ದ್, ಪಳ್ಳ ಮುರಿಯಿನೆ ಹೋಗಿ ಅಲ್ಲಲ್ಲಿ ಕಾಡ್ ಕಡ್ದ್ ತಟ್ಟ್ ಮಾಡಿ, ಕುಮೇರಿಲಿ ಭತ್ತ ಬೇಸಾಯ ಮಾಡಿ ನಿಧಾನಲಿ ಅಡಿಕೆ ತೋಟ, ಬಾಳೆ ನೆಟ್ಟ್, ಚಾಮೆ ನವಣೆ, ರಾಗಿ, ಚಿಬರಿ, ಬೇಕಾದ ಗೆಡ್ಡೆ ಗೆಣಸ್‌ಗಳ ನೆಟ್ಟಿ ಕ್ಯಾ, ಬೀಜದ ದೈ ಎಲ್ಲ ಬೆಳ್ಸಿಕೆ ಸುರು ಮಾಡ್ದೊ. ಆಗ ಪ್ರಾಣಿಗಳ ತೊಂದರೆ ಸುರು ಆತ್. ಬಿತ್ತಿದ ಬೆಳೆ ಹಾಳು ಮಾಡ್ದೊ. ದನಂಗಳಿಗೆ, ನಾಯಿಗಳಿಗೆ ಹುಲಿ ಕಾಟ ಸುರು ಆತ್. 3 ತಲೆಮಾರು ಹಿಂದೆಂದ ಮನುಷ್ಯರ್ ಬೆಡಿಗಳ ಕೈಗೆ ತಕೊಂಡೋ. ಆಲೆಟ್ಟಿಲಿ ಇದ್ದ ಹಾಂಗೆ ಬೇರೆ ಊರುಲಿನೂ ಒಳ್ಳೆ ಈಡುಗಾರ್ರು ಇರ್ತಿದ್ದೊ. ಪೇಟೆಂದ ತರುವ ಕುರಿ, ಕೋಳಿ, ಸಾಂಕಿದ ಹಂದಿಗ ಅಲ್ಲ, ಎಲ್ಲವುನೂ ಬೇಟೆ ಆಡಿಕನ ಕಾಡ್‌ಲಿ ಸಿಕ್ಕಿದ ಮಾಸನೇ ತಿಂಬತಿದ್ದೊ. ಒಳ್ಳೆ ಸಾಹಸ ಇದ್ದ್ ಶಕ್ತಿವಂತರೂ ಆಗಿದ್ದೊ.

ಕುಡೆಕಲ್ಲ್‌ಲಿ ಹಿಂದೆ ಆನೆ ಬೇಟೆ ಆಡ್ದ ಒಬ್ಬ ಅಪ್ಪಯ್ಯ ಗೌಡ್ರೂಂತ 1800ನೇ ಇಸವಿಲಿ ಇದ್ದೊಗಡ. ಬಡ್ಡಡ್ಕ ಅಪ್ಪಯ್ಯ ಗೌಡರ್ 1903ನೇ ಇಸವಿಲಿ ಹುಟ್ಟಿ 1984ರಲ್ಲಿ ಶತಮಾನದ ಬೇಟೆ ಶೂರ ಆಗಿ ದೇವರ ಪಾದ ಸೇರ್ದೊ. ಕುಡೆಕಲ್ಲು ಇವರ ಮನೆತನ ಆದರೂ, ಅವರ ಅಜ್ಜ ದೇವಯ್ಯ ಗೌಡ್ರು ಬಡ್ಡಡ್ಕ ಸೇರ್ದ ಮೇಲೆ ದೇವಯ್ಯ ಗೌಡ್ರ ಕೂಟದವೆಲ್ಲ ಬಡ್ಡಡ್ಕಂತೇಳಿ ಗುರ್ತಿಸಿಕಂಬಾಂಗೆ ಆತ್. ಕುಡೆಕಲ್ಲು ಪುಟ್ಟ ಗೌಡಂತ ಒಬ್ಬ ಹಿರಿಯವು ಇದ್ದ್ ಅವು ಕಲ್ಯಾಣಪ್ಪನೊಟ್ಟಿಗೆ ಕೂಡಿಕಂಡ್ ಸುಳ್ಯ ಸೀಮೆನ ಸ್ವತಂತ್ರಕ್ಕಾಗಿ ಹೋರಾಟ ಮಾಡ್ದವುಗಡ. ಆಗ ಕೂಡು ಕುಟುಂಬದ ಕಾಲ. ಒಂದೇ ಮನೆಲಿ ಎಲ್ಲವೂ ಸೇರಿ ಇರ್ತಿದ್ದೊ. ಹೀಂಗೆ ಕುಡೆಕಲ್ಲುವು ಸಮಾನತೆಂದ, ಪ್ರೀತಿಂದ ಬದ್‌ಕ್‌ತಿದ್ದೊ. ಅಪ್ಪಯ್ಯ ಗೌಡರಿಗೆ ಅವರ ಅಪ್ಪನ "ಡಬ್ಬಲ್ ಬ್ಯಾರೆಲ್ ಬೆಡಿ", ಸಣ್ಣದರಲ್ಲಿನೇ ಅವು ಪ್ರೀತಿಸುವ ಆಯುಧ ಆಗಿತ್ತ್. ಅದು ಹೊರಡ್ಸುವ ಕಿಚ್ಚಿಲಿ ಪ್ರಾಣಿಗ ಸತ್ತು ಬೀಳ್ದು ಆಶ್ಚರ್ಯ ಕಾಂಬತಿತ್ತ್. ಅದರ ಮುಟ್ಟಿ ನೋಡಿಕೆ ಅಪ್ಪನ ಹೆದ್ರಿಕೆ. ಹೊರಗೆ ಎಲ್ಲಿಯಾದರೂ ಹೋಕೆ ಇದ್ದರೆ

ಅವರಪ್ಪ ಅದರ ತಕಂಡೇ ಹೋತಿದ್ದೊಗಡ. ಕೇಪುನ ಬೆಡಿ ಇದ್ದರೂ ಡಬ್ಬಲ್ ಬ್ಯಾರೆಲ್‌ನ್ನೇ ತಕಂಡ್ ಹೊತಿದ್ದೊಗಡ. ಕೇಪುನ ಬೆಡಿಗೆ ಮದ್ದ್ ಹಾಕಿಕನ ಹಂಞ ಹೆಚ್ಚು ಸಮಯ ಬೇಕಾದ್ದರಂದ ಬೆಡಿಗೆ ಮದ್ದು ತುಂಬ್‌ಸ್‌ಕನ ಎದುರ್‌ಲಿ ಇರುವ ಪ್ರಾಣಿ ಇವರ ಮೇಲೆ ಬಿದ್ದರೆ ಕಷ್ಟ. ಆದರೆ ತೋಟೆ ತುಂಬಿಸಿದ ಬೆಡಿ ಆದರೆ ಐದು ನಿಮಿಷಲಿ ತೋಟೆ ವಾಪಾಸ್ ಹಾಕಕ್‌ಗಡ. ಸುರುನ ಮಹಾಯುದ್ಧಕ್ಕೆ ಮುಂದೆ ಬಡ್ಡಡ್ಕದ ಸುತ್ತಮುತ್ತ ರಾತ್ರಿ ಬೇಟೆಗೆ ಪಿಂಡಿಕಾಯಿ ಎಣ್ಣೆನ ಬೇಟೆಗೆಂತಲೂ, ಮನೆಲಿ ದೀಪ ಹೊತ್ತಿಸಿಕೆನೂ ಉಪಯೋಗ ಮಾಡ್ತಿದ್ದೊಗಡ. ಬಡ್ಡಡ್ಕಲಿ ಪಿಂಡಿಬನಂತ ಹೇಳುವ ಜಾಗೆ ಉಟ್ಟು. ಹಿಂದೆ ಅಲ್ಲಿ ಪಿಂಡಿಕಾಯಿ ಮರಗಳೇ ಇತ್ತ್‌ಗಡ. ಪಿಂಡಿಕಾಯಿನ ಬಿಸಿಲಿಗೆ ಹಾಕಿರೆ ಕಪ್ಪು ಎಣ್ಣೆ ಹೊರಗೆ ಬಾಕನ ಅದರ ಗಟ್ಟಿ ಆಗುವ ಹಾಂಗೆ ಆರಿಕೆ ಬುಟ್ಟು ಅದರ ಬತ್ತಿನ ಕೈಲಿ, ಮಾಡಿಕಣ್‌ತಿದ್ದೊಗಡ. ಮೀನು ಹಿಡಿವ (ಬಲೆ) ಕೂಂಜೊಳ್‌ಗೆ ಸೆಗಣಿ ಹಾಕಿ ಒಳಗೆ ಬತ್ತಿ ಇಸಿ ಹೊತ್ತಿಸಿ ಅದರ ಮೇಲೆ ಒಂದು ಹಂಚ್ ಇಸಿ, ಅದರ್ಲಿ ಪಿಂಡಿಬತ್ತಿ ಇಸಿ, ತಲೆಗೆ ಒಂದು ಸಿಂಬೆ ಇಸಿ, ಕುಂಜೊಳುನ ಹೊತ್ತಿಸಿ ತಲೆ ಮೇಲೆ ಇಸಿಕಂಡ್, ಬೀಳದಾಂಗೆ ಗಟ್ಟಿ ಕಟ್ಟ್‌ತಿದ್ದೊಗಡ. ಅದುವೆ ಆಗನ ಬೇಟೆನ ಲೈಟ್. ಹಾಂಗೆ ಪಿಂಡಿ ಬತ್ತಿ ಹಿಡ್ದವ ಬೇಟೆಗೆ ಹೋಕನ ಎದುರಿಗೆ ಇರೊಕಡ. ಅವ ದೇವ್ರ ಪೂಜೆಗೆ ಇರುವ ಒಂದು ಸಣ್ಣ ಗಂಟೆನ ಹಂದಾಡಿಸಿಕಂಡ್ ಇರಿಕಾಕನ ಆ ಗಂಟೆನ ಶಬ್ದಕ್ಕೆ, ಪಿಂಡಿನ ಬೊಳ್ಪುಗೆ ಪ್ರಾಣಿಗ ತಲೆ ಎತ್ತಿ ನೋಡ್ಕನ ಕಣ್ಣ್‌ನ ಮಧ್ಯಕ್ಕೆ ಗುಂಡು ಹೊಡೆಕೆ ಆತಿತ್ತ್‌ಗಡ. ಆಗ ಇಂಥ ಬೇಟೆಗೆ "ಮಣಿ ನಾಯಾಟ್ಟು"ಂತ ಹೇಳ್ದುಗಡ. ಮಣಿಂತ ಹೇಳ್ರೆ ಗಂಟೆ, ನಾಯಾಟ್ಟುಂತ ಹೇಳ್ರೆ ಬೇಟೆ. ಇಷ್ಟ್ ಕಷ್ಟಲಿನೂ ಹಿಂದೆ ಹಿರಿಯವು ಬೇಟೆ ಆಡ್ತಿದ್ದೊ. ಗೌಡ್ರ ಮನೆಲಿ ಇನ್ನೊಂದು ಕೇಪುನ ಬೆಡಿ ಇತ್ತ್. ಅವರಪ್ಪ ಮನೆಲಿ ಇಲ್ಲದೆ ಇರ್ಕನ ಅಪ್ಪಯ್ಯ ಗೌಡ್ರು ಅದರ ಬಿಚ್ಚಿ ನೋಡಿ ಅದರ ಸಂಗತಿಗಳೆಲ್ಲಾ ತಿಳ್ಕಂಡೊ. ತಿಮ್ಮಪ್ಪಂತ ಒಬ್ಬ ಕೆಲ್ಸದಂವ ಹೇಳಿ ಕೊಡ್ತಿತ್ತ್‌ಗಡ. ಕುದುರೆ ಒತ್ತಿಕೆ ಮಾತ್ರ ಬುಡ್ತಿತ್ತ್‌ಲ್ಲೆಗಡ. ಹಾಂಗೆ ಇವು ಮೆಲ್ಲ ರಂಜಕ, ಚರೆ, ಕೇಪುಗಳ ಮನೆನ ಹಿಂದೆ ಗುಡ್ಡೆಗೆ ತಕಂಡ್ ಹೋಗಿ ಉದ್ದದ ಬೆದ್‌ರ್ನ ಓಟೆ ಮಾಡಿ ಮದ್ದ್ ಹಾಕಿ ಕಿಚ್ಚಿ ಕೊಟ್ಟಾಕನ "ಢಭಾ"ಂತೇಳಿ ಓಟೆ ಸಿಗ್ದ್ ಹೋತಿತ್ತ್‌ಗಡ. ಅಂದ್ ಆಟದ ಸಾಮಾನ್ ಅದೇ ಆಗಿತ್ತ್. ಈಗನ ಮಕ್ಕ ಹಬ್ಬಕ್ಕೆ ಹೊಡ್ಸಿಕೆ ಪಿಸ್ತೂಲು ತೆಗ್ದವೆಲ್ಲ ? ಹಾಂಗೆ.

ಒಂದು ದಿನ ಅವರ ಅಪ್ಪ ಚಳ್ಳಂಗಾರಿಗೆ ಮದುವೆಗೆ ಹೋಗಿದ್ದೊಗಡ. ಬೇಸಾಯದ ಸಮಯ. 25–30 ಜನ ಗದ್ದೆ ಕೆಲ್ಸ ಮಾಡಿಕಂಡಿದ್ದೊ. ಕೆಲ್ಸದವು ಹಂಞ ಜನ ಮನೆ ಎದುರು ಗುಡ್ಡೆಗೆ ಸೊಪ್ಪು ತಾಕೆ, ಹಂಞ ಜನ ಕಂಪ ತರಿಯಕೆ, ಗದ್ದೆ ಪುಣಿಗೆ ಮಣ್ಣು ಮೆತ್ತಿಕಂಡ್ ಇದ್ದೊ. 4 ನಾಯಿಗ ಸೊಪ್ಪು ತಾಕೆ ಹೋಗಿದ್ದವರ ಒಟ್ಟಿಗೆ ಹೋಗಿದ್ದೊ. ಹೊದ್ದೆಟ್ಟಿ ಭವಾನಿಶಂಕರನವು ಅವರ ಅರೆ ಭಾಷೆಲಿ ಬರ್ದ ಹಾಂಗೆ,"ಬೇಯ್ಸಿದ ಗೆಣ್ಸ್, ಮೂಡೆ ಹಿಟ್ಟ್, ಹಾಲು ಹಾಕದ ಕಾಪಿನು ಇತ್ತ್. ಸೀರ್ತುಂಡು ಸೆಡ್ಲ್ ಮಾಡಿ ಹೊದ್ದ ಒಬ್ಬೊಬ್ಬ ಎಷ್ಟೂಂತ? ಬಾಳೆ ಬುಡಲಿ ಕುದ್ದವ್ಕೆಲ್ಲ ಒರ್ಲೆ ಪಿಜಿನ್ ಕಚ್ಚ್‌ಕನ ಮೆಲ್ಲ ಕೆಬಿಗೆ

ಸೆಕ್ಕಿಸಿದ ಬೀಡಿ ಹೊತ್ತಿಸಿ ಹೂಡಿಕೆ ಹೊರ್ಟೋಂತ. ಹೀಂಗೆ ಕೆಲ್ಸದವ್ಕೆಲ್ಲ ಹತ್ತ್ ಗಂಟೆಗೆ ಕಾಪಿ ಆಗಿ ಕೆಲ್ಸಕ್ಕೆ ಹೋಗಿರ್ಕನ ನಾಯಿಗ ಬೊಗಳ್ದುನೂ, "ಪಾಡಿ ಪಾಡೀ'ಂತ ಹೇಳುವ ಕೆಲ್ಸದವರ ಬೊಬ್ಬೆನೂ ಒಟ್ಟಿಗೆ ಕೇಳ್ತ್. ಅಪ್ಪ ಹೇಂಗೂ ಇಲ್ಲೆ. ಅಪ್ಪಯ್ಯ ಗೌಡ್ರು ಕೇಪುನ ಬೆಡಿ ತೂಗು ಹಾಕಿದರ ತೆಕಂಡ್, ತಿಮ್ಮಪ್ಪ ಹೇಳಿಕೊಟ್ಟದರ ಮನಸ್ಸ್‌ಲಿ ನೆನ್ಸಿಕಂಡ್, ಬೆಡಿಗೆ ಮದ್ದ್ ಹಾಕಿ ನಿಮಿಷಲಿ ಅಂಗಳ ದಾಟಿ ಗದ್ದೆ ಪುಣಿಗೆ ಬಂದಾಕನ, ಗುಡ್ಡೆನ ಮೇಲೆಂದ 'ಕಡೆ' ಒಂದು ಓಡಿಕಂಡ್ ಬಾದ್. ಅದರ ಹಿಂದೆ ನಾಯಿಗ ಓಡಿಸಿಕಂಡ್ ಬಾದು ಕಂಡೊ. ಇವು ಎತ್ತರಕ್ಕೆ ಗುಡ್ಡೆ ಹತ್ತಿಕಂಡ್ ಓಡಿ ಕಡೆಗೆ ಹಣೆಗೆ ಸರಿಯಾಗಿ ಗುರಿ ಹಿಡ್ದ್ ಬೆಡಿನ ಕುದುರೆ ಎಳ್ದೊ. ಮರ್ಮ ಸ್ತಾನಕ್ಕೆ ಪೆಟ್ಟು ಬಿದ್ದದರ್‌ಂದ ಗುಡ್ಡೆ ಮೇಲೆಂದ ಹೊಣ್ಕಿ ಗದ್ದೆ ಪುಡೆನ ಕಣಿಗೆ ಕಡೆ ಬೀತ್. ಗುಡ್ಡೆಲಿದ್ದ ಕೆಲ್ಸದವು ಓಡಿ ಬಂದೋ. ಬೆಡಿ ಶಬ್ದ ಕೇಳಿ ಗೌಡ್ರ ಅವ್ವನೂ ಮನೆಂದ ಓಡಿ ಬಂದೊಗಡ. ಕಡೆನ ಹಕ್ಕಲೆ ಬೆಡಿ ಹಿಡ್ಕಂಡ್ ಇವು ನಿತ್ತಿದ್ದೊಗಡ. ಅವ್ವನ ಮೋರೆಲಿ ಆಶ್ಚರ್ಯನೂ, ಖುಷಿನೂ ಕಂಡತ್‌ಗಡ. ಕೆಲಸದವು ಎತ್ತಿಕಂಡ್ ಮನೆಗೆ ಕರ್ಕಂಡ್ ಬಂದೊ. ಅಮ್ಮ ಮುತ್ತಮ್ಮನವು ಕುಂಕುಮದ ಕುರ್ದಿ ನೀರು ಮಾಡಿ ತಲೆ ಸುತ್ತ ತಂದ್ ಏನೇನೋ ಮುಷ್ಟಿ ಮಾಡ್ದೊಗಡ. ಕೆಲಸದವು ಮಾತ್ರ ಇವರ ಹೊಗಳಿಕೆ ಸುರು ಮಾಡ್ದೊ. 12ವರ್ಷದ ಗೌಡ್ರಿಗೆ ಮನಸ್ಸ್‌ಲಿ ಹೆದ್ರಿಕೆ ಇತ್ತ್. ಅಪ್ಪ ದೇವಯ್ಯ ಗೌಡ್ರು ಬಂದರೆ ಎಂತ ಹೇಳುವೆನೋ ಅಂತ. ಅಪ್ಪ ಮರ್‌ದಿನ ಬಂದವುಕ್ಕೆ ಸುದ್ದಿ ಅಂದೇ ಸಿಕ್ಕಿತ್ತ್‌ಗಡ. ಮದು ಮಕ್ಕಳ ವಿಷಯಲಿ ಯಾರೂ ಇರದೆ, ಎಲ್ಲವೂ ಹೈದ ಕಡೆ ಹೊಡ್ದ ವಿಷಯನೆ ಮಾತಾಡ್ತಿದ್ದೊಗಡ. ಹಾಂಗೇಂತ ಹೇಳಿ ಹೆಮ್ಮೆಂದ ಇವರ ಕಡೆ ನೋಡಿದೊಗಡ. "ಹಾಂಗೇಂತ ಕಾಡಿಗೆ ಹೋಗ್ಬೇಡ ನಿನ್ನ ಪೋರ್ಸ್‌ನ ಈಗಳೇ ತೋರ್ಸ್ ಬೇಡಾಂತ ಹೇಳಿದೊಗಡ. ಗದ್ದೆಗೆ ಹಗಲು ಬಂದು ಉಪದ್ರ ಮಾಡುವ ಮೊಲ, ಬರಿಂಕ, ಕಾಡುಕೋಳಿ, ಕಡವೆಗಳ ಮಾತ್ರ ಕೇಪುನ ಬೆಡಿಲಿ ಹೊಡಿಂತ ಹೇಳ್ದೊ. ಹಾಂಗೆ ಒಂದೇ ಕೈಲಿ ಗುಂಡು ಹೊಡೆಯಕೆ ಹಾರುವ ಕಾಡುಕೋಳಿಗೆ ಗುರಿ ಇಸಿ ಅಭ್ಯಾಸ ಮಾಡಿಕಂಡೋ. ಅಂತೂ ಅಪ್ಪಯ್ಯ ಗೌಡ್ರ ಬೇಟೆ ಕಡೆ ಹೊಡಿವಲ್ಲಿಂದ ಸುರು ಆಗಿ ಅಖೇರಿಗೆ ಕಡೆ ಹೊಡ್ದೇ ಬೇಟೆ ಆಡ್ದು ನಿಲ್ಸಿದೊಗಡ.

3

ಕಾಟಿನ ಹಾಲು ಬೇಕು!

ಕೆಲವು ಸರ್ತಿ ಅಪ್ಪಯ್ಯ ಗೌಡ್ರು ಪಂಥಕ್ಕಾಗಿ ಬೇಟೆ ಆಡ್ದೂ ಉಟ್ಟು. ನೆಟ್ಟಿಕಾಯಿನೇ ತಿಂಬವು ಆದರೂ ಬೇಟೆಗೆ ಒಟ್ಟಿಗೆ ಬಾವ, ಬೇಟೆಲಿ ಸಮಭಾವಲಿ ಜತೆ ಆವ ರಾಮಚಂದ್ರ ಕಲ್ಲೂರಾಯರು. ಒಂದು ಸರ್ತಿ ಬಾರಿ ಒಂದು ಪಂಥ ಒಡ್ಡಿದೊ. "ಅಪ್ಪಯ್ಯ ಇಷ್ಟ್ ಹುಲಿ ಹೊಡ್ದವ ನೀನು. ಕಾಡೆಮ್ಮೆ ಹಾಲು ತಾಕೆ ಆದೊ?" ಹಾಲ್ ತಂದರೆ ನಿಂಗೆ ಜರತಾರಿ ಶಾಲು ಹೊದಿಸಿನೆ. ಅವು ಸ್ವಂತ ವಿಷಯಲಿ ಏನೇನೊ ಮಾತಾಡುವೆ. ಹಾಂಗೇಂತ ಗುಂಪುಲಿ ಇರ್‍ಕನ ಮಾತಾಡ್ರೆ ಮಾತ್‌ಗಳಿಗೆ ಭಾರಿ ಬೆಲೆ ಬಾದೂ ಉಟ್ಟು. ಅಂದ್ ಕಲ್ಲೂರಾಯರ್ ಹಾಂಗೆ ಹೇಳ್ಕನ ಗುಂಪುಲಿ ಏಳು ಜನಂಗ ಬೇಟೆಗೆ ಹೋವವು ಇದ್ದೊ. ಹಾಂಗಾಗಿ ಅವು ಹಾಕಿದ ಸವಾಲಿಗೆ ಗೌಡ್ರು ಒಪ್ಪಿಯೇ ಬುಟ್ಟೊ. ಅಂದ್‌ನ ಬೇಟೆಗೆ ಹೋಕನ ಜೇಬುಲಿ ಹಾಲ್ ತಾಕೆ ಒಂದು ಕುಪ್ಪಿನ ತೆಕಂಬಕೆ ಸುರು ಮಾಡ್ದೊ. ಬೇಟೆಗೆ ಹೊರ್‍ಟರೆ ಹೆಜ್ಜೆ ಹೆಜ್ಜೆಗೆ ಕಾಟಿಗ ಸಿಕ್ಕುವ ಕಾಲ ಆಗಿತ್. ಅಂದ್‌ನ ದಿನ ಕಾಟಿ ಹಿಂಡ್ ಕಣ್ಣಿಗೆ

ಬೀಳಲಿ ಎಂದ್ ಕಾಯಿತಿದ್ದೊಗಡ. ಅಂದ್ ಮೇದಿನಡ್ಕ ಕಾಡ್‌ಲಿ ಬೆಡಿ ಹಿಡ್ಕಂಡ್ ಹೋಗ್ತಿರ್‌ಕನ ಕಾಟಿಗಳ ಹಿಂಡ್‌ನ ದೂರಂದ ಕಂಡೊ. ಇಂದ್ ಪಂಥನ ಗೆಲ್ಲಿಕೆ ಆದೋಂತ ಕಾಟಿಗಳ ಕಣ್ಣ್‌ಗೆ ಬೀಳದ ಹಾಂಗೆ ಗುಂಪುನ ಹಕ್ಕಲೆಗೆ ನಿಧಾನಲಿ ಹೋದೊಗಡ. ಕಾಟಿಗ ಬುದ್ಧಿ ಇಲ್ಲದವು, ಆದರೂ ಎದ್‌ರ್ ಕೋಪದವು. ಸಿಟ್ಟ್ ಬಂದರೆ ಉದ್ದದ ಕೊಂಬುಗಳ್‌ಂದ ನಮ್ಮ ಕುತ್ತಿ ಸಾಯಿಸಿಕೆ ತೀರುವ ಸಾಹಸದ ಪ್ರಾಣಿಗ. ಈಗ ಜಾಗ್ರತೆಲಿ ಅಪಾಯ ಇಲ್ಲದ ಜಾಗೆನ ಹುಡ್ಕಿ ಕಾಟಿಗಳಿಗೆ ಕಾಣದ ಹಾಂಗೆ ಗುಂಪುನ ನೋಡ್ದೊ. ಗುಂಪುನ ಬಲ ಬದಿಲಿ ಒಂದು ಮರಿ ಕಾಟಿ ಇತ್ತ್. ಅದ್ ಅದರ ಅಮ್ಮಂಗೆ ಅಂಟಿಕಂಡೇ ಹುಲ್ಲು ಮೇಯುತ್ತಿತ್ತ್. ತೀರ ಸಣ್ಣ ಮರಿ ಅಲ್ಲ. ಅವ್ವ ಇಲ್ಲದೆ ಇದ್ದರೂ ಬದ್‌ಕಿಕಂಬದು. ಕಲ್ಲೂರಾಯರ ಪಂಥ ಗೆಲ್ಲಿಕೆ ಒಂದು ಒಳ್ಳೆ ಸಮಯ ಸಿಕ್ಕಿತೂಂತ ಕುಶಿ ಆತ್. ಏನ್ ಮಾಡುದೂಂತ ಒಂದು ಮರ ಹತ್ತಿದೊ. ಸುಮ್ಮನೆ ಬೆಡಿ ಎತ್ತಿ ಗಾಳಿಗೆ ಒಂದು ಗುಂಡ್ ಹೊಡ್ದೊ. ಬೆಡಿನ ಸದ್ದ್ ಕೇಳಿ ಗಾಬರಿಲಿ ಎಲ್ಲ ಕಾಟಿಗ ಓಡಿ ಹೋದೊ. ಮರಿನೂ ಹಿಂಡ್‌ನ ಒಟ್ಟಿಗೆ ಓಡಿ ಹೋತ್. ಅವ್ವ ಕಾಟಿಗೆ ಹೇಂಗೆ ಗೊತ್ತಾತೋ, ಸಿಟ್ಟ್‌ಂದ ಇವು ಇರುವ ಮರದ ಹಕ್ಕಲೆ ನುಗ್ಗಿ ಬಾತ್. ಅದರ ಕೂಸ್ ಓಡಿ ಹೋದ್ದರ ನೋಡಿರೆ ಇದುನೂ ಓಡ್ತಿತ್ತೊ ಏನೋ. ಇದೇ ಸಮಯಂತ ಅದರ ಹಣೆಗೆ ಗುರಿ ಇಸಿ ಗುಂಡು ಹೊಡ್ದೊ ಗಡ. ಕಾಟಿ ನಿಂತತ್ ಹಂಞ ಹೊತ್ತುಲಿ ಅದರ ಮೈ ನಡ್ಗಿಕೆ ಸುರು ಆತ್. ಅದ್ ಪ್ರಾಣ ಹೋವ ಸಮಯಲಿ ಬೊಬ್ಬೆ ಹಾಕಿ ಮುಗ್ಗರಿಸಿ ಬೀತ್. ಸುತ್ತ ಒಮ್ಮೆ ನೋಡಿ ತೊಂದರೆ ಇಲ್ಲೇಂತ ಮರಂದ ಇಳ್ದೊ. ಜೋಬುಂದ ಖಾಲಿ ಕುಪ್ಪಿ ತೆಗ್ದ್, ಅದರ ಮೊಲೆ ಹಿಂಡಿ ಹಾಲ್‌ನ ಕುಪ್ಪಿಗೆ ಹಾಕಿ ಮುಚ್ಚಳ ಹಾಕಿದೊ. ಕಾಟಿನ ಹಾಲ್‌ನ ವಾಸನೆಗೆ ಕಕ್ಕಿಕೆ ಬಂದ ಹಾಂಗೆ ಆದರೂ, ಸಹಿಸಿಕಂಡೊಗಡ. ಹಾಲ್ ತಕಂಡ್ ಬಡ್ಡಡ್ಕಕ್ಕೆ ಬಂದ್ ಕಲ್ಲೂರಾಯರಿಗೆ ಒಪ್ಪಿಸಿದೊ. ಅವುಕೆ ಆಶ್ಚರ್ಯ ಆತ್. ಹೇಂಗೆ ಹಾಲ್ ಸಿಕ್ಕಿತೂಂತ ಕೇಳ್ದೊ. ಗೌಡ್ರು ನಡ್ದ ವಿಷಯನ ಅವುಕೆ ಹೇಳ್ದೊಗಡ. ಆ ಮೇಲೆ ಹೊಟ್ಟೆ ತುಂಬ ತಿಂಬಕೆ ಕೊಟ್ಟ್, ಒಳಗೆ ಹೋಗಿ ಪೆಟ್ಟಿಗೆಂದ ಒಂದ್ ಪಟ್ಟೆ ಶಾಲ್ ತಂದ್ ಇವ್ಕೆ ಹೊದಿಸಿದೊ. ಕೈಗೆ ಇಪ್ಪತ್ತ್ ರುಪ್ಯಾನೂ ಇಸಿದೊ. "ನಿ ಪಂಥಲಿ ಗೆದ್ದೆ" ಎಂದ್ ಹೇಳಿ ಬೆನ್ನ್ ತಟ್ಟಿದೊ. ಮತ್ತೆ ಎಲ್ಲವರೊಟ್ಟಿಗೆ ಹೆಮ್ಮೆ ಪಟ್ಟ್‌ಕಂಡ್ ಈ ವಿಷಯನ ಹೇಳಿಕೆ ಸುರು ಮಾಡ್ದೊ ಗಡ.

4

ಸಂಕಬಳ ಮತ್ತ್ ಹೆಬ್ಬಾವು

ಯುದ್ಧ, ಬೇಟೆ, ಜೂಜು, ಪಗಡೆ ಆಡುವುದು ಇಷ್ಟು ರಾಜರ, ಕ್ಷತ್ರಿಯರ ಧರ್ಮ. ಮಾಮೂಲು ವಿಷಯ ಎದುರಾಳಿನ ಸೋಲ್ಸುದು. ಅದೇ ಗುರಿ. ಒಮ್ಮೆ ಸುರು ಮಾಡಿದ ಬೇಟೆ ಚಾಳಿಂದ ಹೊರಗೆ ಬಾದು ಬಾರೀ ಕಷ್ಟ ಅಥವಾ ಆಕೆ ಇಲ್ಲದ ಕಾರ್ಯ ಅವರ ಅಭ್ಯಾಸಕ್ಕೆ ಅವು ತಾಗಿಕಂಡೇ ಇದ್ದವೆ. ಅದರ್ಂದ ಹೊರಗೆ ಬಾದು ಎಲ್ಲವುಕೆ ಆಕಿಲ್ಲೆ. ಜಿದ್ದಿಗೆ ಬಿದ್ದು ಆಡ್ದ ಬೇಟೆಗಳ ವಿಷಯಗ ಸ ಹಂಞ ಓಳೊ.

ಒಂದು ದಿನ ನಮ್ಮ ಹಕ್ಕಲೆನ ನೆಂಟರ್ ಒಬ್ಬರ ಮನೆಲಿ ಮದುವೆಗೆ ಹೋಕೆ ಇತ್ತ್. ಅವು ಮದುವ್ಗೆ ಹೋತಿದ್ದದ್ದು ಕಮ್ಮಿ. ಮನೆಗೆ ಬಂದ್ ಹಟ ಮಾಡಿ ಕಾಲುನೂ ಹಿಡ್ದರೆ ಹೋಗದೆ ಇರಿಕೆ ಆದುಲ್ಲೆ. ಹೋಗದೆ ಇದ್ದರೆ, ಹೋತಿಲ್ಲೆಲ್ಲಾ ಅಂತ ಬೇಜಾರನೂ ಆದೆ. ಕೃಷಿ, ಬೇಟೆ, ಜೇನು ಸಾಕಣೆ, ಮತ್ತೆ ಯಾರಿಗಾರು ಮದ್ದು ಕೊಡಿಕೆ ಇದ್ದರೆ ಮದುವೆಗೆ ಹೋಕೆ ಆದುಲ್ಲೆ. ಸಮಯನೇ ಇರ್‌ತ್ತ್‌ಲ್ಲೆ ಗಡ.

ಅವು ಎಲ್ಲಿಯಾದರೂ ಹೋಕನ ಅವರ ಸಡನ್ ಡೆತ್‌ನ

ಬೆಡಿ ಇಲ್ಲದೆ ಹೋತಿತ್ತ್‌ಲ್ಲೆ. ಬೆಡಿ ಹಿಡ್ಕಂಡಿರುವವುಕ್ಕೆ ಜನ ಭಾರಿ ಮರ್ಯಾದೆ ಕೊಡ್ತಿದ್ದೊ. ಮಕ್ಕಳ ಪಾಲಿಗೆ ಇವೂಂತ ಹೇಳ್ರೆ ಒಂದು ಆಶ್ಚರ್ಯ. ಎಲ್ಲವೂ ಕೇಳುವ ಚಿತ್ರ ವಿಚಿತ್ರ ಪ್ರಶ್ನೆಗಳಿಗೆ ಉತ್ತರ ಕೊಡೊಕಾದೆ. ಬದುಕಿರ್‌ಕನ ಹೀಂಗೆ .... ಸತ್ತ ಮೇಲೆ ಎಂಥ ಅಭಿಪ್ರಾಯ ಇದ್ದದೆನೋ ಗೊತ್ತಿಲ್ಲೆ! ಗೋಡೆ ಮೇಲೆನ ಚಿತ್ರ ಮಾತ್ರ ಆನೆನೋ ಗೊತ್ತಿಲ್ಲೆ ಅಂತ ಅವು ನೆನ್ಸಿತಿದ್ದೊ.

ಅಂದ್ ಅವು ಮದುವೆಗೆ ಹೋಗಿ ಮದುವೆ ಮುಗ್ಸಿ ಮನೆಗೆ ವಾಪಾಸಾಕನ ಪಿಂಡಿಬನ ಮುತ್ತಪ್ಪ ಗೌಡರ ನೆನ್ಪಾತು. (ಯಸ್. ಯನ್. ಜನಾರ್ದನರ ಅಜ್ಜ) ಅವುನೂ ಸುಮಾರು ಸರ್ತಿ ಇವರೊಟ್ಟಿಗೆ ಬೇಟೆಗೆ ಬಂದವು. ಕೃಷಿ ಮಾಡುದರ್‍ಲಿ ಒಳ್ಳೆ ಅನುಭವ ಇದ್ದವು. ಕೃಷಿಲಿ ಹೊಸ ಹೊಸ ರೀತಿನ ಕಂಡ್ ಕಂಡಿದ್ದೊ. ಕೃಷಿಗೆ ಸಂಬಂಧಪಟ್ಟ ಹಾಂಗೆ ಒಂದೆರಡ್, ತಾಪತ್ರಯಕ್ಕೆ ಅವರ ಹಕ್ಕಲೆ ಪರಿಹಾರ ಕೇಳಿಕೆ ಇತ್ತ್. ಹಾಂಗಾಗಿ ಮನೆ ದಾರಿ ಬುಟ್ಟು ಅವರ ಮನೆ ದಾರಿಗೆ ಹೋದೊಗಡ. ಎಂತದೊ ಗೇನ ಮಾಡಿಕಂಡ್ ಅವು ನಡ್ದ್‌ಕಂಡಿರ್‍ಕನ ದರ್ಗ್(ತರಗೆಲೆ)ನ ಮೇಲೆ ಏನೋ ಉರುಳಾಡಿಕಂಬಂತ ಶಬ್ದ ಕೇಳ್ತ್. ಅದ್ ಹೆಬ್ಬಾವು ಆಗಿರೊಕೂಂತ ಅವರ ಅನುಭವ ಹೇಳ್ತ್. ಹೆಬ್ಬಾವು ಜಾತಿಲಿ ಆನೆ ಕಂದಡಿ ಮತ್ತ್ ಪಿಲಿಕಂದಡಿ ಎರಡು ಜಾತಿ ಉಟ್ಟೂಂತ ಅವುಕೆ ಅನುಭವಲಿ ಗೊತ್ತಾಗುಟ್ಟು. ಆನೆಕಂದಡಿ ನಿಧಾನ ಸ್ವಭಾವ್‌ದ್. ಪಿಲಿಕಂದಡಿ ಹುಲಿನ ಹಾಂಗೆ ಬೇಗ ಓಡಿಕೆ ಉಷಾರ್. ಈ ಹೆಬ್ಬಾವುಗಳ ನಮ್ಮಲ್ಲಿ ಯಾರೂ ತಿಂಬದುಲ್ಲೆ. ಎರಡೂ ಹಾವುಗ ಎದುರಾಳಿ ಮೇಲೆ ಬೇಗ ಹಾರಿ ಅವರ ಗಟ್ಟಿ ಹಿಡ್‌ಕಂಡ್ ಅವುಕೆ ಬೇಕಾದ ಆಕಾರಕ್ಕೆ ತಂದ್, ಬಾಳೆ ಹಣ್ಣಿನ ತಿಂದ ಹಂಗೆ ನುಂಗಿ ಬುಟ್ಟವೆ. ಆ ಹಾವುಗೆ ಮೈಗೆ ಗುಂಡು ಹೊಡ್ದರೆ ಸಹ ತಾಗುದುಲ್ಲೆ. ಕೊಲ್ಲುಕುಂತೆಲೇ ಆಕನ ತಲೆಗೆ ದೊಣ್ಣೆಂದ ಬಡಿಯೊಕು ಆಗದಿದ್ದರೆ ತಲೆಗೇ ಗುಂಡು ಹೊಡೆಯೊಕು. ಇಷ್ಟಕ್ಕೂ ಅವರ ಬೇಟೆ ಜೀವನಲಿ ಹೆಬ್ಬಾವುಗಳ ಕೊಂದತ್‌ಲ್ಲೆ. ಯಾಕೆಂತ ಹೇಳ್ರೆ, ಅವು ಬೆಳ್ದ ಬೆಳೆಗೇ ಆಗಲಿ, ಜಾನುವಾರುಗಳಿಗಾಗಲಿ ತೊಂದರೆ ಕೊಟ್ಟದ್ ಅವರ ಅನುಭವಕ್ಕೆ ಬಾತ್‌ಲ್ಲೆ. ಹೊರಳಾಡುವ ಶಬ್ದ ಕೇಳಿದತ್ತ ಮೆಲ್ಲಂಗೆ ಹೆಜ್ಜೆ ಹಾಕಿದೊ. ನೋಡ್ಕನ ಸಂಕಪಾಲ ಹಾವು ಹೆಬ್ಬಾವು ಒಂದರ ನುಂಗಿಕೆ ನೋಡ್ದೆ. ಸಂಕಪಾಲಂತೆಳ್ರೆ ಕಾಳಿಂಗ ಸರ್ಪ. ಅದ್ ವಿಷದ ಹಾವು. ಬ್ರಾಹ್ಮಣರ್ ಮೇಲೆನ ಜಾತಿ ಆದರೆ, ಶೂದ್ರರ್‌ಂತೇಳ್ರೆ ಕೆಳಗೆನ ಜಾತಿ. ಹಾಂಗೆನೇ ಕಾಳಿಂಗ ಹಾವು ಕೆಳಗೆನ ಜಾತಿ. ಹಾವುಗಳಲ್ಲಿ ನಾಲ್ಕು ಜಾತಿ ಉಟ್ಟು. ಬ್ರಾಹ್ಮಣ, ವೈಶ್ಯ, ಕ್ಷತ್ರಿಯ, ಶೂದ್ರ ಅಂತ ಹೇಳುವೆ. ಹಿಂದೊಮ್ಮೆ ಎದುರಾದ ಕಾಳಿಂಗಂಗೆ ಗುಂಡು ಹೊಡ್ದಿದ್ದೊ ಗಡ. ಬುದ್ದಿ ಇಲ್ಲದೆ ಹೊಡ್ದೆಂತನೆ ಆ ಮೇಲೆ ತಿಳ್ಕೊಂಡೊಗಡ. ಗುಂಡು ಹೊಡ್ದಾಕನ ಹೆಡೆನ ತಗ್ಗಿಸಿ ಇವರ ಓಡ್ಸಿಕಂಡ್ ಬಾತ್‌ಗಡ. ಇವು ಹೇಂಗೋ ಅತ್ತ ಇತ್ತ ಓಡಾಡಿ ಈ ಕತೆ ಹೇಳಿಕೆ ಬದುಕಿ ಉಳ್ದೊಗಡ. ಮತ್ತೆ ಈಗ ಕಾಳಿಂಗ ದರ್ಶನ ಆಕಂಡ್ ಉಟ್ಟು. ಕಾಳಿಂಗನ ಚುರುಕು ಬುದ್ಧಿ ಹೆಬ್ಬಾವುಗೆ ಇಲ್ಲೆ. ಶರೀರ ದೊಡ್ಡದ್ ಇದ್ದರೂ ಹೆಬ್ಬಾವುನ ತಲೆ ಸಣ್ಣದ್.

ಆ ಬೋದಾಳ ಹೆಬ್ಬಾವುನ ಮಿದುಳು ಇದ್ದ ಸಣ್ಣ ತಲೆ ಕಾಳಿಂಗನ ಬಾಯೊಳಗೆ ಹೋಗಿ ಆಗುಟ್ಟು. ಹೆಬ್ಬಾವು ಭಾರೀ ನೋವುಂದ ಚಡಪಡಿಕೆ ಮಾಡಿಕಂಡ್ ಉಟ್ಟು. ಇನ್ನ್ ಇದರ ರಕ್ಷಿಸಿಕೆ ದೇವರಿಗೂ ಆಕಿಲ್ಲೆ. ಗೌಡ್ರು ತುಂಬಾ ದೂರಲಿ ನಿತ್ತ್ ಆಕಾಶಕ್ಕೆ ಒಂದು ಗುಂಡು ಹಾರ್ಸಿದೊಗಡ. ಗುಂಡುನ ಶಬ್ದ ಕೇಳಿ, ಪಿಂಡಿಬನ ಮುತ್ತಣ್ಣನವೂ ಕೇಪುನ ಬೆಡಿಯೊಟ್ಟಿಗೆ ಮತ್ತೆ ಅವರ ನಾಯಿಗಳೂ ಬೊಗಳಿಕಂಡ್ ಬಂದೊಗಡ. ನಾಯಿಗ ಬೊಗಳ್ದೊ, ಹಾವುಗಳ ಹಕ್ಕಲೆ ಹೋಕೆ ಹೆದರ್ದೊ. ಮುತ್ತಣ್ಣ ಗೌಡ್ರು ಅಪ್ಪಯ್ಯ ಗೌಡರ ಹಕ್ಕಲೆ ಬಂದ್ ಹೆಬ್ಬಾವು ಹೇಂಗೂ ಸತ್ತದೆ. ಈ ವಿಷದ ಕಾಳಿಂಗ ನಮ್ಮ ಮನೆಯವ್ಕೂ ದನಕರುಗಳಿಗೂ ತೊಂದರೆ ಮಾಡಿಯೇ ಮಾಡ್ದು, 'ಮುಗಿಸಿಬುಡಿ ಅಪ್ಪಯಣ್ಣ' ಎಂದ್ ಹೇಳಿದೊ ಗಡ. ಈ ಮಾತ್ ಕೇಳಿ ಗೌಡ್ರು ಕಾಳಿಂಗನ ತಲೆಗೆ ಒಂದು ಗುಂಡು ಹೊಡ್ತಾಕನ ಕಾಳಿಂಗನ ಬಾಯಿಂದ ಹೆಬ್ಬಾವುನ ತಲೆ ಹೊರಗೆ ಬೀತ್. ಎರಡೂ ಹಾವುಗ ಅಲ್ಲಿಯೆ ಹೊರಳಾಡಿ ಸತ್ತೊಗಡ. ಅಷ್ಟ್ ಹೊತ್ತ್‌ಲಿ ಗುಂಡುನ ಸಬ್ದ ಕೇಳಿ ಅವರ ಕೆಲ್ಸದವು ಅಲ್ಲಿಗೆ ಓಡಿ ಬಂದೊ. ಮರದಕುಂಟೆ, ಬಾಳೆಮಡ್ಳ್ (ಮಡಲು) ತಂದ್ ಒಂದು ಗುಂಡಿ ತೆಗ್ದ್ ಹಾವುಗಳ ಅದ್ಕೆ ದೂಡಿ ಹಾಕಿ ತಲೆಗಳಸ ಹಾಕಿ ಕಿಚ್ಚಿಕೊಟ್ಟೊ. ಇಲ್ಲದಿದ್ದರೆ ಬರಿಕಾಲ್‌ಲಿ ಹೋವವುಕ್ಕೆ ಅದರ ಮುಳ್ಳು ತಾಂಗಿರೆ ವಿಷ ಏರುವ ಅಂದಾಜಿ ಇದ್ದದೆ. ಇಷ್ಟೆಲ್ಲಾ ಆಕನ ಮುತ್ತಯ್ಯ ಗೌಡ್ರಲ್ಲಿ ಕೇಳಬೇಕಾದ್ದರ ಕೇಳಿ ಸಂಶಯ ತೀರ್ಸಿಕಂಡ್ ಅಂತೂ ಮನೆಗೆ ಬಾಕನ ಎರಡು ಹಾವುಗಳ ಸುಮ್ಮನೆ ಕೊಂದ್ ಬುಟ್ಟೆ. ಆದ್ರೂ ಕಾಳಿಂಗಂದ ಒಂದಷ್ಟ್ ಜನರ ಬಚಾವು ಮಾಡಿಕೆ ತಾನೆ ಹಾಂಗೆ ಕೊಂದದ್‌ಂತ ಸಮಾಧಾನ ಮಾಡಿಕಂಡೊ.

5

ಹುಲಿನ ಕೊಲ್ಲಿಕೆ ಮನಸ್ಸ್ ಹೇಳ್ದೆ

ಪಾರಿವಾಳ, ಕಾಡುಕೋಳಿ, ಹಂದಿ, ಕಡೆ, ಮೊಲ ಇವು ಸಾಲದೆ ಹೊಡ್ದರೆ ದನ ತಿಂಬ ಹುಲಿನೇ ಹೊಡೆಯೊಕು. ಕುಡೆಕಲ್ಲು ದೇವಯ್ಯನವರ ಮಂಞ ಅಪ್ಪಯ್ಯಂತ ಒಳ್ಳೆ ಈಡ್‌ಗಾರನಾಗಿ ಅವರ ನಂತರನೂ ಅವರ ಕೀರ್ತಿ ಉಳ್ಸಿಕಣೊಕು. ಹತ್ತ್ ಜನರಿಗೆ ಉಪಕಾರಕ್ಕೆ ಆಗಿ ಅವರ ಆತ್ಮಕ್ಕೆ ಸಂತೋಷ ತರೊಕು. ಜೀವನಲಿ ಏನಾದರೂ ಸಾಧಿಸೊಕು. ಕುಟುಂಬಲಿ ಕೀರ್ತಿ ಇದ್ದವ ಆಗಿ ಬದ್ಕೊಕು ಎಂದು ಅವು ತೀರ್ಮಾನ ತೆಕಂಡೊ.

ಕಾಡ್‌ಲಿ ಹುಲಿ ಎಲ್ಲಿ ಉಟ್ಟೂಂತ ಸುಮ್ಮನೆ ಹುಡುಕಿಕಂಡ್ ಹೋಕೆ ಸಾಧ್ಯ ಇಲ್ಲೆ. ಊರೊಳಗೆ ಬಂದ್ ಉಪದ್ರ ಮಾಡಿರೆ ಆಗ ಹುಲಿನ ಕೊಲ್ಲುದರ್ಲಿ ಒಂದು ಧರ್ಮ ಉಟ್ಟು. ಹೀಂಗೇಂತ ಅವು ನೆನ್ಸಿಕಂಡ್ ಇದ್ದೊ. ಆದರೆ ಅಂಥ ಸಂದರ್ಭ ಇವರ ಪಾಲಿಗೆ ಬಾತ್. ಆಗ ಇನ್ನೂ ಮಳೆ ಸುರು ಆತಿತ್ತ್. ಬೇಸಾಯಕ್ಕೆ ಬೇಕಾದ ನೊಂಜ ನೇಗಿಲ್, ಕಂಪ ಸಮ ಮಾಡಿಕೆ ಮರದ ಹಲಗೆ ಇದರೆಲ್ಲ ಸರಿ

ಮಾಡಿಕಂಡ್ ಇರ್ಕನ ಗುಂಡ್ಯ ಚೋಯಂಬು ಬಾತ್. ಮಾಡ್ದ ಬೇಟೆ ಉದ್ದಕ್ಕೂ ಬೇಟೆಗೆ ಜೊತೆ ಆದವ. ದೊಡ್ಡ ಬೇಟೆಗಾರಂತ ಅಲ್ಲದಿದ್ದರೂ, ಗೌಡರ ಬೇಟೆಲಿ-ಈಡುಗಾರಿಕೆಲಿ ವಿಶ್ವಾಸ ಇದ್ದಂವ ಆಗಿತ್ತ್. ನೆಂಟ ಅಲ್ಲದಿದ್ದರೂ ಅದರ್‌ಂದ ಹೆಚ್ಚಿನವ ಆಗಿತ್ತ್. ಭಾರಿ ಹೆಚ್ಚ್ ಜಾತಿನ ಮೇಲೆ ಪ್ರೀತಿ ಇದ್ದರ್‌ಂದ ನಮ್ಮ ದೇಶ ಇಷ್ಟ್ ಹಾಳಾಗಿ ಹೋತ್. ಹಾಂಗೇಂತ ಗಾಂಧೀಜಿ, ನೆಹರೂ, ಅಂಬೇಡ್ಕರ್ ಬರ್ದದರ ಓದಿದ ನೆನ್ಪು ಇವುಕೆ. ಎರಡ್ ಗಿಳಿಗಳ ಪೈಕಿ ಮುನಿ ಒಬ್ಬನೊಟ್ಟಿಗೆ ಬೆಳ್ದ ಗಿಳಿ ಒಳ್ಳೆ ಅಭ್ಯಾಸ ಕಲ್ತ್‌ಕಂಡತ್. ಬೇಡ ಸಾಂಕಿದ ಗಿಳಿ ಕೆಟ್ಟ ಕೆಟ್ಟದಾಗಿ ಮಾತಾಡಿಕೆ ಕಲ್ತತ್ "ಸಂಸರ್ಗತಾ ದೋಷ ಗುಣಾಭವಂತಿ". ಒಳ್ಳೆ ಮನುಷ್ಯರ ಒಟ್ಟಿಗೆ ಇದ್ದಂವ ಒಳ್ಳೆಯವ ಆದೆಂತ ಹೇಳುದಕ್ಕೆ ಇವರ ಸುತ್ತ ಇದ್ದ ಜೊತೆಯವೇ ಸಾಕ್ಷಿ.

ಜಾತಿ ಬಗ್ಗೆ ಆಲೆಟ್ಟಿನ ರಾಮಣ್ಣ ಶಗ್ರಿತ್ತಾಯರಿಗೆ ಆಗಲಿ, ನೆಡ್ಜಿಲ್ ಈಶ್ವರ ಭಟ್ಟರಿಗೇ ಆಗಲಿ, ಬಡ್ಡಡ್ಕದ ರಾಮಚಂದ್ರ ಕಲ್ಲೂರಾಯರಿಗಾಗಲಿ ಹೆಮ್ಮೆ ಇತ್ತ್‌ಲ್ಲೆ. ಚೊಯಂಬೂಂತ ಹೆಳುವವು ಈಗ ಇರುವ ಬೊಳ್ಳುಕುಂಞಯವರ ಅಪ್ಪ. ಇವು ಕುಡೆಕಲ್ಲ್‌ನ ವಿಷ್ಣುಮೂರ್ತಿ ಕೋಲ ನಡೆಸಿಕೆ ಬೇಕೇ ಬೇಕು. ಇಂಥ ಚೋಯಂಬು ಬಂದವು "ಅಪ್ಪಯ್ಯಣ್ಣಾ ಕಲ್ಲುರಾಯರ ಮನೆ ಹಕ್ಕಲೆ ಒಂದು ದನನ ಹುಲಿ ಹಿಡ್ದುಟ್ಟು, ಹಂಞ ಕಷ್ಟಪಟ್ಟರೆ ನೀವು ಅದಕ್ಕೆ ಗುಂಡು ಹೊಡಿಯಕ್" ಎಂತ ಹೇಳ್ದೊಗಡ. ಆಗನ ಕಾಲಲಿ "ಹುಲಿ ಬೇಟೆ ಮಾಡದಿದ್ದರೆ ದನಂಗ ಉಳಿಯಕಿಲ್ಲೆಂತ". ಇದ್ ತಿಳ್ದವರ ಬಾಯಿನ ಮಾತ್ ಆಗಿತ್ತ್. ಬೇಟೆ ಕತ್ತಿ ಹಿಡ್ಕಂಡ್ ಗೌಡ್ರ ಒಟ್ಟಿಗೆ ಬೀಡಿ ಎಳ್ಕಂಡ್ ನಡ್ಕಂಡ್ ಹೋಕನ ದಾರಿಲಿ ಇನ್ನೂ ಹಂಞ ವಿಷಯ ಗೌಡ್ರಿಗೆ ಗೊತ್ತಾತ್. ಹುಲಿ ಹಿಡ್ದದ್ ಚಳ್ಳಂಗಾರು ಶಿವಣ್ಣ ಗೌಡ್ರದ್ದ್‌ಗಡ. ಎರಡ್ ದಿನಗಳ್‌ಂದ ಹಟ್ಟಿಗೆ ಬಾತಿಲ್ಲೆಗಡ. ದನನ ಹುಡುಕಿಕಂಡ್ ಶಿವಣ್ಣ ಗೌಡ್ರು ಕಲ್ಲೂರಾಯರ ಮನೆ ಹಕ್ಕಲೆ ಬಂದೊ. ಗುಡ್ಡೆಗೆ ಬಾಕನ, ದನದ ಕೊಂಬು, ಬೀಲ-ಎಲುಬುಗ ಕಂಡತ್‌ಗಡ. ಕಾಡ್ ನೊಣಂಗ ಗುಂಯ್ ಗುಂಯ್‌ಂತ ಹಾರಿಕಂಡ್ ಇದ್ದ್. ಹುಳ ಹುಪ್ಪಟೆಗ ಅದರ್‌ಂದ ಪಾಲ್ ತಗೊಂಬೊತಿದ್ದದ್ ನೋಡಿದ್ದೊಗಡ. ಹಾಂಗೆ ಅವು ಹೇಳ್ದಕೆ ಅಲ್ಲಿಗೇ ಗೌಡ್ರು ಹೋದೊ. ವಾಸನೆಲಿ ಅಲ್ಲಿ ನಿಲ್ಲಿಕೆ ಆತಿತ್ತ್‌ಲ್ಲೆ. ಮಾಸ ಹೆಚ್ಚಿಗೆ ಇಲ್ಲದ ಹೆಣಕ್ಕೆ ಹುಲಿ ಬಾದೂಂತ ಕಾದು ಕುದ್ದರೆ ಏನು ಸಾರ್ಥಕ ಇಲ್ಲೆ. ಒಂದು ದಿನದ ಮಟ್ಟಿಗೆ ಬೆಡಿ ಕಟ್ಟಿರೆ ಏನಾದೂಂತ ಚೊಯಿಂಬುಗೆ ಹೇಳಿಕನ ಅವನೂ ಒಪ್ಪಿತ್. ಹಾಂಗೆ ಬೆಡಿ ಕಟ್ಟುದೂಂತ ಆಗಿ ಹುಲಿ ಬಾವ ಜಾಗನ ಸರಿಯಾಗಿ ಗುರ್ತು ಮಾಡಿ ಬೆಡಿಗೆ ತೋಟೆ ತುಂಬಿಸಿ ಟ್ರಿಗರ್‌ನ ಹಗ್ಗಂದ ಎಳ್ದ್ ಕಟ್ಟುದು. ಪ್ರಾಣಿನ ಕೈಗೋ ಮೈಗೋ ಹಗ್ಗಕ್ಕೆ ತಾಂಗಿರೆ ಪ್ರಾಣಿ ಸತ್ತ್ ಹೋದೆ. ಇಂತ ಬೇಟೆಂದ ರೋಮ ನಿಮಿರುವಂತದ್ ವಿಶೇಷ ಏನೂ ಇರ್ದುಲ್ಲೆ. ಮರ್ಮಕ್ಕೆ ತಾಂಗಿರೆ ಪ್ರಾಣಿ ಸತ್ತ್ ಹೋದೆ. ಒಂದು ರೀತಿಲಿ ನೋಡಿರೆ ಇದ್ ಹೇಡಿತನದ ಕೆಲ್ಸ. ಆದರೆ ಮಹಾಭಾರತದ ಯುದ್ಧಲಿ ಕರ್ಣ ಹಿಂದೆಂದ ನಿತ್ತ್ ಅಭಿಮನ್ಯುನ ಕೊಂದತಿಲ್ಲೆನೋ ಹಾಂಗೆ ಆದೆ.

ಹಗಲ್ ದನಂಗ, ರಾತ್ರಿಲಿ ಬೇಟೆ ಆಡುವವು ಅಲ್ಲಿ ಬಂದ್ ಬಳ್ಳಿ ತಾಂಗಿರೆ ಗುಂಡು ಅವುಕೆ ತಾಂಗಿ ಬುಡ್ದು. ಆದರೂ ದೇವರ ನೆನ್ಸಿ ಕಂಡ್, ಧೈರ್ಯ ಮಾಡಿಕಂಡೊ. ಊರ್‌ಲಿ ಹುಲಿ ದನನ ಹಿಡ್ದದ್, ಬೆಡಿ ಕಟ್ಟಿದ್ ಎಲ್ಲವುಕ್ಕೆ ಗೊತ್ತಾದೆಂತ ಮನಸ್ಸ್‌ಲಿ ಗೊತ್ತಿತ್ತ್. ಕೆಟ್ಟದ್ ಏನೂ ಆಕಿಲ್ಲೆಂತ ಧೈರ್ಯ ಮಾಡಿಕಂಡೊ.

ಮರ್ದಿನ ಬೊಳ್ಪುಗೆ ಯಾರೋ ಬಂದಾಂಗೆ ಆತ್. ನೋಡಿರೆ ಕಲ್ಲುರಾಯರ್ "ಅಪ್ಪಯ್ಯ ಬೇಗ ಬಾ ಹುಲಿ ಬಿದ್ದುಟ್ಟು. ಎಂತದ್ ಮಾಡೊಕೂಂತ ಗೊತ್ತಾದುಲ್ಲೆಂತ ಹೇಳಿದೊ" ಎಂತ ಆದರೂ ಇರ್‌ಲೀಂಥ ಮನೆಲಿ ಕೇಪುನ ಬೆಡಿ ಇದ್ದದರ ಗೌಡ್ರು ತೆಕೊಂಡು ಹೋದೊಗಡ. ನೋಡಿರೆ, ಹೆಬ್ಬುಲಿ ಬಿದ್ದುಟ್ಟು. ಅದೋ ಭಾರಿ ದೊಡ್ಡ ಹುಲಿ. ಅಂತೂ ಬೆಡಿ ಕಟ್ಟ್‌ವ ವಿದ್ಯೆ ಕಲ್ತಾಂಗೆ ಆತ್. ಅಪ್ಪ ದೇವಯ್ಯ ಗೌಡ್ರು ಹೇಳ್ದ್ ನೆನ್ಪಾತ್. ಅದರ ಮೀಸೆ ಕಿತ್ತ್ ತೆಕಂಡ್ ಪುತ್ತೂರು ತಾಲೂಕಿನ ತಾಸಿಲ್ದಾರ್ರ ಆಫೀಸಲಿ ಚಿಟ್ಟೆ ಹುಲಿ ಚರ್ಮಕ್ಕೆ 25ರೂಪಾಯಿ, ಪಟ್ಟೆಹುಲಿ ಚರ್ಮಕೆ ಐವತ್ತ್, ಹೆಬ್ಬುಲಿಗೆ ನೂರು ರೂಪಾಯಿ ಸರಕಾರ ಕೊಟ್ಟದೇಂತ. ಹಾಂಗೆ ಮೀಸೆನ ಸುಡಿಸಿಕೆ ಸರಕಾರ ಪಟೇಲ್ರಿಗೆ ತಾಕೀತ್ ಮಾಡಿತ್ತ್. ಹುಲಿನ ಮೀಸೆ ಭಾರಿ ವಿಷಗಡ. ಅಂದ್ ಗೌಡ್ರು ಬೆಡಿನ ಬಿಚ್ಚಿ, ಮೀಸೆ ಸುಡಿಸಿ ಆಕನ ನೀಲಿ ಹೊಗೆ ಎದ್ದತ್‌ಗಡ, ಮತ್ತೆ ಚರ್ಮನ ಉಗುರುನ ತೆಕಂಡ್ ಮನೆಗೆ ತಾಕೆ ಹೇಳಿದ್ ಮನೆಗೆ ವಾಪಾಸ್ ಬಂದೋ. ಅಂತೂ ಅಂದ್ ಆಡ್ದ್ ಗಂಡ್ ಬೇಟೆ ಆತಲ್ಲೇಂತ ಮನಸ್ಸ್ ಹೇಳ್ತಿತ್ತ್. ಅದರ ಹೇಳ್ಕನ ಚೊಯಂಬು ಹೇಳ್ತ್ ಇನ್ನೊಂದು ಕೂಡು ಬೇಟೆ ಆಡೊಮ್ಮೋಂತ.

6

ಬೋಳ ಗೌಡನ ಕುಮೇರಿ

ಬಡ್ಡಡ್ಕದ ಒಂದು ಭಾಗಂದ ಕೇರಳದ ಗಡಿ – ಹಕ್ಕಲೆಗೆ ಕಲ್ಲಪಳ್ಳಿ ಸಿಕ್ಕಿದೆ. ಕಲ್ಲಪಳ್ಳಿಲಿ ಪಾತಿಕಲ್ಲ್ ಬೋಳ ಗೌಡನೂ ಕಷ್ಟಪಟ್ಟು ಜೀವನ ಮಾಡುವ ಒಬ್ಬ ಕೃಷಿಕ. ಹೆಸರು ಹೆಂಗೆನೂ ಇರಲಿ "ಕೈ ಕೆಸರ್ ಮಾಡ್ರೆ ಬಾಯಿ ಮೊಸರ್" ಎಂದ್ ತಿಳ್ದು ಅದರ ತೋರಿಸಿ ಕೊಟ್ಟಂವ. ತಟ್ಟ್ ಜಾಗೆಲಿ ಮಾತ್ರ ಅಲ್ಲದೆ ಕುಮೇರಿ ಕಡ್ದ್ ಅದರ್ಲಿನೂ ಧಾರಾಳ ಭತ್ತದ ಬೆಳೆ, ನವಣಿ, ಚಾಮೆ, ಚಿಬರಿ, ಹಂಞ ಜೋಳ ಎಲ್ಲನೂ ಬೆಳೆಸುತ್ತಿದ್ದೊ. ಇವು ಈಗ ಕಲ್ಲಪಳ್ಳಿಲಿ ಗಿರೀಶ ಪೆರುಮುಂಡ, ಕೂಸಪ್ಪ ಗೌಡರ ಮಂಜ ಅವರ ದೊಡ್ಡಪ್ಪ ಬೋಳಗೌಡ. ಇವು ಜೇನು ಪೆಟ್ಟಿಗೆ ಇಸಿಕಂಡ್ ಅದರ ವಿಷಯ ಎನಾರೂ ಕೇಳಿಕೆ ಇದ್ದರೆ ಮನೆಗೆ ಬಾತಿದ್ದೊಗಡ. ಈ ಸರ್ತಿನ ಕುಮೇರಿ ಬೆಳೆ ಹೇಂಗೆ ಉಳ್ಸಿಕಂಬದೂಂತ ಹೆದ್ರಿಕೆ ಆಗಿ ಮನೆಗೆ ಬಂದಿದ್ದೊಗಡ. ಕಾಟಿ, ಕಡೆ, ಮೊಲಂಗ ಬಂದ್ ಅಡ್ಡಾದಿಡ್ಡಿ ಓಡಾಡಿ ತಿಂದ್ ಹಾಳು ಮಾಡಿಕಂಡಿದ್ದೊ, ಅಪ್ಪಯ್ಯ

ಗೌಡ್ರಿಗೆ ಶಿಕಾರಿಗೆ ಬರೋಕೂಂತ ಹೇಳಿಕೆ ಬಂದಿದ್ದೊ, ಇಂದ್ ರಾತ್ರಿ ಬೇಟೆಗೆ ಬರೊಕೂಂತ ಒತ್ತಾಯ ಮಾಡ್ದೋ. ಮೂರನೆ ಸರ್ತಿಗೆ ಅವು ಹೇಳಕನ ಆತ್ ಬನ್ನೇಂತ ಗೌಡ್ರು ಹೇಳಿದೊಗಡ. ನಿಗಂಟ್ ಮಾಡ್ರೆನೂ ನಿನ್ನೆ ರಾತ್ರಿ ಅವರೊಟ್ಟಿಗೆ ಬಂದುವು ಇಂದು ಬಾಕೆ ಒಪ್ಪಿಕೆ ಇಲ್ಲೇಂತ ಅಂದಾಜಿ ಮಾಡಿ ಸುಳ್ಯ ಮತ್ತ್ ಆಲೆಟ್ಟಿನ ಮುಸ್ಲೀಂ ಬಂಧುಗಳಿಗೆ ಕಾಟಿ ಬೇಟೆ ಉಟ್ಟುಂತ ಬಾಕೆ ಹೇಳಿ ಕಳ್ಸಿದೊ. ಹುಲಿ ಬೇಟೆ ಆದರೆ, 'ಎಂಡೆ ಪಡ್ಚೋನೇ ಅಲ್ಲಾ ಇಮಕ್ಕ್ ಬೇಂಡಪ್ಪಾಂತ' ಹೇಳುವ ಅವು ಕಾಟಿ ಬೇಟೆಂತೇಳ್ರೆ ಖುಷಿಲಿ ಬರ್ತಿದ್ದೊಗಡ. ಗುಂಡು ತುಂಬಿದ ಬೆಡಿನ ಹೆಗಲಿಗೆ ಏರಿಸಿ ತೋಟೆ ತುಂಬಿದ ಚೀಲನ ಕೋಸಿಕಂಡ್ ಅಪ್ಪಯ್ಯ ಗೌಡರ್ ಬೇಟೆಗೆ ಹೊರ್ಟ್ರೊಂತ ಹೇಳ್ರೆ, ಅಂದ್ ಬೇಟೆ ಸಿಕ್ಕುದು ನಿಗಂಟ್ ಎಂತ ಊರಲಿ ಎಲ್ಲವ್ಕ ತಿಳ್ದ ಮಾತಾಗಿತ್.

ಬಂದೇ ಬುಟ್ಟೋ ಅದ್ರಾಮಿಚ್ಚ (ಬಿಸ್ಮತ್), ಹಾಜಿ ರೆಹಮಾನ್ ಕಟ್ಟೆ ಸುಳ್ಯ, ಅಬ್ದುಲ್ಲಾ ಹಾಜಿ (ಕಟ್ಟೆಕ್ಕಾರ್ಸ್‌ರವರ ಅಜ್ಜ), ಕಟ್ಟೆ ಅಬೂಬಕ್ಕರ್ ಹಾಜಿ ಸುಳ್ಯ ಮಹಮ್ಮದ್ ಹಾಜಿ, (ಮಮ್ಮಿಚ್ಚ)ರ ತಂದೆ ಕುಂಬ್ಳೆ ಖಾದಿರಿ ಬ್ಯಾರಿ, ಹಸೈನಾರ್ ಮುಂತಾದವರು ಅಲ್ಲುಲ್ಲಾಚ್ಚ ಹೇಳಿದರು. 'ಪಂಚಮಂ ಕಾರ್ಯಕಾಸಿದ್ದಿ', 'ನಾವ್ ಐದ್‌ಜನ ಒಳೋ, ನಾವು ಪಂಚಪಾಂಡವರು ನೀವೊಬ್ಬ ಶ್ರೀಕೃಷ್ಣ ಹೇಂಗುಟ್ಟು ನಮ್ಮ ಕೂಟ?" ಗೌಡ್ರು ಹೇಳ್ದೋ, 'ನನ್ನ ದ್ರೌಪದೀಂತ ಹೇಳದ್ದ್ ನನ್ನ ಪುಣ್ಯ ಮಾರಾಯ"ಂತ. ಎಲ್ಲವೂ ಹೋ.. ಹೋ ಹೋಂತ ದೊಡ್ಡದನಿ ತೆಗ್ದ್ ನೆಗಾಡ್ದೋ. ಅಂತೂ ಇವರ್ ಕೂಟ ಬೊಳ ಗೌಡ್ರ ಕುಮೇರಿಗೆ ಎತ್ತ್‌ಕನ, ಬೋಳ ಗೌಡ್ರು ಕಾಯತಿದ್ದೊ. ಇವು ಎಲ್ಲ ಮೆಲ್ಲಂಗೆ ಅವರ ಬೇಲಿ ದೂಕಿ ಮುಂದೆ ಹೋದೋ. ನಾಲ್ಕ್ ಹೆಜ್ಜೆ ಮುಂದೆ ಹೋಕನ ಪ್ರಾಣಿ ಒಂದು ಲೈಟಿಗೆ ಕಣ್ಣ್ ಕೊಟ್ಟತ್. ಕಣ್ಣ್ ನೋಡಿರೇ ಕಡೇಂತ ಗೊತ್ತಾಗಿ ಬೆಡಿನ ಕುದರೆನ ಎಳ್ದ್ ಆಕನ ಹೊಗೆ ಹೊರ್ಡಕನ 'ಕಡೆ' ಬಿದ್ದ್ ಆತ್. ನಿನ್ನ ಕೆಲಸ ಮಾಡೂಂತ ಅದ್ರಾಮಂಗೆ ಹೇಳಿದೊ. ಅಂವ ಪೀಚೆ ಕತ್ತಿ ತೆಕ್ಕಂಡ್ ಬಿಸ್ಮತ್ ಮಾಡಿಕೆ ಕಡೆ ಬಿದ್ದಲ್ಲಿಗೆ ಹೋತ್. ದೇವರ ನೆನೆಸಿ ಚೂರಿ ಹಾಕಿತ್.

ಬೋಳ ಗೌಡ್ರು ಕುಮೇರಿ ಮಧ್ಯಲಿ ಇದ್ದ ಮಾಡಂಗೋಲಿಗೆ ಕರ್‌ಕಂಡ್ ಹೋಕನ ಒಂದು ಕಣ್ಣ್‌ನ ಪ್ರಾಣಿ ಲೈಟಿಗೆ ಕಣ್ಣು ಕೊಟ್ಟತ್. ಬೋಳ ಗೌಡ್ರು 'ಹೊಡಿಬೇಡಿ ಅಪ್ಪಯ್ಯಣ್ಣಂತ' ಹೇಳ್ದೋಗಡ. ಏನಾದ್ರೂ ಆಗ್ಲಿ, ಪರೀಕ್ಷೆ ಮಾಡೋಮ್ಮೊಂತ ಕಣ್ಣ್ ನೋಡಿ ಒಂದು ಗುಂಡು ಹೊಡ್ದೊ. ಪ್ರಾಣಿನ ಬೊಬ್ಬೆನೂ ಇಲ್ಲೆ, ಬಿದ್ದದ್, ಓಡಿದ್, ಒಂದೂ ಗೊತ್ತಾತ್‌ಲ್ಲೆ. ಬೊಳ್ಪುಗೆ ಹುಡುಕಿರೆ ಆತ್‌ಂತ ತಡ್ತರೂ, ಅವೆಲ್ಲ ಸೇರಿ ಹುಡ್ಕಿದೊ. ಬಚ್ಚಿದವ್ಕೆ ಬೀಡಿ ಎಳ್ದಾಕನ ಬೋಳ ಗೌಡ್ರು ಹೇಳ್ದೊ 'ಬೀಳುವ ನೀರ್‌ನ ಜಾಗೆಲಿ ಮೊಂಟೆ ಕಟ್ಟುದು, ಅದು ಸದ್ದಾಕಂಡೇ ಇದ್ದದೆ. ನಡು ನಡುಲಿ ಬೆರ್ಚಪ್ಪನ ನಿಲ್ಸುದು. ಹೀಂಗೆ ಪ್ರಾಣಿಗಳ ಓಡ್ಸಿಕೆ ಉಪಾಯ ಮಾಡ್ದೂಂತ." ಆಗ ಕೆಂಪು ಕಣ್ಣ್‌ನ ವಿಷಯ ಬಾತ್. ಆರ್ ತಿಂಗಳ ಹಿಂದೆ ಒಬ್ಬ ಬದ್‌ಕಿದ್ ಸಾಕಾಗಿ ಕುತ್ತಿಗೆಗೆ ಬಳ್ಳಿ ಹಾಕಂಡ್ ಸತ್ತುಟ್ಟುಗಡ. (ಅವನೇ

ಹಾಕಂಡತೋ ಯಾರಾರ್ ತೂಂಗಿದನೋ) ಆಗ ಕಂಡ ಕಣ್ಣ್ ಅವಂದೇಂತ. ಅದ್ಕೆ ನಾನ್ ಗುಂಡು ಹೊಡೆಯೊದು ಬೇಡಾಂತ ಹೇಳ್ದೇಂತ ಬೋಳ ಗೌಡ್ರು ಹೇಳ್ದೊಗಡ. ಆಗ ಕೂಡ್ಲೇ ಖಾದಿರಿ ಹೆದರಿಕೆನ ಸ್ವರಂದ "ಎಂಡೆರಬ್ಬೆ ಇಮಕ್ಕ್ ಇದ್ ಬೇಂಡ ಗೌಡ್ರೇ, ಇಮಾ ಇವಿಡೆನ್ನ್ ಬೀಯಂ ಪೋಯಿ". ಗೌಡ್ರು ಅವುಕೆಲ್ಲ ಬೈದ್ ಸುಮ್ಮನೆ ಮಲ್ಗಿಂತ ಹೇಳ್ದೊ. ಎಲ್ಲವೂ ನಿದ್ದೆ ಮಾಡ್ದೊ. ಗೌಡ್ರಿಗೆ ತಲೆ ಹಕ್ಕಲೆ ಯಾರೋ ಕುದ್ದ್ ಆಗ ಕಣ್ಣ್ ಕೊಟ್ಟದ್ದ್ ಒಂದು ಪ್ರೇತ. ಇದ್ ಹೆಚ್ಚಿಗಿನ ತೊಂದರೆ ಇರುವ ಜಾಗೆ ಎಂದ್ ಹೇಳ್ದಾಂಗೆ ಆತ್. ಎದ್ದ್ ನೋಡಿರೆ ಬೊಳ್ಪಾಗಿತ್ತ್‌ಗಡ. ಎಲ್ಲವರ ಎದ್ರಿಸಿ ಒಕ್ಕಣ್ಣಂಗೆ ಗುಂಡು ಹೊಡ್ದ ಜಾಗೆಗೆ ವಾಪಾಸ್ ಬಾಕನ ಅಲ್ಲಿ ಏನ್ ಗುರ್ತೂ ಇತ್ತ್‌ಲ್ಲೆ. ಮಾಡಂಗೋಲಿಗೆ ವಾಪಾಸ್ ಬಾಕನ ಮಾಸನ ಆರ್ ಪಾಲ್ ಮಾಡಿ ಇಸಿದ್ದೊ. ಐದು ಜನ ಪಾಂಡವುಕ್ಕೆ ಮತ್ತೆ ಒಂದ್ ಪಾಲ್ ಬೋಳ ಗೌಡರಿಗೆ. ಇವು ಮನೆಗೆ ಬಂದ್ ದೋಸೆನೂ ಚಟ್ನಿನೂ ತಿಂದ್ ಮಲಗಿದೊಗಡ.

7

ಪಟ್ಟೆ ಹುಲಿ ಮತ್ತು ಹಂದಿನ ಕುಣ್‌ತ

ನಮ್ಮೂರ್‌ಲಿ ಹುಲಿ ಮತ್ತ್ ಹಂದಿ (ಪಿಲಿ-ಪಂಜಿ) ಕುಣಿತ ಅಂತೇಳುವ ಒಂದು ಕುಣಿತ ಉಟ್ಟು. ಒಂದು ಮನುಷ್ಯ ಹುಲಿ ಮೋರೆ ಹಾಕಿಕಂಡ್, ಇನ್ನೊಬ್ಬ ಹಂದಿ ಮೋರೆ ಹಾಕಿಕಂಡ್ ಒಟ್ಟಿಗೆ ಕುಣಿಯುವ ಕ್ರಮ. ಆದರೆ ಇಲ್ಲಿ ನಿಜವಾದ ಹುಲಿ, ನಿಜವಾದ ಹಂದಿ ಎದುರೆದುರಾಗಿ ಕುಣಿವ ವಿಷಯ ನಡ್‌ದಿತ್.

ಬೇಸಾಯ ಮಾಡುವವು ಪ್ರತಿ ಗದ್ದೆಗಳಿಗೆ ಒಂದು ಹೆಸರಿಸುದು ಕ್ರಮ. ಬಡ್ಡಡ್ಕದ ನಮ್ಮ ಆಸ್ತಿಲಿ ಹಂಞಾ ಗದ್ದೆಗಳಿಗೆ ನಾವು ನಡುಗದ್ದೆ ಎಂದು ಹೇಳುದು ವಾಡಿಕೆ. ಏಣೆಲು, ಸುಗ್ಗಿ, ಕೊಳಕೆಂತ ಮೂರು ಬೆಳೆ ಬೆಳೆಯುವ ಗದ್ದೆ. ತುಂಬಾ ನೀರ್‌ನ ಜಾಗ. ಈ ನಡುಗದ್ದೆನ ಮೂರು ದಿಕ್ಕ್‌ಲಿ ಎತ್ತರದ ಜಾಗೆ ಉಟ್ಟು. ಪ್ರಾಣಿಗ ಅಪಾಯದ ಹೆದರಿಕೆಂದ ಓಡಿ ಬಂದು ಗದ್ದೆಗೆ ಬೀಳ್‌ತಿದ್ದೊ. ಕಾಡ್‌ಕೋಣ, ಕಡೆ, ಚಿಟ್ಟೆ ಹುಲಿ ಮತ್ತ್ ಸೀಳುನಾಯಿಗಳೂ ಬೀಳುತ್ತಿದ್ದೊ. ಹಂಗೆ

ಬಂದು ಒದ್ದಾಡ್‌ಕನ ಕೊಲ್ಲುದು ಬಾರಿ ಸುಲಭ. ಆದರೆ ಇನ್ನೊಬ್ಬರ ಕಷ್ಟ ಕಾಲನ ನಮ್ಮ ಅನುಕೂಲಕ್ಕೆ ಬೇಕಾದ ಹಾಂಗೆ ಮಾಡಿಕಂಬುದು ಅನ್ಯಾಯಾಂತ ಯೋಚಿಸಿ ಗೌಡ್ರು ಸೋತ ಪ್ರಾಣಿಗಳ ಸುದ್ದಿಗೆ ಹೋತಿತ್ತ್‌ಲ್ಲೆ. ನಮ್ಮ ಮನೆಯ ಬಲಭಾಗಲಿ ಮಜಲ್‌ಗದ್ದೆ ಉಟ್ಟು. ಅದರ್ಲಿ ಸಾಧಾರಣ ನಾವು ಬಳ್ಳಿ ಗೆಣಸ್ ಮತ್ತೆ ತರಕಾರಿ ಬೆಳೆಸುವುದು ವಾಡಿಕೆ. ವರ್ಷದ ಹಬ್ಬದ ಸಮಯ ಮನೆಲಿ ನಾಲ್ಕೈದು ನಾಯಿಗ ಇದ್ದರೂ ಕಾಡು ಹಂದಿಗ ಗದ್ದೆಗೆ ನುಗ್ಗಿ ಗೆಣಸು ತಿಂದು ಹೋತಿದ್ದೊ. ಮನೆಗೆ ಹಂಞ ದೂರಲೇ ಗೆಣಸ್ ಬೆಳೆವ ಗದ್ದೆ ಇತ್ತ್. ಹಟ್ಟಿಗೆ ಹುಲಿ ಬಂದ್ ಒಂದೆರಡು ದಿನಗ ಕಳೆದಿತ್ತ್. ಆ ರಾತ್ರಿ ಗದ್ದೆಂದ ಹಂದಿನ ಗುರು ಗುರು ಸದ್ದ್ ಕೇಳ್ತಿತ್ತ್. ಕಳ್ಳ ಹಂದಿಗೆ ಕಲ್ಸಿನೆ ಬುದ್ದೀಂತ ಹೇಳಿ ಗೌಡ್ರು ಲೈಟ್ ತಲೆಗೆ ಕಟ್ಟಿ, ಬೆಡಿನ ಹೆಗಲಿಗೆ ಇಸಿ ಗೆಣಸಿನ ಗದ್ದೆಗೆ, ಹೋಕನ ಲೈಟ್‌ನ ಕೆಡಿಸಿದ್ದೊ. ಯಾಕೆಂತೇಳ್ರೆ ಹಂದಿಗ ಲೈಟಿಗೆ ಕಣ್ಣು ಕೊಡ್ತುದ್ಲೆ. ಸಿಟ್ಟು ಬಂದಾಕನ, ಯಾವುದರ ಮೇಲೆ ಆದರೂ ಬಿದ್ದ್ ಕೊಂದು ಹಾಕಿಕೆ ನೋಡುವ ಪ್ರಾಣಿ. ಅವು ಕಳ್ಳ ಹೆಜ್ಜೆಲಿ ಮುಂದೆ ಹೋದೊ. ಕಣ್ಣ್‌ನ ಕತ್ತಲೆಗೆ ಒಗ್ಗಿಸಿಕೊಂಡ್ ಅವುಕೆ ಅಭ್ಯಾಸ ಇತ್ತು. ಎಡಭಾಗ ಮಸುಕಾಗಿ ಒಂದು ರೂಪ ಕಂಡತ್, ಕತ್ತಲೆಗೆ ಒಗ್ಗಿದ ಕಣ್ಣ್‌ಗೆ ಪ್ರಾಣಿ ಎಂತದೊಂತ ಗೊತ್ತ್ ಆತ್. ಸಣ್ಣ ಆನೆ ಮರಿನ ಹಾಂಗೆ ಇದ್ದ ಹಂದಿಯೊಂದ್ ಗದ್ದೆ ಪುಣಿಲಿ ಬಂಡೆಕಲ್ಲಿಗೆ ಅದರ ದೊಡ್ಡ ಕುಂಡೆನ ಒತ್ತಿಕಂಡ್ ಕುದ್ದಿತ್ತ್. ಆ ಗಾತ್ರದ ಹಂದಿನ ವರ್ಗಾಳ ಹಂದೀಂತ (ದೊಡ್ಡ ಹಂದಿ ಕೋರೆ ದೊಡ್ಡದ್) ಹೇಳುವೆ. ಯಾಕೆ ಹಿಂಗೆ ಕುಂಡೆನ ಒತ್ತಿ ಕುದ್ದ್‌ಕಂಡ್ ಉಟ್ಟೊಂತ ನೋಡ್ಕನ ಬಲಕ್ಕೆ ಕಂಡತ್ ಒಂದು ಹೆಬ್ಬುಲಿ. ವರ್ಗಾಳ ಹಂದಿ ಆನೆಗೂ ಹೆದ್ರದ ಬಲ ಇದ್ದ ಪ್ರಾಣಿ. ಹಂದಿನ ದೊಡ್ಡ ಕೋರೆ ಹಲ್ಲೊಂತ ಹೇಳಿರೆ ಬಾಣ ಇದ್ದಂಗೆ. ಹೆಬ್ಬುಲಿಗೆ ಅದರ ಮೇಲೆ ಹಾರಿಕೆ ಧೈರ್ಯ ಇಲ್ಲೆ. ಕೋರೆ ಹಲ್ಲಿನ ಹಂದಿ ಧೈರ್ಯ ಇದ್ದರೆ ಬಾ ನೋಡೋಮಾಂತ ಹೆಬ್ಬುಲಿ ಮುಂದೆ ಬರ್‌ಲಿಂತ ಕಾದದೆ.

ಅವು ಎರಡೂ ಇವುಕೆ ಒಂದೇ ಸಮನ ದೂರಲಿದ್ದೋಗಡ. ವರ್ಗಾಳ ಹಂದಿ ಬೆಳೆ ನಾಶಮಾಡಿಕೆ ಬಂದದ್. ಹೆಬ್ಬುಲಿ ಹಟ್ಟಿಗೆ ಮೊನ್ನೆ ನುಗ್ಗಿಕೆ ಬಂದ್ ಇಂದ್ ವಾಪಾಸ್ ಬಂದುಟ್ಟು. ಯಾವುದರ ಕೊಂದರೂ ಪಾಪ ಇಲ್ಲೆ. ಆದರೆ ಮುಂದೆ ಯಾವುದಕ್ಕೆ ಗುಂಡ್‌ನ ಮರ್ಯಾದೆ ಕೊಡೊಕು. ಹಂದಿಗೆ ಗುಂಡು ಹೊಡ್ದರೆ ಮೊನ್ನೆನ ಹಂಗೆ ಹುಲಿ ಓಡಿದೆ. ಹೆದ್ರಿಕೆಲಿ ಗಡ ಗಡ ನಡ್‌ಗ್‌ತ್ತಿದ್ದ ಕರುನ ನೆನ್ಪಾಗಿ ಮುಗಿಸಕಾದ್ದ್ ಇವನಾಂತ ನೆನ್ಸಿಕಂಡ್ ಹೆಬ್ಬುಲಿಗೆ ಗುಂಡು ಹೊಡ್ದೆ. ಅಷ್ಟೊತ್ತಿಗೆ ಹಂದಿನ ಮೇಲೆ ಹಾರಿಕೆ ನೋಡ್‌ತಿದ್ದ ಹುಲಿ ಇದ್ ಹಂದಿದ್ದೆ ಕಾರ್‌ಬಾರಾಂತ ನೆನ್ಸಿ ಹಂದಿನ ಮೇಲೆ ಹಾರ್‍ದ್. ಅದು ಹಾರಿಕೆ ಉಟ್ಟುಂತ ತಯಾರಾಗಿದ್ದ ಹಂದಿ ಹುಲಿನ ಹೊಟ್ಟೆನ ಸೀಳಿತ್. ಹುಲಿನ ಉಗುರು ಹಂದಿಗೆ ತಾಂಗಿ ಸಿಟ್ಟ್ ಬಾತ್ ಹುಲಿಗೆ ಗುಂಡೇ ಸಾವು ಕೊಟ್ಟಿತ್ತ್. ಅದರ ಮೇಲೆ ವರ್ಗಾಳ ಹಂದಿಂದ ಹೊಟ್ಟೆ ಸಿಗಿಸಿಕಂಡ ಹುಲಿ ಹೊರಳಿ ಬಿದ್ದು ಸತ್ತತ್. ವಾರ್ಗಾಳ ಹಂದಿ ರೋಷಂದ ಇನ್ನೊ ಎರಡ್ ಸರ್ತಿ ಹುಲಿನ ಜೆಪ್ಪಿತ್. ಹೆಬ್ಬುಲಿ ಸತ್ತದ್ ಗೊತ್ತಾಗಿ ಹಂದಿ

ಹುಲಿನ ಅದೇ ಕೊಂದದ್ ಎಂದ್ ಖುಷಿಲಿ ಗಾಯಲಿ ನೆತ್ತರ್ ಬಿಳ್‌ತಿದ್ದರೂ ಓಡಿಕೆ ನೋಡಿಕನ ಸಡನ್‌ಡೆತ್‌ಗನ್ನ್ ಅಬ್ಬರಿಸಿತ್. ರೋಷಂದ ಹಂದಿ ಗರ್ಜನೆ ಮಾಡಿ ಎಲ್ಲಿಂದ ಬಂದ ಗುಂಡೂಂತ ಅಂದಾಜಿ ಮಾಡಿ ಭಾರೀ ಜೋರ್‌ಲಿ ಗೌಡ್ರ ಹಕ್ಕಲೆ ಬಾಕೆ ಸುರು ಮಾಡ್ತ್. ಕಾಡ್‌ಹಂದಿನೆ ಭಾರಿ ಜೋರುನ ಪ್ರಾಣಿ. ಈಗ ಅದು ಗುಂಡುಂದ ಪೆಟ್ಟ್ ತಿಂದ್ ಎಂತಾರ್ ಮಾಡಿಕೆ ಹಕ್ಕಲೆ ಬಾಕನ, ಸಮಯ ಹಾಳು ಮಾಡದೆ, ಬೆಡಿನ ಕುದುರೆ ಎಳ್ದೋ. ಹಂದಿನ ಪ್ರಾಣ ಹೋಕೆ ಆಕನ ದೊಡ್ಡ ಬೊಬ್ಬೆ ಹೊಡ್ತ್, ನೀರೊಳಗೆ ಇದ್ದಂವ ಸತ ಬೆಗರುವ ಹಂಗೆ. ಗುಂಡುಗಳ ಶಬ್ದ, ಹಂದಿನ ಅಖೇರಿನ ಬೊಬ್ಬೆ, ಹುಲಿನ ಆರ್ಬಟೆ ಕೆಬಿಗೆ ಬಿದ್ದ ಬೈಲ್‌ನ ಜನ ಎಲ್ಲವೂ ಒಟ್ಟಿಗೆ ಕೂಕುಳ್ ಹಾಕಂಡ್ ಬಂದೊ. ಇವುನೂ ಇತ್ತಂದ್ ಕೂಕುಳ್ ಹಾಕಿದೊ. ಗೌಡ್ರು ಬದುಕಿ ಇರುದು ನಿಘಂಟಾಕನ ಅವು ಬೀಸ ಬಂದೋ. ಕೈಲಿ ತಲವಾರ್, ಸೂಟೆನೊಟ್ಟಿಗೆ ಬಾಕಾಕನ ಬೈಲಿಗೆ ಬೈಲೇ ಬೊಳ್ಪಾತ್. ಅಪ್ರೂಪದ ದೀಪಾವಳಿ ಆತ್. ಸ್ವಲ್ಪ ಹೊತ್ತೆಲಿ ಕಲ್ಲೂರಾಯರ್, ಚಿಮ್ಮನಮೂಲೆ ವೆಂಕಪ್ಪ ನಾಯ್ಕನೊಟ್ಟಿಗೆ ಸೂಟೆ ಬೀಸಿಕಂಡ್ ಬಂದೊ. ಅದ್ ಕೃಷಿ ಮಾಡುವವುಕೆ ಉಪಕಾರ ಆಗಲಿಂತ ಅವರ ಮನಸ್ಸ್‌ನ ಆಸೆನೇ ಅಲ್ಲದೆ ಅವುಕೆ ಯಾವ ಲಾಭಾನೂ ಇತ್ತ್‌ಲ್ಲೆ. ಬಂದವೆಲ್ಲ "ಓ ದೇವೆರೇ" ಎಂದು ಬೊಬ್ಬೆ ಹೊಡ್ಕಂಡೊ. ಹಂಞಾ ಹೊತ್ತ್‌ಲಿ ವರ್ಗಾಳ ಹಂದಿ ಕುಂಡೆ ಇಸಿದ್ ಕುದ್ದ ಜಾಗಲಿ ಕಲ್ಲುರಾಯರು ಕುದ್ದಕಂಡ್, ಎಲೆ ಅಡಿಕೆ ತಿಂಬಕನ "ಹುಲಿ ಚರ್ಮಕ್ಕೆ 100 ರುಪಾಯಿ ಸಿಕ್ಕಿದೆ. ಮಾಂಸ ತಿಂಬದರ ಬಿಟ್ಟನಿಂಗೆ ಅದೆ ದೀಪಾವಳಿ ಉಡುಗೊರೆ ಆದೆ", ಎಂತ ಹೇಳಿದೊಗಡ. ಅವರ ಮಾತುಕತೆ ನಡೆಯಕಾಕನ ಅಲ್ಲಿದ್ದವು ರೆಂಬೆ, ಕೊಂಬೆ, ಬಾಳೆಮರದ ಕೊತ್ತಳಿಕೆ, ಮಡಲು ಸೇರಿಸಿ ಕಿಚ್ಚಿ ಹಾಕಿದೊ. ಅಂದ್ ಹಾಂಗೆ ಕಿಚ್ಚು ಹೊತ್ತಕನ ಅವುಕ್ಕೆ ವಿಷ್ಣುಮೂರ್ತಿ ದೈವದ ಒತ್ತೆಕೋಲದ ಹಾಂಗೆ ಕಂಡ್‌ತ್‌ಗಡ. ಒಳ್ಳೆ ಬೊಳ್ಪುಲಿ ಹಂದಿ ಮತ್ತ್ ಹುಲಿನ ಚರ್ಮ ತೆಗೆವ ಕೆಲಸ ಸುರು ಮಾಡ್ದೊ. ಅಲ್ಲಿ ಹುಲಿಮಾಂಸ ತಿಂಬುವವು ಯಾರೂ ಇತ್ತ್‌ಲೆ. ಉತ್ತರ ಭಾರತಲಿ ಹುಲಿ ಮಾಂಸ ತಿಂದ್ ಲೈಂಗಿಕ ಶಕ್ತಿ ಹೆಚ್ಚಿಸಿಕಂಬಕೆ ಪ್ರಯತ್ನ ಪಡುವವು ತುಂಬಜನ ಒಳೊಗಡ. ಆಚೆ ನೇಪಾಳ, ಚೀನಾ, ಬರ್ಮಾ ದೇಶಲ್ಲಿ ಹುಲಿ ಮಾಂಸನ ತಿಂಬಕೆ ತುಂಬ ಜನ ತೆಕಂಡವೆಗಡ – ಬಡ್ಡಡ್ಕಲಿ ಹುಲಿ ಮಾಂಸನ ಕಿಚ್ಚಿಗೆ ಹಾಕಿ, ರಾಮಚಂದ್ರ ಕಲ್ಲೂರಾಯರ ಮತ್ತು ಅಪ್ಪಯ್ಯ ಗೌಡರ ಬುಟ್ಟು ಹಂದಿ ಮಾಸನ ಪಾಲ್ ಮಾಡಿಕೆಂಡೋ. ಗೌಡ್ರು ಹುಲಿ ಚರ್ಮ, ಹಲ್ಲು ಮತ್ತು ಉಗುರು ತಕಂಡ್ – ಕಲ್ಲುರಾಯರೆ ಎಲೆ ಅಡಿಕೆ ಮಾತ್ರ ತೆಗೆದುಕೊಂಡು ಹೋದೋಂತ ಹೇಳುವಲ್ಲಿಗೆ **"ಪಂಜಿ–ಪಿಲಿ ಕುಣ್ತ"** ಮುಗ್ತ್.

8

ಹಟ್ಟಿಗೆ ಬಾತ್ ಹುಲಿ

ಅಂದೊಂದು ನವೆಂಬರ್ ತಿಂಗಳ್‌ನ ಸುರುನ ವಾರ ನಿಧಾನಲಿ ಬಡ್ಡಡ್ಕಲಿ ಚಳಿ ಹಿಡಿಯಕೆ ಸುರು ಆಗಿತ್ತ್. ಆ ಎರಡನೇ ಸರ್ತಿನ ಮಹಾಯುದ್ಧದ ಕಾಲ ಆಗಿತ್ತ್, ಚಿಮಿಣಿ ಎಣ್ಣೆ ಎಲ್ಲಿನೂ ಸಿಕ್ಕತಿತ್ತಲ್ಲೆ. ಪಿಂಡಿಕ್ಯಾ ಬಿತ್ತಿಗಳ್‌ಂದ ಮನೆಲಿ ದೀಪ ಹೊತ್ತಿಸೊಕಾಧಿತ್ತ್. ಆ ದಿನಗಳ್ಲಿ ಆಗ ಜೈನರ ಹಾಂಗೆ ರಾತ್ರಿ ಊಟನ ಬೇಗ ಮಾಡಿ ನಿದ್ದೆ ಬಾಕನ ಮುಟ್ಟ ಪಟ್ಟಾಂಗ ಬಿಟ್ಟು ಕೊಂಡ ಕುದ್ರ್‌ತಿದ್ದೋ. ಅಂದ್ ರಾತ್ರಿ ಹಾಂಗೆ ಮಲಗಿಕಂಡ್ ಒಬ್ಬೊಬ್ಬ ಒಂದೊಂದು ಮಾತಾಡಿಕಂಡ್ ಇರ್ಕನ ಅಂಗಳಲಿ ನಾಯಿಗ ಹೆದ್ರಿ ಕಿರ್ಚಿಕಂಡ್ ಓಡಿದೊ. ಮನುಷ್ಯನ ಹೆಚ್ಚಿನ ರೀತಿಲಿ ಪ್ರೀತಿ ಮಾಡುದು ನಾಯಿಗಳೆ. ಮನುಷ್ಯ ಹೆಚ್ಚಿನ ಹಿಂಸೆ ಕೊಡ್ದು ನಾಯಿಗಳಿಗೆ! ಸಂದರ್ಭಕ್ಕೆ ಬೇಕಾದ ಹಾಂಗೆ ನಾಯಿಗಳ ಸ್ವರ ಬದಲಾಗ್ತಾ ಇದ್ದದೆ. ಸಿಟ್ಟ್, ದುಖಃ, ನೋವು, ನಿರಾಸೆ, ಹೆದ್ರಿಕೆ, ಸಂತೋಷ ಆಕನ ಜೋಡಿ ಆಕನ ಅವರ ಸ್ವರ ಬೇರೆ ಬೇರೆ ಆದೆ. ಅವರ ಮನಸ್ಸ್‌ಗೆ ಸರಿಯಾಗಿ ಮುಖಚರ್ಯೆ

ಸ್ವರ ಬದಲಾದೆ. ಅಂದು ಹೊರ್ಟ ಸ್ವರ ಕೆಟ್ಟ ವಿಷಯನ ಕಂಡ್ರೆ ಹೆದ್ರುವ, ಮರ್ಡುವ ಹಾಂಗೆ ಇದ್ದಿತ್ತ್.

ಅಪ್ಪಯ್ಯ ಗೌಡ್ರು ಬೇಟೆನ ಲೈಟ್‌ನ ತಲೆಗೆ ಕಟ್ಟಿಕಂಡ್ ಸಡನ್ ಡೆತ್ತ್ ಬೆಡಿಗೆ ತೋಟೆ ಹಾಕಿಕಂಡ್ ಅಂಗಳಕ್ಕೆ ಒಡ್ದೊಗಡ. ಅಂಗಳಕ್ಕೆ ಬಂದರೆ ನಾಯಿಗ ಒಂದೂ ಕಾಂಬತಿತ್ತ್‌ಲ್ಲೆ. ಆಗ ಹಟ್ಟಿಂದ 'ಅಂಬಾ' ಅಂತ ದನಗಳ ಕೂಗುದು ಕೇಳ್ಸಿತ್. ಲೈಟ್‌ನ ಸ್ವೀಚ್ ಕೆಡಿಸಿ ಹಟ್ಟಿ ಕಡೆಗೆ ಓಡ್ದೋ ನೋಡಿರೆ ಒಂದು ಹೆಬ್ಬುಲಿ ಕರುನ ಕುತ್ತಿಗೆಗೆ ಬಾಯಿ ಹಾಕಿತ್ತ್. ಲೈಟ್‌ನ ಒಳ್ಳೆ ಬೊಳ್ಪುಲಿ, ಗೌಡ್ರ ಬೊಬ್ಬೆಗೆ ಹುಲಿಗೇ ಹೆದ್ರಿಕೆ ಆಗಿ ಕರುನ ಬುಟ್ಟ್ ಹಟ್ಟಿಂದ ಗುಡ್ಡೆಗೆ ಓಡ್ತ್. ಮನೆಂದ ಎಲ್ಲಾ ಓಡಿ ಬಂದೋ. ದನಂಗ ಬಳ್ಳಿ ತುಂಡು ಮಾಡಿ ಹೊರಗೆ ಹೋಕೆ ನೋಡ್ತಿದ್ದೊ. ಕರುನ ಕುತ್ತಿಗೆಂದ ನೆತ್ತೆರ್ ಬಾತಿತ್ತ್ . ಅದರ ಪೊರ್ಲು ಒರ್ಸಿ ಮನೆಲೇ ಇದ್ದ ಮದ್ದ್‌ನ ಹಾಕಿ, ಬಟ್ಟೆ ಕಟ್ಟಿದೊ. ಬಳ್ಳಿ ತುಂಡು ಮಾಡಿ ಒಡಿಕೆ ನೋಡ್‌ತಿದ್ದ ದನಗಳ ಮೈ ಪೂಜಿ ಸಮಾಧಾನ ಮಾಡಿಕೆ ಹುಲ್ಲು ಹಾಕಿದೋ ಸಾವುನ ಹಕ್ಕಲೆ ಎತ್ತಿದ ಕರುನ ಮೈ ನಡ್‌ಗ್‌ತಿತ್ತ್. ಅಲ್ಲಿವರೆಗೆ ಹೆದ್ರಿಕೆಂದ ಎಲ್ಲಿನೊ ಅಡರಾಗಿಕಂಡ್ ಇದ್ದ ನಾಯಿಗ ಕೆಬಿಗಳ ಕುತ್ತ ಮಾಡಿಕಂಡ್ ಬಾಲ ಆಡ್ಸಿಕಂಡ್, ಕಾಲು ನೆಕ್ಕಿಕಂಡ್ ಭಕ್ತಿ ತೋರ್ಸಿಕೆ ಸುರು ಮಾಡ್ದೊ. ಮರ್ದಿನ ಹಟ್ಟಿ ಸುತ್ತ ಗಟ್ಟಿ ಬೇಲಿ ಮಾಡಿ ಹಟ್ಟಿ ಬಾಗಿಲ್‌ನ ಸರಿ ಮುಚ್ಚುವ ಏರ್ಪಾಡ್ ಮಾಡಿ ಬೈಪಣೆಗೆ ರಾತ್ರಿ ಮುಚ್ಚುವ ಏರ್ಪಾಡ್ ಮಾಡಿದೋ ಗಡ.

9

ಪೂಮಲೆ ಗುಡ್ಡೆಲಿ ಇಪ್ಪತ್ತೇಳ್ ಕಾಟಿಗಳಿಗೆ ಗುಂಡು

ಸುಳ್ಯದ ಪೂರ್ವ ಭಾಗಲಿ ಅರಂತೋಡ್‌ಂದ ಆಚೆ ಎಲಿಮಲೆವರೆಗೆ ಉದ್ದಕ್ಕೆ ಇದ್ದ್ ಮರಕಾಡು ಗಿಡ್ಡೆಗ ಬಳ್ಳಿಗ ಹಬ್ಬಿದ 'ಪೂಮಲೆಂತ ಹೇಳುವ ಗುಡ್ಡೆ ಸಾಲು ಉಟ್ಟು' ಈ ಪೂಮಲೆ ಗುಡ್ಡೆನ ಕೆಳಗಿನ ಭಾಗಲಿ ಸುಳ್ಯಂದ ಅರಂತೋಡುವರೆಗೆ ಮರ ಕಾಡಿಗೆ ಸಂಬಂಧಪಟ್ಟ ಇಲಾಖೆಯವು ಸಾಗುವಾನಿ ದೈಗಳ ತುಂಬ ದೊಡ್ಡ ಕೃಷಿ ಮಾಡಿಕೆ ಸುರು ಮಾಡಿದೊ. ಉಪಯೋಗಿಸಿಕೆ ಭಾರೀ ಒಳ್ಳೆ ಮರ. ಬೆಳ್ಸಿರೆ ಇಲಾಖೆಯವುಕೆ ಮರ ಬೆಳಿಯಕನ ತುಂಬಾ ದುಡ್ಡು ಮಾಡಕ್. ಸಾಗುವಾನಿ ಮರ ಒಳ್ಳೆ ಜಾತಿ ಮರ, ಬೇಕಷ್ಟ್ ಕೇಳುವ ಗಿರಾಕಿಗ ಇದ್ದವೆ.

ಒಂದು ದಿನ ಗಾರ್ಡ್ ಒಬ್ಬ ಅರಂಬೂರ್‌ನವ ಬಡ್ಡಡ್ಕಕ್ಕೆ ಬಾತ್, 'ಅಪ್ಪಯ್ಯಣ್ಣ ನಂಗೆ ನಿಮ್ಮ ಗುರ್‌ತ್ ಲ್ಯಾಕ್ ಉಟ್ಟೂಂತ ಹೇಳ್ತ್. ಅವಂಗೆ ಚಾಯ, ಹಿಟ್ಟ್ ಎಲ್ಲ ಕೊಟ್ಟ್ ಮಾತಾಡ್ಸಿದೊ. ಪೂಮಲೆಲಿ ಬೆಳ್ಸಿದ ಸಾಗುವಾನಿ ದೈಗಳಿಗೆ ಕಾಟಿ, ಕಡೆಗಳ ಉಪದ್ರ

ಹೆಚ್ಚಾಗುಟ್ಟು. ನೆಟ್ಟ ದೈಗಳ ಒಂದೂ ಒಳ್ಸಿಕೆ ಬುಡ್ದುಲ್ಲೆ. ನಮ್ಮಲ್ಲಿ ಗುಂಡು ಹೊಡಿವವು ಯಾರೂ ಇಲ್ಲೆ. ನೀವೇ ಅದ್ಕೆ ಸರಿಯಾದ ಜನಾಂತ ಫಾರೆಸ್ಟಂಗೆ ಹೇಳ್ರೊಳೆ. ಹಾಂಗೆ ನನ್ನ ಮಾತ್‌ನ ಮೇಲೆ ಇಲಾಖೆಯವು ನೀವ್ಗೆ ಒಂದು ಕಾಗದನೂ ಕೊಟ್ರೊಳೊ. ಅದರ ತೆಕ್ಂಡ್ ಬಂದೆಂತ, ಹೇಳಿ ಸರಕಾರದ ಒಂದು ಕಾಗದನೂ ಕೊಟ್ಟತ್. ಕಾಗದ ಓದಿ ಖುಷಿ ಆತ್. ಅಂವ ಹೇಳ್ದಕ್ಕೆ ಮರ್ಯಾದೆ ಕೊಟ್ಟು, ಇವು ಹೋಕೂಂತ ಹಟ ಮಾಡಿ ರಾತ್ರಿ ಬೇಟೆಗೆ ಬರೋಕೂಂತ ಕೈಮುಗ್ದ್ ಹೇಳ್ತ್. ಅಲ್ಲದೆ ಸರಕಾರಂದ ಹಂಞಾ ದುಡ್ಡುನೂ ಕೊಟ್ಟವೆಗಡ. ನೀವ್ ಬಂದ್ ನಮ್ಮ ಸಾಗುವಾನಿ ಮರ ರಕ್ಷಣೆ ಮಾಡೊಕು ರಾತ್ರಿನ ಬೇಟೇನೇ ಆಕು. ಒಮ್ಮೆ ಬಚಾವು ಮಾಡೀಂತ ಹೇಳ್ಕನ ಗೌಡ್ರು ಒಪ್ಪಿದೊ. ಹಿಂಬತ್ತ್ ಆರು ಗಂಟೆಗೆ ಬಂದವೇಂತ ಹೇಳ್ದ ಮೇಲೆ ಅಂವ ಹೋತ್‌ಗಡ. ಪಳ್ಳಿಗೆ ನಮಾಜ್ ಮಾಡಿಕೆ ಹೋವ ಬಂಧುಗಳಿಗೆ ಬಾಕೆ ಹೇಳಿ ಜನ ಕಳ್ಸಿದೊ. ಒಮ್ಮೊಮ್ಮೆ ಕಾರ್ಯ ನೆನ್ಸಿದಾಂಗೆ ಆದವೆ. ಒಮ್ಮೊಮ್ಮೆ ಆಗದೆ ಇರ್ದೂ ಉಟ್ಟು. ಅಂದ್ ಬಂದದ್ ಅದ್ರಾಮಿಚ್ಚ ಮಾತ್ರ. ಒಂದು ಕೇಪುನ ಬೆಡಿ ಹಿಡ್ಕಂಡ್ ಬಾತ್. ಮಧ್ಯಾಹ್ನ ಆಕನ ಆಡಿಂಜ ಮಾರ್ದು ನಾಯ್ಕ, ತಲೆಪಳ್ಳ ಐತು ನಾಯ್ಕ (ತಲೆಪಳ್ಳ ಮಾಲಿಂಗ ನಾಯ್ಕರ ಅಪ್ಪ) ಇಬ್ಬರೂ ಬಂದೊ. ಒಟ್ಟು ನಾಲ್ಕ್ ಜನ ಆದೊ. ಒಟ್ಟು ಜೀವನಲಿ, ಅದೆಷ್ಟ್ ಜನ ಇವುಕೆ ಉಪಕಾರ ಮಾಡಿಯೊಳೊ. ಮುಸ್ಲಿಂ ಬಂಧುಗ ತುಂಬ ಸಹಾಯಕ್ಕೆ ನಿಂತೋಳೊ. ನಾಯ್ಕಂತ ಹೆಸರ್‌ನ ಮುಂದೆ ಹಾಕಂಬವುಕೆ ಅವೇ "ಅಪ್ಪಯ್ಯ ಗೌಡ್ರ ಸಂಸಾರ"ಂತ ಡೋಂಗಿ ಮಾಡುವವೂ ಇದ್ದೊ. ಅವರ ಪೈಕಿ ಅವರ ಮರಾಟಿ ಭಾಷೆ ಅಲ್ಲದೆ ತುಳು ಮಾತಾಡುವ ಮನೆಯವೂ ಇದ್ದೊ. (ಬೊಳ್ಳು ಕುಂಞಿನ ಅಪ್ಪ) ಚೋಯಂಬುನ ಮೇಲೆ ಹೆಚ್ಚು ಇಷ್ಟ ಇತ್ತ್ ಗೌಡ್ರಿಗೆ. ನಾಲ್ಕ್ ಗಂಟೆ ಆಕನ ಇವು ನಾಲ್ಕ್ ಜನ ಹೊಟ್ಟೆ ಗಟ್ಟಿ ಮಾಡಿಕಂಡ್, ಬಡ್ಡಡ್ಕ ಬುಟ್ರೊ. ಪಯಸ್ವಿನಿ ಹೊಳೆನ ಪಿಂಡಿಲಿ ದಾಟಿದ್ (ಬೆದಿರ್‌ನ ದೋಣಿ) ಅರಂಬೂರ್ ಎತ್ತ್‌ಕನ ಗಾರ್ಡ್ ಇವರ ಕೈನ ಪ್ರೀತಿಲಿ ಹಿಡ್ಕಂಡ್ತ್. ವಿಚಿತ್ರಾಂತ ಹೇಳಿರೆ ಕಾಡ್ ರಕ್ಷಣೆ ಮಾಡುವವರ ಕೈಲಿ ಒಂದು ಬೆಡಿನೂ ಇತ್ತ್‌ಲ್ಲೆ. ಮತ್ತೆ ಅವು ಕಾಡ್ ಕಾಯೊದು ಹೇಂಗೇಂತ! ಹಿಂಬತ್ತ್ ಆರು ಗಂಟೆ ಆಕನ ಸಾಗುವಾನಿ ಕೃಷಿ ಮಾಡ್ದಲ್ಲಿಗೆ ಹತ್ತಿ ಆತ್. ಅಲ್ಲಿ ಕಾಟಿಗ ಮೆಟ್ಟಿ ಹುಡಿಮಾಡಿ ಹಾಕಿದ ಅವಸ್ಥೆ ನೋಡಿರೆ ಸಾಕಿತ್ತ್. ದೈಗಳ ಕೊಡಿ ಎಲ್ಲಾ ಮುರ್ದು ತಿಂದ್ ದೈಗಳ ಎಲ್ಲಾ ಮೆಟ್ಟಿ ಹುಡಿ ಮಾಡಿದ್ದೊ. ಹಾಂಗೇ 40 ಮೆಟ್ಟ್ ಎತ್ತರಕ್ಕೆ ಹೋಕನ ಕಾಟಿಗಳ ಹಿಂಡ್ ಕಂಡತ್. ಸುಮಾರು 20ಕಾಟಿಗಳ್‌ಂದ ಹೆಚ್ಚಿಗೆ ಇದ್ದೊ. ಅಷ್ಟ್ ಕಾಟಿಗಳ ಒಮ್ಮನೇ ಕಂಡದ್ ಇತ್ತಿಲ್ಲೆ. ಅಂದೇ ಕಂಡದ್. ತಲೆಪಳ ಮಾಲಿಂಗ ನಾಯ್ಕನ ಅಪ್ಪ ಐತು ನಾಯ್ಕನ ಕೈಲಿ ಕೋವಿ ಇತ್ತ್‌ಲ್ಲೆ. ಗಾರ್ಡ್‌ನ ಕೈಲಿ ಹೇಂಗೂ ಬೆಡಿ ಇಲ್ಲೆಲ್ಲ. ಅದ್ರಾಮಚ್ಚನ ಕೇಪು ಬೆಡಿ ಪೇಟೆಲಿ ಕರಡಿ ಕುಣ್ಸಿಕೆ ಆದು. ಒಟ್ಟಿಗೆ ಇದ್ದವುಕೆಲ್ಲ ಮರಲಿ ಅಡಂಗಿ ನಿಲ್ಲಿಕೆ ಹೇಳ್ದೊಗಡ. ಮಾರ್ದು ನ್ಯಾಕ ಮಾತ್ರ ಗೌಡ್ರ ಒಟ್ಟಿಗೆ ಬಾತ್. ಅವನ ಮರದ ಹಿಂದೆಗೆ ದೂಡಿ ದೊಡ್ಡ ಮರದ

ಹಿಂದೆ ನಿತ್ತ್ ಗೌಡ್ರು ಎತ್ತರದ ಕಾಟಿಗೆ ಗುಂಡು ಹೊಡ್ದೊ. ಈಡ್ ತಪ್ಪಿಹೋತ್ ಕಾಟಿನ ತೊಡೆಗೆ ಗುಂಡು ತಾಗಿತ್ತ್. ಅದ್ ಜೀವ ಬದುಕಿಸಿಕಣಿಕೆ ಕುಂಟಿಕಂಡ್ ಕುಂಟಿಕಂಡ್ ಮುಂದೆ ಮುಂದೆ ಹೋತಿತ್ತ್. ಬಾಕಿ ಇದ್ದ ಕಾಟಿಗ ಗುಂಡು ಶಬ್ದ ಕೇಳಿ ಹೆದರಿ ಓಡ್ದೊ. ಗೌಡ್ರು ಮಾರ್ಡು ನಾಯ್ಕಂಗೆ ಹೇಳಿ ಕಾಟಿನ ಹಿಂದೆ ಹಿಂದೆ ಹೋದೊ. ಅಲ್ಲೆ ಅಡ್ಡ ಆಗಿ ದೊಡ್ಡ ಮರ ಬಿದ್ದಿತ್ತ್. ಅದರ ಮೇಲೆ ನಿತ್ತ್ ಚಪ್ಪಾಳೆ ತಟ್ಟಿದೊ. ಆಗ ಕಾಟಿ ಇವರ ನೋಡ್ತ್. ಕಾಟಿ ಹೂಕಂರಿಸಿಕಂಡ್ ಗೌಡ್ರ ಕಡೆ ಓಡಿ ಬಾತಿತ್ತ್. ಅಲ್ಲೆ ಒಂದು ಅಡ್ಡ ಮರ ಇತ್ತ್ ಹಾಂಗಾಗಿ ಇವುಕೆ ಗುಂಡು ಹಾರ್ಸಿಕೆ ಆತ್‌ಲ್ಲೆ. ಮಾರ್ಡು ನ್ಯಾಕಂಗೆ ಹೆದರಿಕೆ ಆಗಿ "ಓ ದೇವರೇಂತ" ಬೊಬ್ಬೆ ಹಾಕಿತ್. ಇವುಕೂ ಹಂಞ ಹೆದ್ರಿಕೆ ಆತ್‌ಗಡ. ಮನಸ್ಸಲಿ ಅಂದಾಜ್ ಮಾಡಿಕಂಡ್ ಕಾಟಿನ ಮರ್ಮದ ಜಾಗೆಗೆ ಗುಂಡು ಹೊಡ್ದೊಗಡ. ಗುಂಡು ತಾಂಗಿ ಕಾಟಿ ಮಣ್ಣುಕಚ್ಚಿತ್. ಅಲ್ಲಿಗೆ ಅದರ ಆಟ ಮುಗ್ತ್. ಮಾರ್ಡು ನಾಯ್ಕ ಗೌಡ್ರ ಹಕ್ಕಲೆ ಬಂದ್, ಕುಂಡೆ ಬಾಯಿ ಇಲ್ಲದೆ ಮಕ್ಕಳ ಆಟ ಆಡಿಕೆ ಆಗದ್‌ಂತ ಹೇಳ್ತ್. ಆ ಕಾಲಲಿ ಮುಸ್ಲಿಂ ಬಂಧುಗಳು ಮತ್ತು ದಲಿತರು ಅದರ ಮಾಂಸ ತಿಂಬತಿದ್ದೊ- ಆದರೆ ಅದರಾಮಿಚ್ಚಗೆ ಅದರ ಮೇಲೆ ಆಸೆ ಇತ್ತ್‌ಲೆ, ಹಾಂಗೆ ಅವ ಬಿಸ್ಮತ್ ಮಾಡಿಕೆ ಹೋತ್‌ಲ್ಲೆ. ಮತ್ತೆ ಹಕ್ಕಲೆ ಇದ್ದ ದಲಿತರಿಗೆ ಮಾಸ ತೆಕಂಡ್ ಹೋಕೆ ಹೇಳಿ ಕಳ್ಸಿದೊ. ಅವು ಕೊಂಬುನ ಮತ್ತು ಚರ್ಮನ ಇವುಕೆ ತಲಪಿಸಿದೊಗಡ. ಆಗ ಅವುಕೆ ಒಂದು ಕಥೆ ನೆನ್ಪಾತ್‌ಗಡ.

ಬರೀ ಒಂದು ತಿಂಗಳ್‌ಂದ ಹಿಂದೆ ಆಲೆಟ್ಟಿಲಿ ಕೊಂದ ಮೂರು ಕಾಟಿಗಳ ಮಾಸ ಎಲ್ಲ ದಲಿತರಿಗೆ ಬುಟ್ಟು, ಚರ್ಮ ಮತ್ತ್ ಕೊಂಬುನ ಅವು ತಂದು ಕೊಟ್ಟಿದ್ದೊ. ಮಾಸ ತುಂಬ ಇದ್ದರೆ ಉಪ್ಪು ಹಾಕಿ ಒಣಗಿಸಿ ಬೇಕಾಕನ ತಿಂಬಕೆ ಆದೆ. ಆದರೆ ಬಿಸಿಲಿಗೆ ಒಣಗಿಸಿರೆ ತೊಂದರೆ ಇಲ್ಲೆ, ಬೆಸಗೆಲಿಯೋ ಒಲೆ ಚಿಟ್ಟೆಲೆಯೋ ಇಸಿರೆ ಹಂಞ ಜಾಗ್ರತೆ ಬೇಕಾದೆ- ಇಲ್ಲರೆ ಅದರ ಮಾಸಂದ ಚರ್ಬಿಂದ ಎಣ್ಣೆ ಬೀಳ್ಕನ ಒಲೆಗೆ ಬಿದ್ದರೆ ಕಿಚ್ಚಿ ಹೊತ್ತಿಕೊಂಡಿದೆ. ಅಂದ್ ಆಲೆಟ್ಟಿ ದಲಿತರ್ ಅವರ ಮಾಡಿಗೆ ಹುಲ್ಲು ಹಾಕಿಕೆ ತಾವ ಕಾರ್ಯಕ್ಕೆ ಮೇದಿನಡ್ಕ ಹುಲ್ಲುಪಡ್ಪಿಗೆ ಆ ಕೂಟದವು ಎಲ್ಲವೂ ಹೋಗಿದ್ದೊ. ಹಕ್ಕ ಹಕ್ಕಲೆ ಅವರ ಮನೆಗ. ಒಂದು ಮನೆಲಿ ಉಪ್ಪಣಂದಾಗಿ ಕಿಚ್ಚಿ ಹಿಡ್ದ್ ಅದ್ ಎಲ್ಲ ಮನೆಗೂ ತಾಗಿ ಎಲ್ಲಾ ಸುಟ್ಟು ಹೋತ್. ಹಾಂಗೆ ಸುಟ್ಟು ಹೋದ್ದಕೆ ಅಪ್ಪಯ್ಯ ಗೌಡ್ರೆ ಕಾರಣೂಂತ ಮಾತ್ ಬಾತ್. ಇವು ಮಾಸ ಅವುಕೆ ಕೊಡದೆ ಹೋಗಿದ್ದರೆ ಅವರ ಮನೆ ಸುಟ್ಟು ಹೋತಿತ್ತ್‌ಲ್ಲೆಗಡ. "ಉಲ್ಲಾಯೆ ಆತ್ ಮಳ್ತ್ ಪಾಡ್ಯೆರ್" ಹಾಗಾಗಿ ಎಲ್ಲವೂ ಜಾಗ್ರತೆ ವಹಿಸಲಿ ಅಂತ ಹೇಳ್ದೊ. ಆ ಕಾಲಲಿ ಹಂಚ್‌ನ ಮನೆಗ ಭಾರಿ ಅಪರೂಪ ಆಗಿತ್ತ್. ಇವು ಎಲ್ಲ ಬಿಡಾರಕ್ಕೆ ಬಾಕನ ಆಫೀಸರ್ ಮೂರು ತೋಟೆನ ಬೆಡಿನ ಎಲ್ಲಿಂದಳೋ ತಂದ್ ಇಸಿತ್ತ್. ಮಾರ್ಡು ನ್ಯಾಕ ಹೇಳ್ತ್ "ಇನಿ ನಾಲ್ ಕಾಟಿ ಸೈತ್ ಪೋವೋ" ಅಂತ ಹೇಳ್ತ್. ಮತ್ತೊಬ್ಬ ಹೇಳ್ತ್ "ಹಂಞ ಕುಡಿಯಕೆ ತೀರ್ಥ ಸಿಕ್ಕಿರೆ ಕಾಟಿಗಳೆಲ್ಲ ಗುಂಡಾಂತರ ಮಾಡುವೆ". ಗಾರ್ಡ ಹೇಳ್ತ್ ಕಾಟಿ ಮಾಸ ನಾವು ತಿಂಬದುಲ್ಲೆ "ನೀವು ಮನಸ್ಸ್ ಮಾಡಿರೆ

ನಾಲಿಗೆಗೆ ಏನಾದರೂ ರುಚಿ ಆವಂತದ್ದ್‌ಕ್ಕೆ ಏನಾರು ಬೇಟೆ ಮಾಡಕ್". ಗೌಡ್ರಿಕೆ ಗೊತ್ತಾತ್, ಇವುಕೆ ಮಾಸ ಬೇಕಾಗುಟ್ಟೊಂತ. ಹಾಂಗಾಗಿ ಚೂರಿ ಹಾಕಿಕೆ ಅದ್ರಾಮಿಚ್ಚನ ಕರ್ಕಂಡ್ ಗುಡ್ಡೆಗೆ ಹೋದೊ. ಆಯಸ್ಸು ತೀರ್ದ ಒಂದು ಪ್ರಾಣಿ ಕಂಡೇ ಬುಟ್ಟಿತ್. ಒಂದೇ ಗುಂಡಿಗೆ ಬರಿಂಕ ಬೀತ್. ಅದ್ರಾಮಿಚ್ಚ ಬಿಸ್ಮತ್ ಮಾಡ್ತ್. ಇನ್ನ್ ಅಂವ ಅದರ ತಿಂಬಕ್. ಗೌಡ್ರು ತಿಂಬಕೆ ಅವರ ಕೈ ಚೀಲಲಿ ಮನೆಲಿ ಇದ್ದದರ ತಕಂಡ್ ಬಂದಿದ್ದೊ. ಕತ್ತಲೆಲಿ ಊಟ ಮಾಡಿ ಎಲ್ಲಾ ಮಲ್ಗಿದ್ದೊ. ಒಂದು ಕ್ಷಣ ಯಾರೋ ಕರ್ದಾಂಗೆ ಆತ್. ಅಲ್ಗ್‌ಸಿದಾಂಗೆ ಆತ್. ಎದ್ದ್ ನೋಡಿರೆ ಗಾರ್ಡು ಸಾಗುವಾನಿ ಮರ ಕಾಡಿಗೆ ಕಾಟಿ ಹಿಂಡು ನುಗ್ಗ್ಯೊಳೊ ಅಣ್ಣಾಂತ ಹೇಳ್ತ್. ಹಾಂಗೆ ಎಲ್ಲವೂ ಎದ್ದೊ. ಅವರವರ ಬೆಡಿ ಹಿಡ್ಕಂಡ್ ಹೊರುಟೊ. ಅವರಲ್ಲಿ ಐದು ಬೆಟ್ರಿನ ಲೈಟು ಕೈಲಿ ಇತ್ತ್. ಲೈಟು ಹಾಕಿರೆ ಕಾಟಿಗ ಓಟ ಕಿತ್ತವೆ. ಕತ್ತಲೆಲಿ ಮಾತ್ ಆಡದೆ ಸಾಗುವಾನಿ ತೋಟಕ್ಕೆ ಹೊದೊಗಡ. ಓ..ಓ.. ಎಷ್ಟೊಂದು ಕಾಟಿಗ! ಚಂದ್ರನ ಬೊಳ್ಪುಗೆ ಕಾಟಿನ ದೇಹದ ಆಕಾರ ಕಂಡತ್. ಅ ಮಧ್ಯರಾತ್ರಿಲಿ ಪೂಮಲೆ ಜಾಗಲಿ ಓಡ್ಸಿಕಂಡು ಬಂದರೆ ಗಾರ್ಡನೊಬ್ಬನ ಬುಟ್ಟು ಯಾರೂ ಬಚ್ಚಾವು ಆಕಿಲ್ಲೆ. ಗಾರ್ಡ್‌ನ ಹಕ್ಕಲೇ ಈ ಸರ್ತಿ ಕಂಪೆನಿ ಕೊಟ್ಟ ಒಳ್ಳೆ ತಳವಾರು, ಲೈಟು ಇತ್ತ್. ಕತ್ತಲೆಗೆ ಕಣ್ಣ್‌ನ ಹೊಂದಿಸಿಕಂಡ್ ಎತ್ತರದ ಕಾಟಿಗೆ ಸುರು ಗುಂಡು ಹೊಡ್ದೊ. ಈ ಸದ್ದ್‌ನ ಹಿಂದೆಗೆ ಮೂರು ಬೆಡಿಗುಂಡು ಹಾರ್ತ್. ಈ ಮೂರು ಬೆಡಿನ ಸದ್ದು ಇದ್ದಾಂಗೆ ಗೌಡ್ರು ಗುರಿ ಬದಲಾಯಿಸಿ ಮತ್ತೊಂದು ಗುಂಡು ಹೊಡ್ದೊ. ಪುನಃ ಅವು ಮೂರು ಜನನೂ ಗುಂಡು ಹೊಡ್ದೊ. ಮಧ್ಯ ರಾತ್ರಿಲಿ ಎಂಟು ಸರ್ತಿ ಗುಂಡು ಹೊಡೆದ ಸದ್ದ್ ಕೇಳುವವಂಗೆ ಭೂಮಿ ನಡುಗುವಾಂಗೆ ಆತ್. ಕಾಟಿಗ ದೊಡ್ಡ ಸ್ವರಲ್ಲಿ ಕಿರ್ಚಿಕೊಂಡು ಎಲ್ಲಿ ಎಲ್ಲಿಯೊ ಓಡ್ದೋ. ದೇವಿ ಮಹಾತ್ಮೆ ಆಟಲಿ ಮಹಿಷಾ ಸುರಂತೇಳುವ ಕೋಣ ರೂಪದ ರಕ್ಕಸ ರಂಗಪ್ರವೇಶ ಮಾಡಿಕಾಕನ ಹಿಂಗೆ ಸ್ವರ ಹೊರ್‌ಡಿಸಿದೆ. ಇಲ್ಲಿ ತಾಳ, ದೊಂದಿಗ ಇಲ್ಲೆ. ಚಂಡೆ ಮದ್ದಳೆ ಇಲ್ಲೇ. ಆದರೆ ಇಲ್ಲಿ ಕಾಟಿಗಳ ಬೊಬ್ಬೆಗೆ ಸರಿಯಾದ ಬೆಡಿಗಳ ಢಮಾರ್ ಶಬ್ದಗ. ಹಿಂಬತ್ತಿಗೆ ಎರಡು ಕಾಟಿ. ಈಗ ಎಂಟು ಕಾಟಿಗ ಬಿದ್ದೊ. ಬಾಕಿ ಇದ್ದ ಕಾಟಿಗ ಓಡುಕನ ಲೈಟ್‌ನ ಹೊತ್ತಿಸಿದೊಗಡ. ಗಾರ್ಡ್‌ನೂ ಲೈಟು ಹಾಕಿತ್. ಎಲ್ಲ ಅಡಗಿ ಕೊಂಡ್ ಇದ್ದವು ಹೊರಗೆ ಬಂದೊ. ಲೆಕ್ಕ ಮಾಡಿರೆ ಏಳೇ ಕಾಟಿಗ. ವೀರ ಚಕ್ರ ಪಡೆದಾಗ ಭಾರಿ ಸೌಭಾಗ್ಯಾಂತ ನೆಲಗೆ ಬಿದ್ದ ಕಾಟಿಗಳಿಗೆ ಬಿಸ್ಮಿಲ್ಲಾ ಮಾಡ್ತ್. ಅಂದರೆ ಇನ್ನೊಂದು ಕಾಟಿ ಏನ್ ಆತ್‌ಂತ ಸಂಶಯ ಬಾತ್. ಲೈಟ್‌ನ ಬೊಳ್ಪುಲಿ ಉದ್ದಕ್ಕೆ ನೆತ್ತರು ಹನ್ನಿದ್ ಕಂಡತ್ತ್. ಒಟ್ಟು ಈಡು ಗುರಿ ತಪ್ಪಿತ್ತ್‌ಲ್ಲೆ. ಪೆಟ್ಟಾದ ಕಾಟಿ ಹುಲಿಂದ ಹೆಚ್ಚಿಗೆ ಅಪಾಯ. ನಾಳೆ ನರ್ಸರಿನ ಕೆಲ್ಸದವುಕೆ ಏನಾರೂ ಅಪಾಯ ಮಾಡಿರೆ! ಹಾಂಗಾಗಿ ಗೌಡ್ರು ಹುಡ್‌ಕಿಕಂಡೇ ಹೋದೊ. ಆಡಿಂಜ ಮಾಡ್ದು ನಾಯ್ಕನೂ ಗೌಡ್ರ ಹಿಂದೆ ಬಾತ್. ಇಬ್ಬರೂ ನೆತ್ತರ್ ಬಿದ್ದಲ್ಲಿ ಮುಂದೆ ಮುಂದೆ ಹೋದೊ. ತಲೆಗೆ ಕಟ್ಟಿದ ಲೈಟ್‌ಲಿ ಒಳ್ಳೆ ಬೊಳ್ಪು ಹೊರಡ್‌ತಿತ್ತ್. ಬಲಕೈನ ಹೆಬ್ಬೆರಳ್ ಸಡನ್ ಡೆತ್ ಗನ್ನ್‌ನ ಟ್ರಿಗರ್ ಮೇಲೆ ಇತ್ತ್. ಹುಡುಕಿಕಂಡ್

ಹೋಕು ಅಷ್ಟೆ ಒಂದು ಅಪಾಯನೇ ಎದ್‌ರಾದ ಸಮಯ ಆಗಿತ್ತ್. ಸ್ವಲ್ಪ ಮುಂದೆ ಹೋಕನ ಸಣ್ಣ ಚೋಡಿ ಎದ್‌ರಾತ್. ಅದರ ಮೇಲೆ ಭಾಗಕ್ಕೂ ಕೆಳಗೆನ ಭಾಗಕ್ಕೂ ಲೈಟ್ ಹಾಕಿ ನೋಡ್ದೊ. ಎಲ್ಲಿನೂ ಕಾಟಿ ಇಲ್ಲೆ. ಆಚೆ ಪುಡೆಲಿ ನೆತ್ತರ್ ಹನ್ನಿದ್ ಕಾಂಬತಿತ್ತ್. ಹಾಂಗೆ ಹೋಗಿ ಆಕನ ಹಂಞ ದಿಡ್ಡೆ ಹತ್ತಿಕೆ ಆತ್. ಅದರ ಇಳಿಯಕನ ಒಂದು ಬೆದ್ರು ಹಿಂಡ್ಲ್ ಕಾಂಬಕೆ ಸಿಕ್ಕಿತ್. ಅದರ ಕೆಳಗೆ ಕಾಟಿ ಮಲಗಿಕಂಡ್ ಇತ್ತ್. ಅಲ್ಲಿ ಕಾಟಿ ಕಾಂಬದೂಂತ ಅವು ನೆನ್ನಿತ್ತ್‌ಲ್ಲೆ. ತೀರಾ ಕಂಗಾಲ್ ಆಗಿದ್ದ ಕಾಟಿಗೆ ಲೈಟ್‌ನ ಬೊಳ್ಪು ನೋಡಿ ಸಿಟ್ಟ್ ಬಂದ್ ಕುತ್ತಿಕೆ ಅಂದಾಜಿ ಮಾಡಿಕಂಡ್ ಇವರ ಹಕ್ಕಲೆ ನುಗ್ಗಿ ಬಾತ್. ಅದರ ನೋಡ್ದವು ಎದೆ ಒಡ್ಕಂಡ್ ಸಾಯೊಕು. ಹಾಂಗೆ ಇತ್ತ್‌ಗಡ ಅದರ ನೋಟ. ಗೌಡ್ರು ಮಾರ್ಡು ನಾಯ್ಕಂಗೆ, ಮರೆಗೆ ಹೋಗಿ ಬಚಾವು ಆಕೆ ಹೇಳಿದೊಗಡ. ಅಂವ ಎಡಭಾಗಲಿ ಓಡಿಕೆ ಸುರುಮಾಡ್ತ್ ಇವು ಬಲ ಭಾಗಲಿ ಹಾರಿ ಲೈಟ್ ಹೊತ್ತಿಸಿದೊ. ಕಾಟಿ ಮಾರ್ಡುನ ಗುರಿಮಾಡಿಕಂಡ್ ಅವನ ಕುತ್ತಿಕೆ ಓಡಿತ್. ಇನ್ನ್ ಎರಡೇ ನಿಮಿಷಲಿ ಮಾರ್ಡು ನಾಯ್ಕ ಒಡ್ಡಡ್ಕದ ಇತಿಹಾಸದ ಪುಟಲಿ ಸೇರಿಬುಟ್ಟದೆ. ಈಗ ಗುಂಡು ಹಾರ್ಲಿರೆ ಮಾರ್ಡು ನಾಯ್ಕಂಗೆ! ಅವನ ಸಾವು ಸಡನ್‌ಡೆತ್ ಗನ್‌ಲೀಂತ ಅವನ ಹಣೆಲಿ ಬರ್ದಿದ್ದರೆ! ಗುಂಡು ಹೊಡ್ತ್‌ಲ್ಲರೆ ಕಾಟಿ ಅವನ ಚಿಂದಿ ಚಿಂದಿ ಮಾಡ್ದೆ, ಅ ಹಿಂಸೆಂದ ಗುಂಡು ತಾಂಗಿ ಸಾಯೊದು ದಯಾಮರಣ ಸಾವು ಅದು ಅಂತ ನೆನೆಸಿಕೊಂಡು ಕಾಟಿನ ಹಿಂದೆಂದ ಗೌಡ್ರು ಗುಂಡು ಹೊಡ್ದೊಗಡ. ಗುಂಡು ಕುಂಡೆಂದ ಜೀವದ ಒಳಗೆ ನುಗ್ಗಿತ್ತ್. ಮಾರ್ಡು ನಾಯ್ಕನ ಮುಗಿಸಿಕೆ ನೋಡ್ತಿದ್ದ ಕಾಟಿ ಒಮ್ಮೆ ನಿಂತ್ ಮೈನ ಕೊಡಕಿ ಕಂಡತ್. ಹಂಞ ಹೊತ್ತ್‌ಲ್ಲಿ ದೆರ್ಪಿಕಂಡ್ ಕೆಟ್ಟ ಸ್ವರಲಿ ಕಿರ್ಚಿಕಂಡ್ ದೊಡ್ಡ ಸಬ್ದ ಮಾಡಿಕಂಡು ನೆಲಕ್ಕೆ ಬೀತ್. ಅವನ ಮುಂದೆನ ದಾರಿ ಸಾಯುದು ಒಂದೆಂತ ತಿಳ್ಕಂಡವ ಓಡಿ ಬಂದ್ ಇವರ ತಬ್ಬಿಕಂಡತ್‌ಗಡ. ಅಂತೂ ಇಂತೂ ಮಾರ್ಡು ಅಣ್ಣಂಗೆ ಅಂದ್ ಇನ್ನೊಮ್ಮೆ ಹುಟ್ಟಿಬಂದ ಹಾಂಗೆ ಆತ್. ಯಮನ ಬಾಯಿಂದ ಬಚಾವಾಗಿ ಬಾತ್.

"ನಿನ್ನೆ ಎರಡು ಸರ್ತಿ ಯಮನ ಕೈಂದ ಬಚಾವಾಗಿತ್ತ್, ಇಂದ್ ಏನಾದರೂ ಅವ ಬದ್ಕಿಕಿಲ್ಲೆ"ಂತ ಅವಂಗೆ ತೀರ್ಮಾನ ಆಗಿತ್ತ್. ಆ ಕಾಲಲಿ ಆಂಧ್ರ ಮೂಲದ ಬುಡು ಬುಡುಕಿಯವ ಬಂದ್ "ಕಾಡ್ ಪ್ರಾಣಿಗಳ ಭಯವಿದೆ" ಎಂದ್ ಹೇಳಿತ್‌ಗಡ. ಅವನ ಮನಸ್ಸಿಗೆ ತಾಂಗುವಾಂಗೆ ಸಮಾಧಾನ ಮಾಡಿ ಅವನ ಮನೆಗೆ ಹೋಗೂಂತ ಹೇಳಿದೊ. ಅಂತು ನಿಮ್ಮ ಮೂರು ಜನ ಬುಟ್ಟು ನಾ ಹೋಕಿಲ್ಲೆ. ನೀವು ಮೂರು ಜನರೇ ಆದ್‌ರೆ ನಾ ಹೋದುಲ್ಲೆಂತ ಹೇಳ್ತ್. ಮೂರು ಜನ ಆಗಿ ಹೋಕಿಲ್ಲೆ ಅಂತ ಉಟ್ಟು, ನಾ ಹೇಂಗೆ ಹೋದುಂಥ ಅವ ಹೇಳಿಕಂಡ್ ಇದ್ದಾಕನ ಪರಿಹಾರ ಕಾಣದೆ ಹೊರಗೆ ದೂರಲಿ ಯಾರೊ ಎರಡು ಜನ ಬಾದು ಕಂಡಂತ್. ಹ್ಹೊ....... ಹ್ಹೊ ಪೇರೆ ಅಬ್ದುಲ್ ಸಾಹುಕಾರ ಮತ್ತೆ ಇತ್ತೀಚೆಗೆ ಜಿಲ್ಲಾ ಪಂಚ್ಯಾತ್ ಮೆಂಬರ್ ಆದ ಕೂರ್ನಡ್ಕ ದೇವಪ್ಪ ಮೇಷ್ಟ್ರ ಅಪ್ಪ ರಾಮಣ್ಣ ನಾಯ್ಕ (ಕುಟ್ಟಿ ನಾಯ್ಕ) ಬಂದೊ. ಮಾರ್ಡು ನಾಯ್ಕನ ಮೋರೆಲಿ ಸಮಸ್ಯೆ

ಪರಿಹಾರ ಆಗಿ ಖುಷಿ ಕಂಡತ್. ಬೊಳ್ಪಿಗೆ ಅವಲಕ್ಕಿ ತಿಂದು ಬಡ್ಡಕ್ಕದ ದಾರಿ ಹಿಡ್ತ್. ಭವಿಷ್ಯಲಿ ಹೀಂಗೇ ಆದೆ ಎಂದ್ ಕರಾರುವಕ್ಕಾಗಿ ಹೇಳಿಕೆ ಯಾರಿಗೂ ಆಕಿಲ್ಲೆ.

ಒಂದೇ ಜಾತಿನ ಮರಗಳ ಬೆಳ್ಸುದು ಪ್ರಕೃತಿನ ಕೆಲಸಕ್ಕೆ ಅಡ್ಡಿ ಆದೆ. ಸುಮಾರು ಬಗೆನ ಪ್ರಾಣಿಗ ನಾಶ ಆದವೆ. ಆದರೆ ಯೋಜನೆಗ ಬಂದಾಕನ ನಾವು ಅದರ ಪಾಲನೆ ಮಾಡೋಕಾದೆ. ಈಗ ನೀವು ಸುಳ್ಯಂದ ಮಡಿಕೇರಿಗೆ ಹೋಕನ ಅಲ್ಲಲ್ಲಿ ಸಾಗುವಾನಿ ತೋಪು ಕಂಡದೆ. ಅದೆಲ್ಲ ಅಷ್ಟು ಕಾಟಿಗಳ ಕೊಂದ ಫಲ. ಅಖೇರಿಲಿ ಇವು ಮಾಡಿದ ಕೆಲ್ಸ ಮೈ ರೋಮ ಕುತ್ತಾಗುವಾಂಗೆ ಇತ್ತ್. ಅಖೇರಿ ದಿನ ಗೌಡ್ರು ಮತ್ತೆ 5 ಬೆಡಿಗ ಇದ್ದೊ. ರಾಮಣ್ಣ ನಾಯ್ಕ ಕಾಟಿಗೆ ಹೊಡ್ದ ಗುಂಡು ಮರ್ಮ ಜಾಗೆಗೆ ತಾಂಗಿತ್ಲೆ. ಕಾಟಿ ಓಡ್ಕನ ಪೇರೆ ಅಬ್ದುಲ್ಲ ಸಾವ್ಕಾರ 'ನಿಂಡೆ ಚಾವು ಮಣ್ಣ್ಇಟ್ಟ್ ಮೂಡಟ್ಟ್' ಎಂದ್ ಬೈತ್. ಇವ ಅಡ್ಡದಾರಿ ಹಿಡ್ದ್ ಪೆಟ್ಟಾಗಿದ್ದ ಕಾಟಿನ ಹಕ್ಕಲೆ ಬಂದೊ. ಕಾಟಿ ಎದ್ರುಕನ ಎಲ್ಲ ಒಳ್ಳೆ ಜಾಗೆಲಿ ಅಡಗಿ ಕುದ್ದೊ. ಅಪ್ಪಯ್ಯ ಗೌಡ್ರು ಒಂದು ಗಿಡ್ಡೆ ಒಳಗೆ ಅಡಗಿಕಂಡ್‌ದ್‌ರ ಕಾಟಿ ನೋಡ್ತ್. ಅದ್ ಆ ಗಿಡ್ಡೆನ ಗುರಿಯಾಗಿಸಿಕಂಡ್ ಹೂಂಕರಿಸಿಕಂಡ್ ಬಾಕನ ಗೌಡ್ರು ಅದಕ್ಕೆ ಗುಂಡು ಹೊಡ್ದ್ ಬೇರೆ ಗಿಡ್ಡೆ ಪಕ್ಕ ಹಾರ್‍ದ್ದೊಗಡ. ಆದರೆ ಗುಂಡು ಕಾಟಿಗೆ ತಾಗಿತ್‌ಲೆ. ಆದರೆ ಸುರುಗೆ ಇವು ಇದ್ದ ಜಾಗೆಂದ ಹೊಗೆ ಎದ್ರುದು ನೋಡಿ ಈ ಶನಿ ಇಲ್ಲೆ ಇರೋಕೂಂತ ಅದ್ ಆ ಗಿಡ್ಡೆಗೆ ಕುತ್ತಿಕೆ ಸುರುಮಾಡ್ತು. ಅದರ ಸಿಟ್ಟ್‌ಲ್ಲಿ ಆ ಗಿಡ್ಡೆ ಪುಡಿ ಪುಡಿ ಆತಿತ್ತ್. ಅಷ್ಟೊತ್ತಾಕನ ಕುದ್ದಲ್ಲಿಂದ ಮೇಲೆ ಎದ್ದು ಗೌಡ್ರು ಕಾಟಿನ ಮರ್ಮ ಜಾಗಕ್ಕೆ ಗುಂಡು ಹೊಡ್ದೊ. ಆಗ ಅದ್ ಭಾರೀ ಜೋರುಂದ ಕಿರ್ಚಿಕಂಡ್ ಸತ್ತು ಬೀತ್. ಅದ್ ಇನ್ನು ಮೇಲೆ ಏಳ್ದೊಲೆಂತ ಗ್ಯಾರಂಟಿ ಆದ ಮೇಲೆ ಅದ್ರಾಮಿಚ್ಚ ಬಿಸತ್ತಿ ಹಾಕಿತ್. "ಓ ದೇವರೆ! ಇದರ ತರಡು ಬೀಜನೇ ಭರ್ತಿ ಐದು ಕಿಲೋ ಆದು ಮಾರಾಯ್ರೇ" ಅಂತ ಹೇಳ್ತುಗಡ. ಅದರ ರುಚಿಕಂಡ ಬೇರೇವು ವರ್ಣಿಸಿಕನ ಸುತ್ತ ಮೊನ್ಸರಿಗೆ ಬಾಯಿಂದ ಜೊಲ್ಲು ಸುರ್‍ತುಗಡ.

ಸತ್ತ ಕಾಟಿನ ದಲಿತರಿಗೆ ಕೊಟ್ಟು ಮೂಡು ದಿಕ್ಕಿಗೆ ಹೊರಟೊ. ಕಾಟಿಗಳ ಚರ್ಮ ಸುಲ್ದ್ ದಲಿತರಿಗೆ ಮೊರೆಲಿ ಕುಷಿ ಆಗಿ, ಒಣಗಿಸಿರೆ ತುಂಬಾ ದಿನಕ್ಕೆ ಮಾಸ ಸಿಕ್ಕಿತ್‌ಂತ ಗೌಜಿಲಿ ಇದ್ದೊ. ಆಗಿನ ಕಾಲ ತಿಂಬಕ್ಕೆ ಬರಗಾಲ. ಇವು ಐದು ಜನ ಸಾಗುವಾನಿ ನರ್ಸರಿಂದ ಎರಡು ಮೈಲಿ ದೂರಲಿ ಇದ್ದೊ. ಕಣ್ಣಳತೆ ದೂರಲಿ ಸಮತಟ್ಟು ಜಾಗಲಿ ಏಳೆಂಟು ಕಾಟಿಗ ಇವುಕೆ ಎದುರಾಗಿ ಕಾಡ್‌ಬಲ್ಲೆನ ನೋಡಿಕಂಡ್ ಮುಖುನ ಮೇಲೆತ್ತಿ ಕಿವಿ ನಿಮಿರಿಸಿ ನಿಂತ್‌ಕೊಂಡಿದ್ದೊ. ಮರದ ಮೇಲೆ ಇದ್ದ ಮುಸುವಗ ಕಿರ್ಚಿಕಂಡೇ ಇದ್ದೊ. ಅವು ಎಲ್ಲಿ ನೋಡಿಕಂಡ್ ಇದ್ದದ್ದ್ ಎಂತ ಇವುಕೆ ಅಂದಾಜಿ ಆತ್. ಒಂದ್ ಬಲ್ಲೆನ ಒಳಗೆ ಹುಲಿ ಇದ್ದು ಒಂದು ಕಾಟಿನ ಮೇಲೆ ಹಾರಿತ್ತ್. ಕಾಟಿ ಹುಲಿ ಬಾಯಿಂದ ಬುಡಿಸಿಕಣಿಕೆ ನೋಡ್ತಿತ್ತ್. ಇವು ಒಟ್ಟಿಗೆ ಇದ್ದವು. ಒಂದೊಂದು ಕಾಟಿನ ತೋರ್‍ಸಿಕೊಂಡ್ ಸನ್ನೆ ಮಾಡಿಕಂಡೊ. ಅವು ಐದು ಗುಂಡು ಹೊಡ್ದೊಳೊ. ಒಂದು ಗುಂಡು ಹೊಡ್ದ್

ಗಾಯ ಮಾತ್ರ ಆಗಿತ್ತ್. ಪೇರೆ ಅಬ್ದುಲ್ಲ ಸಾವ್ಕಾರ ಆ ಕಾಟಿಗೆ ಗುಂಡು ಹೊಡ್ದು ಸಾಯಿಸಿತ್. ಹುಲಿನ ಸದ್ದೆ ಇತ್ತ್‌ಲ್ಲೆ. ಹುಲಿ ಕಾಟಿನ ಕುತ್ತಿಗೆ ಕಚ್ಚಿಕಂಡ್ ಪ್ರಾಣ ಬುಟ್ಟುಟ್ಟು. ಇತ್ತ ಅದ್ರಾಮಿಚ್ಚ ಬ್ರಹ್ಮಾನಂದಲಿ ಚೂರಿ ಹಾಕ್‌ಕನ ಒಂದು ಕಾಟಿ ಮಾತ್ರ ಪೂರಾ ಸತ್ತತಿಲ್ಲೆ. ಅದ್ ಅದ್ರಾಮಿಚ್ಚನ ಓಡ್ಸಿಕಂಡ್ ಬಾತ್. ಹೆದರಿ ಕಂಗಾಲಾಗಿ "ಎಂಡೇ ರಬ್ಬೇ" ಎಂದ್ ಬೊಬ್ಬೆ ಹಾಕಿ ಓಡಿಕೆ ಶುರು ಮಾಡಿತ್. ಅಪ್ಪಯ್ಯ ಗೌಡ್ರು, ರಾಮಣ್ಣ ನ್ಯಾಕರ ಬೆಡಿ ಒಂದೇ ಸಮಯಲಿ ಗರ್ಜಿಸಿತ್. ಕಾಟಿನ ಪ್ರತಾಪ ಅಲ್ಲಿಗೆ ಮುಗ್ತ್. ಪೇರೆ ಅಬ್ದುಲ್ಲ ಸಾವ್ಕಾರರು ಎಲ್ಲದರ ಬಿಸ್ಮತ್ ಮಾಡಿ, ಹುಲಿ ಚರ್ಮ ಮತ್ತ್ ಉಗುರುಗಳೊಟ್ಟಿಗೆ ಹಿಡ್ಕಂಡ್ ಹಿಂಬತ್ತಾಕನ ಬಡ್ಡಡ್ಕಕ್ಕೆ ಮುಟ್ಟಿದೊ. ಒಂದ್ ಹುಲಿ ಚರ್ಮ ಮತ್ತ್ ಉಗುರು ಗೌಡ್ರಿಗೆ ಸಂದತ್. ಒಟ್ಟು ಕಳ್‌ದ ಮೂರು ದಿನಲಿ ಇಪ್ಪತ್ತೇಳ್ ಕಾಟಿಗಳ ಕೊಂದದ್ ಪೂಮಲೆ ಇತಿಹಾಸಲಿ ಒಂದ್ ದೊಡ್ಡ ಸಂಗತಿ ಆತ್. ಪೂಮಲೆನಂತ ದೊಡ್ಡ ಕಾಡ್‌ಲಿ ಸಾಗುವಾನಿ ದೈ ಬೆಳ್ಸಿಕೆ ನೋಡ್ದ ಆಪೀಸರ್‌ಗಳ ತಪ್ಪೋ, ಅದರ ಹಾಳ್ ಮಾಡಿಕೆ ಹೊರ್ಟ ಕಾಟಿಗಳ ತಪ್ಪೋಂತ ಗೌಡ್ರು ಗೇನ ಮಾಡಿಕೆ ಸುರು ಮಾಡ್ದೊ.

ಒಂದು ವಾರ ಕಳ್ದ್ ಅದೇ ಅರಂಬೂರು ಗಾರ್ಡ್ ಕಾಡ್‌ನ ಇಲಾಖೆಂದ ಒಂದು ಶಿಫಾರಸ್ ಕಾಗದನೂ, ಒಟ್ಟಿಗೆ ಆರುನೂರು ರುಪಾಯಿನೂ ತಕಂಡ್ ಎರಡನೇ ಸರ್ತಿ ಮನೆಗೆ ಬಾತ್. ದೊಡ್ಡ ಉಪಕಾರ ಮಾಡ್ದರಿ ಗೌಡರೇಂತ ಹೇಳಿ ಕೈಮುಗ್ತ್. ಆ ದುಡ್ಡ್‌ನ ಆರ್ ಜನಕ್ಕೆ ಪಾಲುಮಾಡಿ ಕೊಟ್ಟ್, ಕನ್ನಡಿಯೊಳಗೆ ಬಂದ್ ಮಾಡ್ದ ಶಿಫಾರಸ್ ಕಾಗದದ ಪಟನ ಗೋಡೆಗೆ ನೇತ್ ಹಾಕಿದೊಗಡ.

10

ಪುತ್ತೂರ್‌ನ ತಾಸೀಲ್ದಾರ್ರು ಅದ್ರಾಮ

ಆಗ ಇಂಗ್ಲೀಷರದ್ದೇ ಕಾರ್‌ಬಾರ್‌ನ ಕಾಲ. ಆಗ ಸಾಮಾನ್ಯ ಜನ ಹೆಚ್ಚಾಗಿ ಗಂಜಿ ತೆಳಿ, ಬೆಲ್ಲದ ಕಾಪಿ, ರಾಗಿ ಅಂಬಲಿ ತಿಂಬತಿದ್ದ ಕಾಲ. ಮನೆಗಳ್ಲಿ ಹೆಚ್ಚಿನ ಭತ್ತ ಅಕ್ಕಿ ಉಟ್ಟುಂತ ಸರಕಾರಕ್ಕೆ ಗೊತ್ತಾದರೆ, ಅವರಲ್ಲಿ ಹೋಗಿ, ಭತ್ತ, ಅಕ್ಕಿ ಎಲ್ಲ ಹುಡ್ಕಿ ಸರಕಾರಕ್ಕೆ ಅದರ ಒಪ್ಪಿಸಿಕೆ ಆಫೀಸರ್ ಇರ್ತಿದ್ರೊ. ಮಹಾಯುದ್ದದ ಕಾಲ. ಅದ್ದರ್‌ಂದ ಮಿಲಿಟ್ರಿಯವುಕ್ಕೆ ಹೆಚ್ಚಿನದಾಗಿ ತಿಂಬಕೆ ಬೇಕಾತಿತ್ತ್‌ಗಡ. ರೇಶನ್ ಕೋಟಾಲಿ, ಸಕ್ಕರೆ, ಚಾಹುಡಿ, ಚಿಮಿಣಿ ಎಣ್ಣೆ ಸಿಕ್ಕ್‌ತ್ತಿತ್ತ್. ಹುಲಿ ಚರ್ಮ, ಉಗುರು, ಹಲ್ಲ್ ತಕಂಡ್ ಒಟ್ಟಿಗೆ ಪಟೇಲ್ರ ಶಿಫಾರಸ್ ಕಾಗದ ತೆಕಂಡ್ ತಾಸಿಲ್ದಾರ ಆಫೀಸಿಗೆ ಹೋದರೆ, ರೇಶನ್ ಕೂಡಾ ಹೆಚ್ಚಿಗೆ ಸಿಕ್ಕತ್ತಿತ್ತ್. ಗೌಡ್ರೂ ಒಮ್ಮೆ ಹುಲಿ ಚರ್ಮ ತೆಕಂಡ್, ತಾಸಿಲ್ದಾರ ಆಫೀಸ್ ಪುತ್ತೂರಿಗೆ ಹೋದೊಗಡ. ಬೇಟೆಗೆ ಹೋಕನ, ಒಟ್ಟಿಗೆ

ಬಂದವುಕ್ಕೆ ಚಾಯ ಹೆಚ್ಚಿಗೆ ಬೇಕಾಗಿತ್ತ್. ಹಾಂಗೆ ಹುಲಿ ಚರ್ಮ ತಕಂಡು ಹೋದರೆ ಚಾಯ ಹುಡಿ, ಸಕ್ಕರೆ ಹೆಚ್ಚಿಗೆ ತಕಂಬಕೆ ಆಸೆ ಇವುಕೆ ಇತ್ತ್.

ತಾಸಿಲ್ದಾರ್ ದೊಡ್ಡ ಸಾಹೇಬರ್ ಅಪ್ಪಯ್ಯ ಗೌಡ್ರಿಗೆ ಬರೀ ಇಪ್ಪತ್ತ್ ವರ್ಷ ಆಗಿತ್ತಷ್ಟೆ. ಮೀಸೆ ಚಿಗುರುವ ಹೈದ. ಅದ್ರಾಮ ಸಾಹೇಬರಿಗೆ ಸಂಶಯ ಬಾತ್. ಈ ಹೈದ ಹುಲಿ ಹೊಡ್ತಾ. "ಸತ್ಯ ಹೇಳ್, ಬೇರೆಯವು ಹೊಡ್ಡ ಹುಲಿ ಚರ್ಮನ ತೆಕಂಡ್ ಬಂದದ್ ಯಾಕೆ?. ಹೇಳ್‌ದೇ ಇದ್ದರೆ ನಿನ್ನ ಪೋಲೀಸಿಗೆ ಕೊಟ್ಟನೆ" ಎಂತ ಹೆದರ್ಸಿದೊ. ಕೊಂದದ್ ಹೌದೂಂತ ಪಟೇಲರ ಶಿಫಾರಸ್ ಕಾಗದಲಿ ಬರ್ದ್ ರುಜು ಹಾಕಿದರ ಇವು ತಕಂಡ್ ಹೋಕಾಗಿತ್ತ್. ಚಪ್ಪೆ ಮೋರೆ ಹಾಕಿಕಂಡ ವಾಪಾಸ್ ಪುತ್ತೂರಂದ ಬಡ್ಡಡ್ಡಕ್ಕೆ ನಡ್‌ಕಂಡೇ ಬಂದೋ. ಅವುಕೆ ಮರ್ಯಾದೆ ಕಮ್ಮಿ ಆದ ಹಾಂಗೆ ಆತ್.

ಅವರ ಧೈರ್ಯ ಸಾಹಸಕ್ಕೆ ದೇವರು ಪ್ರಕೃತಿ, ಹೀಂಗೆ ಎಲ್ಲದರ ಬಲ ಸಿಕ್ಕಿ ಅವು ಅದೇ ತಿಂಗಳ್ಳಿ ಮೂರು ಹುಲಿ ಹೊಡ್ದ್ ಚರ್ಮ, ಉಗುರು ಎಲ್ಲಾ ತಕಂಡ್ ಪಟೇಲರ ಶಿಫಾರಸ್ ಕಾಗದದ ಒಟ್ಟಿಗೆ ಪುತ್ತೂರು ಅದ್ರಾಮ ಸಾಹೇಬರಲ್ಲಿಗೆ ಹೋದೋಗಡ. ಬಾಗಿಲಲಿ ಇದ್ದವನ ಒಪ್ಪಿಗೆ ತೆಕಂಡಾಕನ ಅವರ ಆಫೀಸ್‌ನ ಒಳಗೆ ಕರ್ಕಂಡ್ ಹೋತ್. ಮೂರು ಹುಲಿ ಚರ್ಮ, ಉಗುರು, ಶಿಫಾರಸ್ ಕಾಗದ ಎಲ್ಲ ಸಾಹೇಬ್ರ ಮೇಜಿನ ಮೇಲೆ ಗೌಡ್ರು ಇಸಿದೋಗಡ. ಶಿಫಾರಸ್ ಕಾಗದ ಓದಿದ ಸಾಹೇಬರ್ ಅವರ ಕೆಂಪು ಕಣ್ಣ್‌ನ ಅಗಾಲಿಸಿ ಬಾರಿ ಖುಷಿಲಿ ನೋಡಿ, ಇವರ ಎದುರ್ಲಿ ಇದ್ದ ಕುರ್ಚಿಲಿ ಕುದ್ರಿಕೆ ಹೇಳ್ದೊ. ಒಳ್ಳೆ ಚಾಯ ತರ್ಸಿ ಕುಡಿಯೋಕೆ ಕೊಟ್ಟ್. 'ಹುಲಿ ಹೊಡೆದುದು ಹೇಗೆಂತ" ವಿಚಾರ್ಸಿಕಾಕನ ಇವು ಹುಲಿ ಹೊಡ್ಡದರ ವಿವರಿಸ್‌ಕನ ಅವರ ಕಣ್ಣ್‌ನ ಹುಬ್ಬುನ ಮೇಲೆ ಏರ್ಸಿಕಂಡ್ ಕೇಳಿ. ಇವರ ಸಾಹಸಕ್ಕೆ ಕುಶಿಪಟ್ಟ್ ಹಿಂದೆ ಕೊಟ್ಟ ಅರ್ಜಿನ ಸನ ಸೇರ್ಸಿಕಂಡ್ "ಇನ್ನಷ್ಟು ಹುಲಿ ಕೊಲ್ಲಕು. ಹೀಗೆ ಜನರಿಗೆ ಉಪಕಾರ ಮಾಡಕೂಂತ" ಹೇಳಿಕಂಡ್ ಕೈ ಕುಲುಕಿದೊಗಡ. ವಿಶೇಷಂತೇಳ್ರೇ ಹೊಸ ಹೆಚ್ಚಿಗಿನ ಕೋಟದ ಕಾರ್ಡ್‌ನ ಬರ್‌ಸಿ ಕೊಟ್ಟೊಗಡ. ಮುನ್ನೂರು ರೂಪಾಯಿ ನಗದು ಹಣನೂ ಕೊಟ್ಟು ಮತ್ತೆ ಒಮ್ಮೆ ಬಾಂತ ಹೇಳಿ ಕಳ್ಸಿದೊಗಡ.

11

ಸಾಹೇಬರ ಒಟ್ಟಿಗೆ ಕೂಡು ಬೇಟೆ

ಬಡ್ಡಡ್ಕಕ್ಕೆ ತಾಂಗಿಕಂಡಿರುವ ಕಲ್ಲಪಳ್ಳಿಗೆ ಇಂಗ್ಲೀಷ್ ಸಾಹೇಬರ್ ಬೇಟೆಗೆ ಅಲ್ಲದೇ ಸೆಟ್ಲ್‌ಮೆಂಟ್ ಸರ್ವೆಗಾಗಿ ಇಂಗ್ಲೀಷ್‌ನವು ಬಂದವೇಂತ ಸಂಗತಿನ ಚೋಯಂಬುನವು ಅಪ್ಪಯ್ಯ ಗೌಡ್ರಿಗೆ ಹೇಳಿದೊ. ಕಲ್ಲಪಳ್ಳಿ ಈಗ ಕೇರಳಕ್ಕೆ ಸೇರಿ ಹೋಗುಟ್ಟು. ಮುಂದೆ ಅದ್ ಅಚ್ಚಕನ್ನಡದ ನೆಲ ಆಗಿತ್ತ್. ಬಂಧುಗ ಅಲ್ಲಿ ತುಂಬ ಒಳೊ. ಇಕ್ಕಟ್ಟ್‌ನ ಕಾಡು ಇರುವ ಜಾಗೆನೂ ಅದಾಗಿತ್ತು. ಕೂಡು ಬೇಟೆ ಎಲ್ಲ ಬೇಟೆಗಾರರೂ ಒಟ್ಟಾಗಿ ಹಗಲು ಹೊತ್ತ್‌ಲಿ ನಡ್ಸುವ ಬೇಟೆ. ಕಾಡ್‌ಲಿ ಪ್ರಾಣಿಗ ಓಡಾಡುವ ಒಂದೊಂದು ಜಾಗೇಂತ ಇದ್ದದೆ. ಅದ್ಕೆ ಪ್ರಾಣಿಗ ಓಡಾಡುವ ಗಂಡಿಗಂತ ಹೇಳುವೆ. ಹಂಞ ಜನ ಈಡ್‌ಗಾರರ್ ಗಂಡಿಗಳ್ಳಿ ಬೆಡಿ ಸಮೇತ ಕಾದು ನಿಲ್ಲೊಕು. ಉಳ್ದವು ನಾಯಿಗಳ ಕರ್ಕಂಡ್, ಪ್ರಾಣಿಗ ಗಂಡಿಗಳ ಹಕ್ಕಲೆ ಓಡಿ ಬರುವ ಹಾಂಗೆ ಮಾಡೊಕು. ಬ್ರಿಟಿಷರ್ ಶತಮಾನ ಕಾಲ ಭಾರತನ ಆಳ್ದವು. ಬೇಕಷ್ಟು ಶೋಷಣೆ

ಮಾಡ್ದೊ. ಆದರೂ ಅವರ ಹಕ್ಕಲೆ ಒಳ್ಳೆ ಗುಣಗ ಸತ ಇದ್ದೊಂತ ಎಲ್ಲವುಕೆ ಗೊತ್ತಿತ್. ಗಟ್ಟಿತನ ಜಾಣತನ ಬುದ್ಧಿವಂತಿಕೆನ ಮೆಚ್ಚುವಂತ ಸ್ವಭಾವ ಇತ್ತ್‌ಂತ ಎಲ್ಲವು ಹೇಳ್ತಿದ್ದೊ.

ಕಲ್ಲಪಳ್ಳಿಲಿ ತುಂಬ ದುಡ್ಡುನ ಗಂಟ್‌ನಂತ ಬೀಟಿ ಮರಗ ಸಾವಿರ ಸಂಖ್ಯೆಲಿ ಇದ್ದೊ. ಕದಿಯೊದರ್ಲಿ ಬಿರ್ಸರ್ ಆಗಿದ್ದವು ಒಂದು ಹಂಞ ಜನ ಬೀಟಿ ಮರಗಳ ಕಾಸರಗೋಡಿಗೆ ಕಳ್ಳ ಸಾಗಣೆ ಮಾಡಿ ತುಂಬಾ ದುಡ್ಡು ಮಾಡ್ತಿದ್ದೊ. ಕಳ್ಳ ಬೆಡಿಂದಳೋ, ವಿಷ ಬೆರ್ಸಿದ ಮಾಸ ಹಾಕಿನೋ, ಹುಲಿಗಳ ಕೊಂದ್ ಚರ್ಮ ಉಗುರುಗಳ ಮಾರಿ ದುಡ್ಡುಲಿ ದೊಡ್ಡದಾತಿದ್ದೊ, ಇದರ ಸಹಿಸದೆ ಇದ್ದವು ಎದುರ್ ಹಾಕಿಕಣಿಕೆ ಆಗದೇ ಇದ್ದವು ಯಾರೋ ಸಂಬಂಧಪಟ್ಟ ಆಫೀಸ್‌ಗೆ ತಳ್ಳಿ ಅರ್ಜಿ ಹಾಕಿದ್ದೊ. ತಳ್ಳಿ ಅರ್ಜಿಗೆ ಮರ್ಯಾದೆ ಕೊಟ್ಟ್ ಕಲ್ಲಪಳ್ಳಿ ಊರಲಿ ಕೃಷಿ ಇಲ್ಲದ ಜಾಗನ ಸರಕಾರಕ್ಕೆ ಸೇರ್ದ ಜಾಗೇಂತ ಮಾಡಿ ಅಲ್ಲಿ ಪ್ರಾಣಿ ಬೇಟೆ, ಮರ ಕಡಿಯೊದು ಎಲ್ಲ ಮಾಡಿಕೆ ಬತ್ತ್‌ಂತ ಮಾಡುವ ಇರಾದೆಂದ ಬ್ರಿಟಿಷ್ ಸೆಟ್ಲ್‌ಮೆಂಟ್ ಆಫೀಸರ್ ಒಬ್ಬನ ಅಲ್ಲಿಗೆ ಕಳ್ಸಿತ್.

ಚೋಯಂಬುನೊಟ್ಟಿಗೆ ಗೌಡ್ರು ಅಲ್ಲಿಗೆ ಹೋಕಾಕನ ಬೊಳ್ಪುಗೆ ಗಂಟೆ ಒಂಬತ್ತ್ ಆಗಿತ್. ಸಾಹೇಬ್ರು ಕುರ್ಚಿಲಿ ಕುದ್ದ್‌ಕಂಡ್ ಅವರ ಬೆಡಿನ ಮುಟ್ಟಿ ನೋಡ್ತಿದ್ದೊ. ಕಲ್ಲಪಳ್ಳಿ ಕಾಡ್‌ನ ಆಫೀಸರ್‌ಗೆ ಗೌಡ್ರ ಗುರ್ತ ಇತ್. ಅವು ಸಾಹೇಬಂಗೆ ಇವರ ಗುರ್ತ ಮಾಡ್ಸಿದೊ. ಸಾಹೇಬ ಎದ್ದ್ ನಿತ್ತ್ ಇವರ ಕೈ ಕುಲ್‌ಕಿದೊ. ನಲವತ್ತೈದ್ ವರ್ಷ ದಾಟಿದ್ದರೂ, ಅವನ ಉರುಟಾದ ಕೆಂಪು ಮೋರೆನ ನೋಡಿಕಾಕನ ಕುಷಿ ಆತಿತ್ತ್‌ಗಡ. ಗೌಡ್ರ ಕೈಲಿದ್ದ ಸಡನ್‌ಡೆತ್ ಬೆಡಿನ ನೋಡಿ ಇದ್ ನಿಂಗೆ ಎಲ್ಲಿ ಸಿಕ್ಕಿತ್‌ಂತ ಕೇಳ್ತ್. ಕೈಲಿದ್ದ ಬೆಡಿನ ನೋಡಿ "ಇದ್ ಇಂಗ್ಲೇಂಡ್‌ನ ಮಿಡ್‌ಲೇಂಡ್ ಕಂಪೆನಿ ತಯಾರಿಸಿದ ಬೆಡಿ". ಗೌಡ್ರ್ ಹೇಳ್ದೊ "ಹೇಳ್ದಾಂಗೆ, ಕೊಡಗ್‌ನ ಕಾಪಿತೋಟಲಿ ಕೊಡಗನ ರೈಟ್ರು ಆಗಿ ಒಬ್ಬ ಇದ್ದೊ. ಅವು ಸತ್ತ ಮೇಲೆ ಅವರ ಹೆಣ್ಣು ಇದರ ಅಪ್ಪಯ್ಯ ಗೌಡ್ರ ಅಪ್ಪ ದೇವಯ್ಯ ಗೌಡರಿಗೆ ಮಾರ್ದ್‌ಂತ." "ಗುಡ್ ಇದರ ಉಪಯೋಗಿಸಿಯಾಂತೇಳ್ರೆ ನೀ ಒಳ್ಳೆ ಬೇಟೆಗಾರನೆ ಆಗಿರೋಕು". ಇವರ ಮತ್ತು ಸಾಹೇಬ್ರ ಮಧ್ಯಲಿ ಇಂಗ್ಲೀಷ್‌ನ ಕನ್ನಡಕೆ ತರ್ಜುಮೆ ಮಾಡುವ ಕಾಡ್‌ನ ಆಫೀಸರ್ ಇದ್ದೊ. ಮತ್ತೆ ಅಪ್ಪಣೆ ಆತ್. ಈಗಳೇ ಇಲ್ಲಿ ಕೂಡು ಬೇಟೆಗೆ ಜನ ಒಳೋ. ನೀ ಇವರೊಟ್ಟಿಗೆ ಸೇರಿಕಾ. ನಿನ್ನ ಗುರಿ ಪರೀಕ್ಷೆ ಆದೆಂತ ಸಾಹೆಬ್ರು ಹೇಳ್ದೊ. ಸಿಗರೇಟೊ ಎಳ್ದಿಯನೋ? ಅಂತ ಕೇಳ್ದೊಗಡ. "ಇಲ್ಲೆ ಹಾಂಗೆ ಬೇಕೂಂತ ಆಕನ ಬೀಡಿ ಎಳ್ದನೇ"ಂತ ಹೇಳ್‌ಕನ ಸಾಹೇಬ್ರು ನಗಾಡ್ದೊಗಡ. ಇವು ಸಾಹೇಬ್ರಂದ ಹಂಞ ದೂರಲಿ, ಗಂಡಿಲಿ ನಿತ್ತ್‌ಕಂಡೊ. ಕಾಡ್‌ಸೋವವು ಬೇಟೆ ನಾಯಿಗಳ ಒಟ್ಟಿಗೆ ಬೊಬ್ಬೆ ಹಾಕಿ ಗಿಡ್ಡೆ ಬುಡಲಿ ಅಡಂಗಿಕಂಡ್ ಇದ್ದ ಪ್ರಾಣಿಗಳ ಓಡ್ಸುವ ಕೆಲಸ ಮಾಡ್ದೊ. ಒಂದೇ ಒಂದ್ ಪ್ರಾಣಿ ಗಂಡಿಗಳ ಹಕ್ಕಲೆ ಬಾತ್‌ಲ್ಲೆ. ಆಸೆ ಇಲ್ಲದೆ ಇವು ನಿತ್ತ್‌ಕಂಡ್ ಇರ್ಕನ ಕಂಡತ್ ಕಾಡು ಹಂದಿ ಇವರ ಹಕ್ಕಲೆ ಎತ್ತಿಟ್ಟು. ಆ ದೊಡ್ಡ ಹಂದಿ, ದಪ್ಪಂಗೆ ಇದ್ದ ಅದರ ನೋಡಿ ಸಾಹೇಬ್ರು ಅದರ ನೋಡಿಕಂಡೇ ಇರ್ಕನ ಗೌಡ್ರ ಸಡನ್‌ಡೆತ್

ಗರ್ಜನೆ ಮಾಡ್ತ್, ಆ ಹಂದಿಗೆ ಎರಡು ಗುಂಡುಗಳ ಹೊಡ್ದೊ. ಹಂದಿ ಬಿದ್ದಿತ್ತ್. ಬಿದ್ದ ಹಂದಿನ ಸೋವುವವು ಬಡಿಗೆಗೆ ಕಟ್ಟ್‌ಕನ ಸಾಹೇಬ ಹೇಳ್ತ್, "ನೀ ಹಂದಿನ ಕೊಂದೆ, ಇಲ್ಲದಿದ್ದರೆ ನನ್ನ ಅದ್ ಏನಾದರೂ ಮಾಡ್ತಿತ್ತ್. ಅವರ ಮಾತ್‌ನ ಕಾಡ್‌ನ ಆಫೀಸರ್ ನಂಗೆ ಹೇಳಿಕಂಡ್ ಇರ್ಕನ ನಮ್ಮ ಬೇಟೆನಾಯಿಗ ಬೊಗಳಿಕಂಡ್ ಮುಂದೆ ಹೋದೊ. ಎದುರಿದ್ದ ಗಿಡ್ಡೆಗೆ ಜೀವ ಬಂದ ಹಾಂಗೆ ನಾಲ್ಕೈದ್ ಕಾಡ್ ಕೋಳಿಗ ಕೆಕ್ಕ ಕೆಕ್ಕಂತ ಸದ್ದ್ ಹೊರಡ್ಸಿಸಿ ಆಕಾಶಕ್ಕೆ ಹಾರ್ದೊ. ಬಾಕಿ ಇದ್ದವು ಮರಕಟ್ಟಿಕಂಡ್ ನೊಡಿಕಂಡೇ ಇದ್ದೊ. ಗೌಡ್ರ ಕೋವಿಂದ ಗುಂಡು ಹಾರ್ತ್. ಒಳ್ಳೆ ಬೆಳ್ದ ಕಾಡು ಹುಂಜ ಕೋಳಿ ನೆಲಕ್ಕೆ ಬೀತ್. ಸಾಹೇಬನ ಬೇಟೆನಾಯಿ, ಅದರ ಕಚ್ಚಿಕಂಡ್ ಬಂದ್ ಸಾಹೇಬರ ಕಾಲ ಬುಡಕ್ಕೆ ಹಾಕಿತ್. ಕೆಂಪು ಮೋರೆನ ಸಾಹೇಬ ಗೌಡ್ರ ನೋಡ್ತ್. ಬೈದು ಬುಟ್ಟದೇಂತ ಗೌಡ್ರಿಗೆ ಅನ್ಸಿತ್. "ನಿಂಗೆ ಒಳ್ಳೆ ಏಮು ಉಟ್ಟು. ಅದರಂದಳೂ ಹೆಚ್ಚು ಬೇಟೆಗಾರಂಗೆ ಇರೋಕಾದ ಬುದ್ಧಿವಂತಿಕೆ ನಿಂಗೆ ಉಟ್ಟು. ನೀ ಭಾರಿ ದೊಡ್ಡ ಬೇಟೆಗಾರ ಆದಿಯಾ"ಂತ ಹೇಳ್ದೊಗಡ. ಮಧ್ಯಾಹ್ನ ಆಕನ ಊಟ ಮುಗ್ಸಿ ಬಡ್ಡಡ್ಕಕ್ಕೆ ಹೊರ್ಟಾಕನ ಸಾಹೇಬ ಗೌಡ್ರನ್ನ್ ನಿಲ್ಲಿಕೆ ಹೇಳ್ದೊ. "ಹಂಡ್ರೆಡ್ ರೂಪೀಸ್ ನಿಂಗೆ, ಒಟ್ಟಿಗೆ ತೋಟಾದ ಕಟ್ಟು ಮೂವತ್ತು. ಎಲ್ಲವು ಮೇಡ್ ಇನ್ ಇಂಗ್ಲೇಂಡ್, ಒಟ್ಟಿಗೆ ಆನೆದಂತ ಬೆಳ್ಳಿ ಕಟ್ಟಿನ ಚಾಕು ಕೊಟ್ಟ್, ನಿಂಗೆ ಒಳ್ಳೆದಾಗಲಿ." ಅಂತ ಹೇಳ್ತು ಗಡ. ಗೌಡ್ರು ನೋಟು ತೆಕಂಡತ್ಲೆ. ಚೂರಿನೂ ತೋಟೆನೂ ತೆಕೊಂಡೋಗಡ. "ಜಗತ್ತು ದುಂಡಗಿದೆ ಎಂದಾದರೂ ಭೇಟಿಯಾದೇವು. ಕಂಡಾಗ ಮಾತಾಡಿಸಲು ಮರೆಯಬೇಡ, ನಾನು ಮರೆತರೂ ನೀ ಸುಮ್ಮನಿರಬೇಡ"ಂತ ಹೇಳ್ದೊಗಡ.

12

ಮಡ್ತಿಲ ರಾಮಣ್ಣ ಪಟೇಲರ – ಪಂಥ

ಅಪ್ಪಯ್ಯ ಗೌಡರು, ಬ್ರಿಟಿಷ್ ಸಾಹೇಬನ ಕೂಡು ಬೇಟೆಲಿ ತೋಟದ ಕಟ್ಟ್ ಮತ್ತು ಆನೆನ ಕೊಂಬುನ ಹಿಡಿನ ಚೂರಿ ಬಹುಮಾನ ತೆಕಂಡ್‌ದ್, ಹಾರುವ ಕಾಡ್‌ಕೋಳಿಗೆ ಗುಂಡು ಹೊಡ್ಡದ್ ನಮ್ಮ ಸಿಮೇಲಿ ದೊಡ್ಡ ವಿಷಯ ಆತ್. ಅದ್ ಐವರ್ನಾಡಿನ ಮಡ್ತಿಲ ರಾಮಣ್ಣ ಪಟೇಲರಿಗೂ, ಮುಟ್ಟಿತ್. ಹಳೆ ಪುರಾಣಲಿ 'ಪಾಂಡವರು ಐದು ಜನ ಅವರ ವನವಾಸದ ಸಮಯಲಿ ಕೆಲವು ದಿನಗಳ ಇಲ್ಲಿ ಕಳ್ದೊಗಡ, ಹಾಂಗೆ ಈ ಊರಿಗೆ ಹೆಸರ್ ಐವರನಾಡು ಈಗ ಐವರ್ನಾಡು ಆತ್‌ಂತ ಹೇಳುವೆ. ಮಡ್ತಿಲ ರಾಮಣ್ಣ ಪಟೇಲರು ಮತ್ತು ಮಡ್ತಿಲ ಬೆಳ್ಯಪ್ಪ ಗೌಡ್ರು ಆ ಕಾಲಲಿ ಬಹಳ ಮುಖ್ಯ ಜನಂಗ ಆಗಿದ್ದೊ. ಬೆಳ್ಯಪ್ಪ ಗೌಡರ ಒಬ್ಬಳೇ ಮಗಳ ನಿಡ್ಯಮಲೆ ಮುದ್ದಪ್ಪ ಜಡ್ಡರಿಗೆ ಮದುವೆ ಮಾಡಿ ಕೊಟ್ಟಿದ್ದೊ. ರಾಮಣ್ಣ ಗೌಡರಿಗೆ ನಾಲ್ಕು ಜನ ಗಂಡು ಮಕ್ಕ.

ಅವರ ಪೈಕಿ ಮಡ್ತಿಲ ಜನಾರ್ದನಂತ ಹೇಳುವವು ಸುಬ್ರಹ್ಮಣ್ಯ ದೇವಸ್ಥಾನದ ಟ್ರಸ್ಟ್‌ನ ಅಧ್ಯಕ್ಷ ಕೃಷ್ಣಪ್ರಸಾದನವರ ಅಪ್ಪ. ರಾಮಣ್ಣ ಗೌಡರ ದೊಡ್ಡ ಮಗಳ್ ಕಮಲಮ್ಮ ಡಾ। ಸಾಯಿಗೀತನ ಅಜ್ಜಿ. ಈಗ ತೊಂಬತ್ತನಾಲ್ಕ್ ವರ್ಷ ಆದರೂ ಕೂಡ ಜ್ಞಾನ, ಮಾತ್ ಎಲ್ಲ ಸರೀ ಉಟ್ಟು. ಬಾರಿ ಲ್ಯಾಕ್‌ಲಿ ಒಳೊ.

ಪಟೇಲರಂತ ಹೇಳಿರೆ ಒಂದು ಊರ್‌ನ ದೊರೆಗ ಇದ್ದ ಹಾಂಗೆ ಇದ್ದೊ. ಅವು ಇಚ್ಚೆಪಟ್ಟದರ ಯಾರಂದ ಬೇಕಾದ್ದರೂ ತೆಕಂಬ ಮತ್ತು ಕೊಡವ ಅಧಿಕಾರ ಹೊಂದಿದ್ದೊ. ಮಡ್ತಿಲ ರಾಮಣ್ಣ ಗೌಡರಿಗೆ ಬೇರೆ ಚಟ ಏನು ಇಲ್ಲದಿದ್ದರೂ, ಬೇಟೆನ ಚಟ ಇತ್ತು. ಅಪ್ಪಯ್ಯ ಗೌಡ್ರಿಗೆ ಹಿರಿಯವು ಮತ್ತು ಅಲ್ಲಿನ ಜನ ಕೂಡಾ ಪಟೇಲರ ಭಾರೀ ಇಷ್ಟಪಡ್ತಿದ್ದೊ. ಒಳ್ಳೆ ಬೇಟೆಗಾರರ ಐವರ್ನಾಡಿಗೆ ಕರ್ದ್ ಅವರ ಈಡುಗಾರಿಕೆ ಪರೀಕ್ಷೆ ಮಾಡ್ದ್ ಅವರ ಅಭ್ಯಾಸಲಿ ಒಂದು. ಕಲ್ಲಪಳ್ಳಿಲಿ ಇಂಗ್ಲೀಷ್ ಸಾಹೇಬನ ಕೂಡು ಬೇಟೆಲಿ ಅಪ್ಪಯ ಗೌಡ್ರು ತೋರ್ಸಿದ ಸಾಹಸ ಸುದ್ದಿ ಕೇಳಿ ಅವರ ಐವರ್ನಾಡಿಗೆ ಬಾಕೆ ಹೇಳಿಕಳ್ಸಿದೊ. ಗೌಡ್ರು ಸಡನ್ ಡೆತ್ ಬೆಡಿನ ಹೆಗಲಿಗೆ ನೇತ್ ಹಾಕಿ ಸಾಹೇಬ ಕೊಟ್ಟ ತೋಟೆನ ಚೀಲಲಿ ಇಸಿ ಬಡ್ಡಡ್ಕಂದ ಹತ್ತು ಮೈಲ್ ನಡ್ದ್ ಐವರ್ನಾಡಿಗೆ ಪಟೇಲರ ಮನೆಗೆ ಎತ್ತಿದೊ. ಅವರ ಮಾತ್‌ಗೆ ಮರ್ಯಾದೆ ಕೊಟ್ಟ್ ಅಷ್ಟು ದೂರ ನಡ್ದದೇ ಅವುಕ್ಕೆ ಕುಶಿಯಾಗಿ, ಬೆಂಡ ತರ್ಸಿ ಹಾಕಿ ಎಷ್ಟ್ ಬೇಕಾದರೂ ಕುಡ್‌ದ್‌ಕಾಂತ ಹೇಳ್ದೊಗಡ. ಇವು ಒಳ್ಳೆ ಮನಸ್ಸ್‌ನವೂಂತ ಅಪ್ಪಯ್ಯಗೌಡ್ರಿಗೆ ಅನ್ಸಿತ್. ಪಟೇಲ್ರೇ ಬೆಡಿ ಹಿಡ್ಕಂಡ್ ಬೇಸಾಯದ ಗದ್ದೆ ಕಡೆ ಇಬ್ಬರೂ ಹೊರ್‍ಟೊ. ಅಂದ್ ಐವರ್ನಾಡಿನವು ಮಾತ್ರ ಅಲ್ಲದೆ ಪಂಜ, ನೆಟ್ಟಾರ್, ಚೊಕ್ಕಾಡಿ, ಪೈಲಾರ್‌ನ ಈಡುಗಾರರೂ ಇದ್ದೊ. 'ಅದರ ಹೊಡ್ದರೆ ನೀ ಗಂಡ್ ಮಂಜಂತ' ಪಟೇಲರು ತುಂಬ ಎತ್ತರಲಿ ಹಾರ್‌ತಿದ್ದ ಪಾರಿವಾಳನ ಅಪ್ಪಯ ಗೌಡ್ರಿಗೆ ತೋರ್ಸಿದೊ. ಎಲ್ಲವ್ಕೂ ಒಂದೇ ಸಮಯಲಿ ಈಡ್‌ಲಿ ಪರೀಕ್ಷೆ ಅಂತ ಅಪ್ಪಯ್ಯ ಗೌಡ್ರಿಗೆ ಅರ್ಥ ಆತ್. ಅದರ ಹೊಡ್ದ್ ಉಪಯೋಗ ಏನಿಲ್ಲೆ. ಹೊಡೆಯದಿದ್ದರೆ ಅವು ಹಾಕಿದ ಪಂಥಕ್ಕೆ ಇವು ಸುಮ್ಮನೆ ಇದ್ದಾಂಗೆ ಆದೇಂತ, ಅಷ್ಟ್ ಜನಗಳ ಮುಂದೆ ನಾ ಗಂಡ್ ಅಲ್ಲಂತ, ಆದೇಂತ ಗೌಡ್ರು ಬೆಡಿನ ಬಾನಕ್ಕೆ ಹಿಡ್ದ್ ಸರಿಯಾಗಿ ಗುರಿ ನೋಡಿ ಟ್ರಿಗರ್ ಒತ್ತಿದ್ದೊ. ಗುಂಡ್‌ನ ಪೆಟ್ಟ್ ತಿಂದ ಪಾರಿವಾಳ ದೊಪ್ಪನೆ ಬೀತ್.

"ಏರ್ಲ ದಾಲ ಪಂಡ್ರೊಡ್ಚಿ"ಂತ ಪಟೇಲ್ರೇ ದೊಡ್ಡ ಸ್ವರಲಿ ತಾಕೀತ್ ಮಾಡ್ದೋ. ಬೇಟೆ ಆದ ಕೂಡ್ಲೆ ಏನಾದರೂ ಹೇಳ್ರೆ ಮತ್ತೆ ಆ ಬೇಟೆಗಾರಂಗೆ ಬೇಟೆ ಆಡಿಕೆ ಆದುಲ್ಲೇಂತ ಬೇಟೆನವರ ಒಂದು ನಂಬಿಕೆ. ಮನೆಗೆ ಬಂದ ಮೇಲೆ ಪಟೇಲರ್ "ನಿನ್ನಂಥ ಈಡುಗಾರನ ನನ್ನ ಜೀವಮಾನಲಿ ನಾ ನೋಡ್ತ್‌ಲ್ಲೆಂತ" ಹೇಳಿ ಗೌಡ್ರ್‌ನ ಬಾಯಿತುಂಬ ಹೊಗಳ್ದೊಗಡ.

13

ಕಾಟಿ ಮೇಲೆ ಕುದ್ದ ಕೂಸಪ್ಪ ಗೌಡ್ರು

ಕಲ್ಲಪಳ್ಳಿನ ಬಾಟೋಳಿ ಗುಡ್ಡೆ ಬಡ್ಡಡ್ಕದ ಗಡಿ ಭಾಗ. ಕೇರಳ ಅಲ್ಲಿಂದ ಸುರು ಆದೆ. ಸುರು 1955ರ ವರೆಗೆ ಅಡಿಭಾಗಂದ ಮೇಲೆ ಮುಟ್ಟ ಮರಕಾಡ್, ಗಿಡ್ಡೆಗ, ಚೀಮುಳ್ಳು, ಗುಲಾಬಿ ಬಲ್ಲೆಗ, ಇರಿಂಜಿರಿ ಬಳ್ಳಿಗ ತುಂಬ ಇರ್‌ತಿದ್ದೊ. ದೊಡ್ಡ ಬೆದ್‌ರ್ ಹಿಂಡ್ಲ್‌ಗ ಸಾ ಇತ್ತ್. ಅದು ಕಾಡ್‌ನ ಇಲಾಖೆಲಿ ಸೇರಿಕಂಡ್ ಇತ್ತ್. ಅದ್ದರಂದ ಅಲ್ಲಿ ಪ್ರಾಣಿಗ ಹಕ್ಕಿಗ ಬೇಕಷ್ಟ್ ಇದ್ದೊ. ಅಪ್ಪಯ್ಯ ಗೌಡರು ಬಾಟೋಳಿಲಿ ಬೇಟೆ ಮಾಡ್ದೇ ಹೆಚ್ಚ್‌ಗೆಗಡ. ಒಂದು ಸರ್ತಿ ಮಳೆಗಾಲಲಿ ಬೇಟೆ ಆಡೊಕೂಂತ ಗೌಡ್ರಿಗೆ ಆಸೆ ಆತ್. ಮಳೆಗಾಲಲಿ ಬೇಟೆಗೆ ಹೋದು ಕಷ್ಟ. ಕಾಲಿಸಿರೆ ಜಾರುವ ದಾರಿ. ಒಂದು ಕಡೆ ಯಾವುದೋ ಮಾಯಕಲಿ ಮೈ ಮೇಲೆ ಹತ್ತಿ ನೆತ್ತೆರ್ ಕುಡಿವ ಉಂಬುಳುಗ. ಅದರ ಕಾಟ ಕಮ್ಮಿ ಮಾಡಿಕೆ ಉಪ್ಪು ನೀರು, ಹೊಸೆಪ್ಪು ಅಲ್ಲದೆ ಮೂಗಿಗೆ ಹಾಕುವ ನಶ್ಯನ ಎಣ್ಣೆಲಿ ಕಲಸಿ ಕಾಲಿಗೆ ಉಜ್ಜಿ ಕಣೊಕು. ಅದರ ಖಾರಕ್ಕೆ

ಉಂಬುಳ ಹತ್ತುದುಲ್ಲೆ. ಬಾಟೋಳಿ ಗುಡ್ಡೆ ಪೊರ್ಲುನ ಮೊದೊಳಿಗೆ ಗೂಡೆನ ಹಾಂಗೆ ಕಾಂಬತಿತ್. ಎಲ್ಲಿ ನೋಡಿರೂ ಗಿಡ್ಡೆಗ, ಬಲ್ಲೆಗ ಪೊರ್ಲುಲಿ ಬೆಳ್ದ್ ಹಸಿರಾಗಿ ಕಾಂಬತಿತ್. ಅದರ್ನೆಲ್ಲ ಹಾಂಗೇ ನೋಡಕ್‌ನ ಎರಡ್ ಕಾಟಿಗ ಕಂಡೊ. ಯಮರಾಯ ಇವರ ನೋಡಿರೆ ಇವರ ಮೇಲೆ ಕುದ್ದ್ ಸವಾರಿ ಮಾಡಿಕೆ ಕರ್ಕಂಬತ್ತಿತ್ತೊ ಏನೊ! ಇವರ್ನ ನೋಡಿಕನ ಅವುಕೆ ಸಿಟ್ಟು ಬಂದ್ ಕೆಂಪು ಕಣ್ಣ್‌ಲಿ ಗೌಡ್ರ ನೋಡಿಕೆ ಸುರುಮಾಡ್ದೊ. ಇನ್ನ್ ಹಂಞ ಹೊತ್ತ್‌ಲಿ ಇವರ ಹಕ್ಕಲೆ ಎತ್ತಿದ್, ಕುತ್ತಿ ಕುತ್ತಿ ಸಪಾಯಿ ಮಾಡ್ತಿದ್ದೊ. ಮಳೆಗಾಲಲಿ ನಡಯಕೇ ಆದುಲ್ಲೆ ಇನ್ನು ಓಡುದು ಎಲ್ಲಿಗೆ! ಮರ ಹತ್ತೊಮ್ಮೊಂತೇಳಿರೆ, ಪಾಚಿ ಕಟ್ಟಿದ ಮರ ಜಾರ್ದ್. ಕೋಲ್ಬಾರ್ ಕೂಸಪ್ಪನವು ಕೊಂದ ಕಾಟಿಗಳ ವಂಶಕ್ಕೆ ಸೇರ್ದವು ಆಗಿರೋಕು ಗೌಡ್ರ ನೋಡ್ದೊ. ಎಡ ಭಾಗಂದ ಒಂದ್ ದೊಡ್ಡ ಕಾಟಿ ಇವರ್ನ ಕುತ್ತಿಕೆ ಕೊಂಬು ಮುಂದೆ ಮಾಡಿಕಂಡ್ ಬಾತಿತ್, ಬಲದ ಭಾಗಂದ ಸಣ್ಣ್ ಕಾಟಿ ಬರ್ತಿತ್. ಹೀಂಗೆ ಕೆಣಿ ಮಾಡಿಕಂಡ್ ಎರ್ಡೂ ಹಕ್ಕಲೆ ಬಾತಿದ್ದೊ. ಅವು ಸುರು ಸಣ್ಣ ಕಾಟಿಗೆ ಮೇಲೆ ಮೇಲೆ ಎರಡು ಗುಂಡು ಹೊಡ್ದೇ ಬುಟ್ಟೊ. ಅದ್ ಬಿದ್ದತ್. ಬಲಭಾಗಲಿ ಹತ್ತು ಹೆಜ್ಜೆ ದೂರಲಿ ಯಮನ ವಾಹನದ ಹಾಂಗೆ ಇದ್ದ ಕಾಡುಕೋಣ ಭಾರೀ ದೊಡ್ಡದೇ ಆಗಿತ್. ಅಂತ ಕಾಟಿನ ನೋಡುವ ಭಾಗ್ಯ ಈಗ ಇರಿಕಿಲ್ಲೆ. ಸುಮಾರ್ ಏಳು ಅಡಿ ಎತ್ತರ, ಒಂಬತ್ತ್ ಅಡಿ ಉದ್ದದ ನೋಡಿಕೆ ಹೆದ್ರಿಕೆ ಆಗುವಂತ ಕಾಡುಕೋಣ ಸಿಟ್ಟ್‌ಂದ ಅಬ್ಬರಿಸಿಕಂಡ್ ಬಾಕನ ಅದರ ಸಿಟ್ಟ್‌ನ ಶ್ವಾಸ ತೆಗೆವ ಕ್ರಮಕ್ಕೆ ಎಲ್ಲಿ ದರ್ಗ್‌ನ ಹಾಂಗೆ ಹಾರಿ ಹೋನೆನೋಂತ ಆತಿತ್ತ್‌ಗಡ ಗೌಡರಿಗೆ. ಇನ್ನೇನ್ ಐದಾರು ಹೆಜ್ಜೆ ಮಾತ್ರ ! ಅದರ ಹೆಜ್ಜೆಗೆ ಭೂಮಿಯೇ ಅದುರುವಾಂಗೆ ಆತಿತ್. ಕಾಲ್ ನಡ್‌ಗ್‌ತಿತ್. ನಡ್ಗುವ ಕೈಲಿ ಬೆರಳ್ ಅದ್ ಹೇಂಗೆ ಬೆಡಿನ ಕುದುರೆ ಎಳ್ತೊ? ಅವರ ಹಣೆಲಿ ಇನ್ನೂ ಹಂಞ ವರ್ಷ ಬದ್ಕ್‌ಂತ ದೇವರ್ ಬರ್ದಿತ್ತೋ ಏನೋ. ಗುಂಡು ಹೊಡ್ದ್ ಇವು ಬಲ್ದಿಗೆ ಮೇಲೆ ಹತ್ತಿದೊ. ಅದು ಉರುಳಿಕಂಡ್ ಮುಂದೆನ ಕಾಟಿನ ಹಾಂಗೆ ಹೊರಳಿಕಂಡ್ ಕೆಳಗೆ ಹೋತ್. ಇವು ಏನಾದರೂ ಮೇಲೆ ಹೋಗದೆ ಇದ್ದಿದ್ದರೆ ಗುಂಡು ಹೊಡ್ದ ಜಾಗಲಿ ಇದ್ದಿದ್ದರೆ ಚಟ್ನಿ ಆತಿದ್ದೊ. ಆನೆಗೆ ಹಾಂಟಿದ್ದರೆ ಅದೂ ಹುಡಿ ಹುಡಿ ಆತಿತ್.

ಪೆಟ್ಟು ತಿಂದ ಕಾಟಿ ಅದರ ಪ್ರಾಣ ಹೋಕಂಡ್ಕಿರುವ ಸಮಯಲಿ ಗಿಡ್ಡೆ, ದೈಗ, ಬಲ್ಲೆ ಎಲ್ಲ ಲಟಪಟಾಂತ ಮುರ್ದು ಹೋವ ಶಬ್ದ ಕೇಳ್‌ತಿತ್. ಒಂದ್ ಹಂಞ ಹೊರಳಿಕಂಡ್ ಹೋದ ಮೇಲೆ ಒಂದ್ ದೊಡ್ಡ ಮರಕ್ಕೆ ಅಡ್ಡ ಸಿಕ್ಕಿಕಂಡ್, ಸ್ವಲ್ಪ ಹೊತ್ತ್‌ಲಿ ಸತ್ತೇಹೋತ್. ಖಾಲಿಯಾದ ಬೆಡಿಗೆ ವಾಪಾಸ್ ತೋಟೆ ತುಂಬಿಸಿ ಕಾಟಿ ಬಿದ್ದಲ್ಲಿಗೆ ಹೋದೊಗಡ. ಸಾಯುವ ಕಾಲಕ್ಕೆ ಅದರ ಮುಖಚರ್ಯೆ ನೋಡಿಕೆ ಭಾರಿ ಹೆದ್ರಿಕೆ ಆವ ಹಾಂಗೆ ಇತ್ತ್ ಗಡ. ಹಾಂಗೆ ಮೋರೆ ಇದ್ದರೆ "ರಣ ಕುದ್ದ ಕಾಟೀಂತ" ಹೇಳೂದು ವಾಡಿಕೆಗಡ. ರಣಾಂತೇಳ್ರೆ ಒಂದು ಕಣ್ಣಿಗೆ ಕಾಣದ ಕೆಟ್ಟ ಶಕ್ತೀಂತ ಹೇಳುವೆ. ಹಾಗೇ ಸತ್ತ ಆ ಕಾಟಿನ ಒಂದು ಕೊಂಬುನ ಉದ್ದ ಇಪ್ಪತ್ತೆಂಟ್ ಇಂಚ್ ಇತ್. ಆ ಕೊಂಬುನ ಈಗಲೂ ನೀವ್

ಯಾರೂ ಕೂಡಾ ನೋಡಕ್. ಅದ್ ಆಲೆಟ್ಟಿ ವ್ಯವಸಾಯಿಕ ಸಹಕಾರಿ ಸಂಘದ ಸಭಾಭವನದ ಗೋಡೆ ಮೇಲೆ ಇಸಿಕೊಂಡ್ ಉಟ್ಟು. ಎರಡೂ ಕೊಂಬುನ ಕೊಡಿಲಿ ಹೆಬ್ಬೆರಳ್ನ ಒತ್ತಿದಂತ ಹಂಞ ತಗ್ಗಿದ ಗುರ್ತ ಉಟ್ಟು.

ಈ ಜಾಗ ಹಿಂದೆ ಕೊಡಗ್‌ನ ಚಿಕ್ಕವೀರ ರಾಜ ಆಳ್‌ತಿತ್ತ್. ಕೇಳುವ ಗಟ್ಟಿದನಿಯವು ಯಾರೂ ಇಲ್ಲದಿದ್ದರೆ, ಆಳುವವು ಮಾಡ್ದೇ ಸರಿ ಎಂಬವು ಹೆಚ್ಚಾಗಿ ಇರ್‍ಕನ ರಾಜ ಮಾಡ್ದೇ ಕಾರ್‌ಭಾರ ಆಗಿತ್ತ್. ಆಳುವ ರಾಜನ ಕಾರ್ಯ ಯಾರಿಗೂ ಇಷ್ಟ ಆತಿತ್ತ್‌ಲ್ಲೆ. ಕುರುಡನ ಬದಲು ಕೋಸ್ ಕಣ್ಣ್‌ನವ ಆದರೂ ಆದೂಂತ ಜನ ಅವನ ಸಹಿಸಿಕಂಡಿದ್ದೊ. ಕುಡೆಕಲ್ಲು ದೇವಯ್ಯ ಗೌಡ್ರು (ಅಪ್ಪಯ್ಯ ಗೌಡರ ಅಪ್ಪ) ಹೇಳ್‌ತಿದ್ದ ಹಾಂಗೆ ಕೋಲ್ಚಾರ್ ಕೂಸಪ್ಪ ಗೌಡ್ರು ಆರೂವರೆ ಅಡಿ ಎತ್ತರದ ಆಳ್‌ಗಡ. ಮೀಸೆಲಿ ಎರಡು ನಿಂಬೆ ಹುಳಿ ಇಡುವಷ್ಟು ಗಟ್ಟಿ ಇದ್ದ್ ಹುರಿ ಮೀಸೆನ್ ನೋಡಿರೆ ಹೆದ್ರಿಕೆ ಆತಿತ್ತ್‌ಗಡ! ಅಗಾಲದ ಕಣ್ಣ್‌ಗ ಇದ್ದ ದೊಡ್ಡ ಮೋರೆ, ಉದ್ದದ ಮೂಂಕು. ಬಲ ಆಗಿದ್ದ ಅಗಲದ ದೊಡ್ಡ ಜೀವ. ಪಂತಕ್ಕೆ ಅಕ್ಕಿ ಮುಡಿನ ಹಲ್ಲ್‌ಲಿ ಎತ್ತ್‌ತಿದ್ದೊಗಡ. ಇವರ ಸಮಕ್ಕೆ ರಾಜ ನಿತ್ತರೆ ಇವೇ ರಾಜನ ಹಾಂಗೆ ಕಾಂಬತಿದ್ದೊಗಡ. ಮದುವೆಗೆ ಹೋದರೆ 4 ಕವಂಗ (ಪಾತ್ರೆ) ಪಾಯಸ ತಿಂಬತಿದ್ದೊಂತ ಸಹ ಹೇಳ್‌ತಿದ್ದೊ. ಇವು ಇಂಗ್ಲೀಷರ ಸೈನ್ಯಲಿ ಸುಭೇದಾರರಾಗಿದ್ದ್, ಒಂದ್ ಸರ್ತಿ ಆಪಿಸರನ ಹಕ್ಕಲೆ ರಜೆ ಕೇಳಿ ಊರಿಗೆ ಬಂದಾಕನ ಬೇಟೆನ ಆಸೆಗೆ ಅವು ಬಾಳ್‌ಕತ್ತಿ ಸೊಂಟಲಿ ಸಿಕ್ಕಿಸಿ, ಕೇಪುನ ಬೆಡಿಗೆ ಮದ್ದ್ ತುಂಬಿಸಿ ಬಂದದ್. ಎಲ್ಲಿಗೇಂತೇಳ್ರೆ ಬಾಟೋಳಿ ಗುಡ್ಡೆಗೆ. ಒಟ್ಟಿಗೆ ಬೇರೆ ಯಾರೂ ಇತ್ತ್‌ಲ್ಲೆ. ಹೆದರಿಕೆಂತ ಹೇಳಿರೆ ಅವುಕೆ ಗೊತ್ತೇ ಇಲ್ಲೆ. ಮಹಾಭಾರತದ ಭೀಮ ಬಕಾಸುರನ ಕೊಲ್ಲಿಕೆ ಹೊರಟ ಹಾಂಗೆ ಒಬ್ಬನೇ ಹೊರಟಿದ್ದೊ. ಮರದ ಮೇಲೆಂದ ಕಿಚ್‌ಕಿಚ್ ಮುಚ್ಚನ ಸ್ವರ ಕೇಳ್ತ್ (ಮುಸುವ) ಬೇಡ. ಇದರ್‌ಂದ ಒಳ್ಳೆ ಬೇಟೆ ಸಿಕ್ಕುದು. ಒಮ್ಮೆ ಕಾಲಿ ಆದ ಬೆಡಿಗೆ ವಾಪಾಸ್ ಚೆರೆ ತುಂಬುಸೊಕು. ಅದ್ಕೆ ಹಂಞ ಹೊತ್ತ್ ಬೇಕಾದೇಂತ ಹೊಡ್ತ್‌ಲ್ಲೆ. ಕೂಸಪ್ಪಣ್ಣ ಮರದ ಕೆಳಗೆ ಕಣ್ಣು ಹಾಕ್‌ಕನ ಎರಡ್ ಹಡೀ ಕಾಟಿಗ ಕಾಂಬತಿದ್ದೊ. ಯಾವ್‌ದಕ್ಕೆ ಹೊಡೆಯೋದು ಒಂದರ ಕೊಂದರೆ ಇನ್ನೊಂದ್ ನನ್ನ ಉಳಿಸಿಕಿಲ್ಲೆ. ಯಾಕೇಂತೇಳ್ರೆ ಮದ್ದು ತುಂಬಿಸಿಕೆ ಪುರುಸೊತ್ತ್ ಇಲ್ಲೆ. ಓಡಿರೆ ಓಡ್ಸಿಕಂಡ್ ಬಂದು ಕುತ್ತುವೊ. ಓಡಿಕಾಕಿಲ್ಲೆ. ಮರ ಹತ್ತಿರೆ ಮರ ಜಾರಿದೆ. ಸಣ್ಣ ಕಾಟಿ ಕೊಂಬು ಮುಂದೆ ಮಾಡಿಕಂಡ್ ಬಂದೇ ಬುಟ್ಟತ್. ಆದ ಹಾಂಗೆ ಆದೇಂತ. ಗುರಿ ಇಟ್ಟ್ ಬೆಡಿನ ಕುದುರೆ ಎಳ್ದೊ. ಕಾಟಿ ಬಿದ್ದ್ ಉರುಳಿಕಂಡ್ ಕೆಳಗೆ ಹೋತ್. ಅಷ್ಟೊತ್ತಿಗೆ ದೊಡ್ಡ ಕಾಟಿಗೆ ಎಲ್ಲಿಲ್ಲದ ಸಿಟ್ಟ್ ಬಾತ್. ನಿನ್ನ ಸಿಗ್ದೇ ಬುಟ್ಟನೇಂತ ಕೊಂಬು ಮುಂದೆ ಮಾಡಿಕೊಂಡು ಬಾತ್. ಅದರ ಕೋಪದ ಅವಸ್ಥೆ ಕಂಡ್ ಎಲ್ಲಾ ದೇವರ್‌ಗಳ ನೆನಪಾಗಿರುದು. ಈ ಬೆಡಿ ಕಾಲಿ ಆಗುಟ್ಟು. ಮದ್ದು ಜಡಿಯಕೆ ಪುರುಸೊತ್ತ್ ಇಲ್ಲೆ. ಅದ್ ಇವರ ಮೇಲೆ ಕುತ್ತಿದೆಂತ ಆಕನ, ಮಿಲಿಟ್ರಿ ಕಸರತ್ತ್ ನೆನ್ಪಾಗಿ ಕಾಲ್ ಅಗಾಲಿಸಿ ಪಕ್ಕನೆ ಹಾರಿ ಕಾಟಿನ ಬೆನ್ನ್‌ನ ಮೇಲೆ ಕುದ್ದ್‌ಗಡ.

ಇವರ ಮೋರೆನ ಆ ಮೇಲೆ ಹೇಂಗೋ ಸರಿ ಮಾಡಿಕಂಡ್ ಅದರ ಮೋರೆಗೆ ಹಿಂದೆನೇ ಕುದ್ದೊ. ಕಾಟಿಗೆ ಗಲಿಬಿಲಿ ಆಗಿ ಕಾಟಿ ಅತ್ತ ಇತ್ತ ವಾಲಾಡಿ ಕಂಡ್ ಇವರ ಬೀಳ್ಸಿಕೆ ನೋಡ್‌ತಿತ್ತ. ಆಗಲೇ ಹೇಳ್ದಾಂಗೆ ಕೂಸಪ್ಪಣ್ಣ ಬಲಭೀಮಾಂತ. ಕಾಟಿನ ಕೊಂಬು ಹಿಡ್ದ್ ಎಡ್ದ್‌ಗೆ ತಿರುಗಿಸ್‌ಕನ ಅದರ ಕುತ್ತಿಗೆನ ಎಲ್ಬು ತುಂಡಾತ್. ಆ ರಾಕ್ಷಸ ಕಾಟಿ ಅಡ್ಡಬಿದ್ದು ಹೊಣ್ಕಿಕೆ ಸುರು ಮಾಡ್ತ್ ಕೂಸಪ್ಪ ಗೌಡ್ರು ದೂರಲಿದ್ದ ಬಾಳ್ ಕತ್ತಿನ ತಂದ್. ಕುತ್ತಿಗೆನೆ ಕಡ್ದೊ. ಎರಡೇ ಕಡಿಯಾಟ. ತಲೆ ಬೇರೆಯಾಗಿ ಹೋತ್. ಹಾಂಗೆ ಸತ್ತ ಕಾಟಿಗಳ ಚರ್ಮ ತೆಗ್ದ್ ಮಾಸ ಮಾಡುವವೂ ಇಲ್ಲೆ. ಅದ್ ಕಾಡ್‌ನಾಯಿ. ಹಂದಿ ಇಲಿ ಹೆಗ್ಗಣಗಳಿಗೆ ತಿಂಬಕೆ ಮಾತ್ರ ಆತ್.

ಕೂಸಪ್ಪಣ್ಣನ ವಿಷಯ ಈ ಕತೆಲಿ ಬಾಕೆ ಕಾರಣ, ಅಪ್ಪಯ್ಯ ಗೌಡ್ರ ಅಪ್ಪ ಕುಡೆಕಲ್ಲ್ ದೇವಯ್ಯ ಗೌಡ್ರು, ಈ ಸಾಹಸಿನ ಕತೆನ ಹೇಳಿದ್ದೊಗಡ. ಬಾಟೋಳಿಲಿ ಎರಡ್ ಕಾಟಿಗಳ ಕೊಂದದ್, ಕೂಸಪ್ಪ ಗೌಡ್ರು ಕೊಂದ ಕಾಟಿನ ಕುಟುಂಬದವ್ವೇ ಆಗಿರೊಕೂಂತ ಅಪ್ಪಯ್ಯ ಗೌಡ್ರು ನೆನ್ಸಿಕಂಡದ್‌ಕೆ ಕೊಂದ ಎರಡು ಕಾಟಿಗಳ ಕತೆಗೆ ಹೋಲಿಸಿಕೆ ಆತ್. ಹಾಂಗೆ ಈ ವಿಷಯ ಈ ಹೇಳೊಕ್ಕೂಂತ ಮನಸ್ಸಾತ್. ಕೂಸಪ್ಪ ಗೌಡ್ರ ವಿಷಯ ಇಲ್ಲಿ ಬಾತ್, ಇನ್ನೂ ಹಂಞ ವಿಷಯ ಹೇಳೂಕೂಂತ ಆದೆ. ಬಹುಶಃ ಕೋಲ್ಚಾರ್ ಮನೆತನದಲ್ಲಿ ಕಾರ್‌ನೂರಿಗೆ ಇಸ್‌ಕನ ಇವರಿಗೆ ಒಂದು ಬೇರೆ ಪಾಲ್ ಇಸುವೇಂತ ಕೋಲ್ಚಾರ್ ವಿವೇಕಾನಂದಣ್ಣ ಹೇಳ್ತಿದ್ದೊ. ಆಗ ನಮ್ಮ ಸೀಮೆನ ಅಮರ ಸುಳ್ಯಂತ ಹೇಳ್‌ತಿದ್ದೊ. ಕೊಡಗ್‌ನ ರಾಜ ಚಿಕ್ಕವೀರನ ಸಂಸ್ಥಾನದ ಒಂದ್ ಭಾಗ ಆಗಿತ್ತ್ ಇದ್. ಅವ ವೀರಶೈವ ಜಾತಿಯವ ಆಗಿತ್ತ್. ಅವನ ಆಸ್ಥಾನಲಿ ಮತ್ತು ಸೇನೆಲಿ ಅರೆಭಾಷೆನ ಗೌಡರ್ ತುಂಬ ಜನ ಇದ್ದೊ. ಕೋಲ್ಚಾರ್ ಕೂಸಪ್ಪ ಅವರ ಪೈಕಿ ಒಬ್ಬ. ಆಗ ಬ್ರಿಟಿಷ್‌ನವು ಒಂದೊಂದೇ ಕಾರಣ ಹುಡ್ಕಿ ರಾಜ್ಯಗಳ ಅವರ ಜಾಗನ ದೊಡ್ಡದ್ ಮಾಡ್ತಿದ್ದೊ. ಚಿಕ್ಕವೀರರಾಜಂಗೆ ಸಿಂಹಾಸನಂದ ಕೆಳಗೆ ಇಳಿಯೊಕು, ಆದಿಲ್ಲೇಂತ ಆದರೆ, ಯುದ್ಧಕ್ಕೆ ತಯಾರಾಕು ಎಂದ್ ಕಾಗದ ಕಳ್ಸಿದೊ. ದಿವಾನ ಬೋಪು, ಇಂಗ್ಲೀಷ್‌ನವುಗೆ ಶರಣಾದರೆ ರಕ್ತಪಾತ ತಪ್ಪ್‌ಸಕ್ ಎಂದ್ ಹೇಳ್ತ್. ಇನ್ನೊಬ್ಬ ದಿವಾನ ಲಕ್ಷ್ಮೀನಾರಾಯಣ ಕೆಂಪು ಮುಸುಂಡುನ ಫರಂಗಿಯವುಕ್ಕೆ ನಮ್ಮ ಸ್ವತಂತ್ರನ ಒಪ್ಪಿಸುದು ಬೇಡಂತ ಹೇಳ್ತ್. ಜನಗಳಿಗೆ ಹಿಂಸೆ ಕೊಡುವ ಲಂಪಟ ಆಗಿದ್ದ ರಾಜ ಬೋಪುನ ಮಾತ್‌ಗೆ ರಾಜ ಒಪ್ಪಿಗೆ ಕೊಟ್ಟತ್. ಹಾಂಗಾಗಿ ಒಂದ್ ತೊಟ್ಟ್ ರಕ್ತ ಹರಿಯದೆ ಕೊಡಗ್ ಇಂಗ್ಲೀಷರ ಪಾಲಾಗಿ ಹೋತ್. ಅವು ರಾಜನ ಕಾಶಿಗೆ ಓಡಿಸಿ, ಬೋಪುಗೆ ದಿವಾನಗಿರಿನ ಬುಟ್ಟು, ಲಕ್ಷ್ಮೀನಾರಾಯಣನವರ ಜೈಲಿಗೆ ಕಳ್ಸಿದೊ. ಲೀ ಹಾರ್ಡಿಕಾ ಎಂಬ ಬಿಳಿಯ, ಕೊಡಗಿನ ಮೇಲುಸ್ತುವಾರಿನ ನೋಡುವ ಆಫೀಸರ್ ಆತ್. ಆಗ ನಮ್ಮ ಹಿರಿಯರ್ ಕೆದಂಬಾಡಿ ರಾಮ ಗೌಡರು, ಕುಡೆಕಲ್ಲು ಪುಟ್ಟಪ್ಪ ಮತ್ತ್ ಇನ್ನ್ ಹಂಞ ಜನ ಸೇರಿ ಸುಳ್ಯ ಸೀಮೆಲಿ ಒಂದು ದೊಡ್ಡ ದಂಡ್‌ನ ಕಟ್ಟಿದೊ. ಚಿಕ್ಕವೀರರಾಜಂಗೆ ಒಳ್ಳೆಯವ ಆಗಿದ್ದ ನಂಜಯ್ಯ ಹೆಸರ್‌ನವಂಗೆ ಕಲ್ಯಾಣಪ್ಪನಂತ ಹೆಸರ್ ಇಸಿ ಕರ್‍ಕಂಡ್

ದಂಡ್‌ನ ಮುಖ್ಯಸ್ತ ಆಗಿ ಮಾಡ್ಯೊ. ಆಗ ಈ ಸೀಮೆಗೆ ಬೆಳ್ಳಾರೆ ರಾಜಧಾನಿ ಆಗಿತ್ತ್. ಇಂಗ್ಲೀಷ್ ಕಂಪೆನಿಗೆ ಜನ ಕಂದಾಯ ಕಟ್ಟೊಕೂಂತ ಅಪ್ಪಣೆ ಬಾತ್. ಈ ಸೀಮೆನ ಕೊಡಗ್‌ಂದ ಬೇರೆ ಮಾಡಿ ಮಂಗಳೂರಿಗೆ ಸೇರ್ಸಿದೊ. ಹೋಕೆ ಬಾಕೆ ಬಸ್ಸ್ ಇಲ್ಲದ ಆ ಕಾಲಲಿ ಸುಳ್ಯದವು ಮಂಗಳೂರಿಗೆ ಹೋದೂಂತ ಹೇಳ್ರೆ ಈಗ ನಾವು ಮಂಗಳ ಲೋಕಕ್ಕೆ ಹೋದ ಹಾಂಗೆ. ಇಂಗ್ಲೀಸ್‌ನವುಕೆ ಹಣದ ಹುಚ್ಚು. ಅದಕ್ಕೆ ಉಪ್ಪುಗೆ, ಹೊಸೆಪ್ಪುಗೆ ತೆರಿಗೆ ಹಾಕಿದೊ. ಉಪ್ಪುಂದ ರುಚಿ ಬೇರೆ ಇಲ್ಲೆಲ್ಲ? ಅದ್ಕೆ ಇಲ್ಲಿಯವುಕೆ ಕೋಪ ಬಾತ್. ದಂಗೆ ಎದ್ದೊ. ಬೆಳ್ಳಾರೆ-ಪಂಜ-ಪುತ್ತೂರು-ವಿಟ್ಲ-ನಂದಾವರಕ್ಕಾಗಿ ಮಂಗಳೂರುವರೆಗೆ ದಂಡ್ ಹೋತ್. ಇವರ ನೋಡ್ದ ಫರಂಗಿಯವು "ಪಣಾಂತೆ ಪದ್ರಾಡ್" ಹಾಕಿದೊ. ಜಂಗಮ ಕಲ್ಯಾಣಪ್ಪನ ರಾಜ್ಯಪಾಲ ಮಾಡಿ ಮಂಗಳೂರ್‌ನ, ಕೆದಂಬಾಡಿ ರಾಮ ಗೌಡ್ರು ಎರಡು ವಾರ ಈ ರಾಜ್ಯ ಆಳ್ದೊ. ಅಷ್ಟೊತ್ತಿಗೆ ಕಲ್ಲಿಕೋಟೆಂದ ಫಿರಂಗಿ ಹಿಡ್ಕಂಡ್ ಸರಿಯಾಗಿ ಯುದ್ಧ ವಿದ್ಯೆನ ಕಲ್ತ ಮಿಲ್ಟ್ರಿ ಪಾಠ ಕಲ್ತ ಆ ಪಡೆ ಎದ್‌ರ್ ಕೊತ್ತಳಿಂಗೆ ಬಿರ್ಸರ್‌ಂತ ಹೊಗಳಿಸಿಕಂಡ ನಮ್ಮ ಪಡೆ ಎಲ್ಲಿ ? ನಾವು ಸೋತೋ. ಕೋಲ್ಚಾರ್ ಕೂಸಪ್ಪ ಗೌಡ್ರು ಆಲೆಟ್ಟಿ, ಅಜ್ಜಾವರ, ಮಂಡೆಕೋಲು ಎಲ್ಲ ಜಾಗೆಲಿ ಹೋಗಿ ಫರಂಗಿ ದೊರೆಯವರ ಎದುರಾಗಿ ನಿಲ್ಲಿಸಿಕೆ ಹಂಞ ಬಂಗ ಬಂದೊ. ಕೂಸಪ್ಪಣ್ಣನ ಮಾತಿಗೆ ಒಪ್ಪಿ ಸುಳ್ಯ ಮಾಗಣೆಂದ ಒಂದು ಕಾಸು ಕಂದಾಯ ಸಿಕ್ಕದೆ ಹೋಕನ ಲೀ ಹಾರ್ಡಿ ಇದರ ಗುಟ್ಟು ತಿಳಿಯಕೆ, ಜನ ಬುಟ್ಟತ್. ಹಾಂಗೆ ಕೂಸಪ್ಪ ಇದ್ಕೆ ಕಾರಣಾಂತ ಗೊತ್ತಾಗಿ ಕೂಸಪ್ಪನ ತಲೆ ತಂದ್ ಕೊಟ್ಟವುಕೆ ಒಂದು ಸಾವಿರ ರೂಪಾಯಿ ಕೊಟ್ಟವೇಂತ ಪ್ರಚಾರ ಮಾಡ್ದೊ. ಈಗ ಅಷ್ಟು ಹಣಂತೇಳ್ರೆ 2 ಲಕ್ಷಕ್ಕೂ ಜಾಸ್ತಿನೆ. ಕೆಲವು ಸಿಕ್ಕಿದವರ ವಿಚಾರಣೆನ ನಾಟಕ ಮಾಡಿ ಗಲ್ಲಿಗೆ ಏರ್ಸಿದೊ. ಹಣದ ಆಸೆಗೆ ಯಾರೋ ಒಬ್ಬ ಕೂಸಪ್ಪನವು ಉಳ್ಕಂಬ ಜಾಗೆನ ತೊರ್ಸಿರೊಕು. ಅದು ಕೋಲ್ಚಾರ್‌ನ ಸಣ್ಣದಾಗಿ ಭತ್ತ ಬೆಳ್ಸುವವನ ಮನೆ, ಅಟ್ಟಲಿ ಅಕ್ಕಿ ಮುಡಿನ ಸಾಲಾಗಿ ಜೋಡಿಸಿ ಇಸಿತ್. ಲೀ ಹಾರ್ಡಿನ ಮಿಲ್ಟ್ರಿಯವು ಒಮ್ಮೆಗೆ ಆ ಮನೆನ ಮುತ್ತಿದೊ. ಬಚಾವಾಗಿ ಓಡಿ ಹೋಕೆ ಸಂದರ್ಭ ಸಿಕ್ಕದೆ ಕೂಸಪ್ಪಣ್ಣ ಅಟ್ಟ ಹತ್ತಿದೊ. ಆಗ ಬಂದ ಮಿಲ್ಟ್ರಿಯವರ ಮೇಲೆ ಅಕ್ಕಿ ಮುಡಿನ ಎತ್ತಿ ಎತ್ತಿ ಬಿಸಾಡ್ದೊ. ಮುಡಿಲಿ ಸುಮಾರು 40ಕೆ.ಜಿ ಭಾರ ಇದ್ದದೆ. ಅದರ ಎತ್ತಿ ಎತ್ತಿ ಬಿಸಾಡೊಕೂಂತ ಹೇಳ್ರೆ ಅವುಕೆ ಎಷ್ಟ್ ಶಕ್ತಿ ಇರೊಕು. ಆದರೆ ಹೆಚ್ಚು ಹೊತ್ತು ಅಕ್ಕಿ ಮುಡಿನ ಬಿಸಾಡಿ ಅವುಕೆ ಹೋರಾಡಿಕೆ ಆತ್‌ಲ್ಲೆ. ಮಿಲ್ಟ್ರಿಯವ ಒಬ್ಬ ಕೂಸಪ್ಪಣ್ಣನ ಎಡ ಕೈನ ತುಂಡು ಮಾಡ್ತ್. ಅದೇ ಸಮಯಲಿ ಇನ್ನೊಬ್ಬ ಬೀಸಿದ ಕತ್ತಿ ಅವರ ತಲೆನೇ ತುಂಡು ಮಾಡಿ ಜೀವನ ಬೇರೆ ಮಾಡಿತ್. ಮಿಲ್ಟ್ರಿಯವರ ಎಲ್ಲರ ಮೋರೆಗೆ ರಕ್ತ ಹಾರ್ತ್. ಹಾಂಗೆ ಕೋಲ್ಚಾರ್ ಕೂಸಪ್ಪಾಂತೇಳುವ ಬಲಭೀಮನ ಕತೆ ಮುಗ್ಸಿದ ಮಿಲ್ಟ್ರಿಯವ, ತಲೆಕಡ್ದಂವ ಕುಷಿಲಿ ಕುಣ್ಕೊಂಡಿತ್ತ್‌ಗಡ. ತಲೆನ ತೆಕಂಡ್ ಲೀ ಹಾರ್ಡಿನ ಹಕ್ಕಲೆ ಹೋದೊ- ತಲೆನ ಮೇಜಿನ ಮೇಲೆ ಇಸಿದ್ ಎಲ್ಲವೂ ಸೆಲ್ಯೂಟ್ ಹೊಡ್ದೊ. ತಲೆನ ನೋಡಿ ಕಣ್ಣ್ ರೆಪ್ಪೆನ ಮೇಲೆ ಮಾಡಿ ಲೀ

ಹಾರ್ಡ್, "ಓ ಗೋಡ್! ಇದೆಂಥಾ ಭವ್ಯತೆ"ಂತ ಇಂಗ್ಲೀಷಿಲಿ ಹೇಳ್ತ್. ಅರ್ಥ ಮಾಡಿಕಂಬಕೆ ಆಗದ ಮಿಲ್ಟ್ರಿಯವು "ಹೌದು, ಹೌದು. ಇವನ ಕೊಂದದ್ ನಾನ್, ಆಗ ಉಳಿದವು ಹೇಳ್ದೊಗಡ, ನಾವೆಲ್ಲವೂ ಇದ್ದದ್ಕೆ, ಇವನ ಕೊಲ್ಲಿಕೆ ಆತ್. ಬಹುಮಾನಲಿ ನಾವ್ಗೂ ಪಾಲ್ ಬೇಕು". ಈ ಮಾತುಕತೆ ನಡೆಯಕನ ಬೋಪು ದಿವಾನ ಎದ್ದ್ ಬಾತ್‌ಗಡ. ಲೀ ಹಾರ್ಡಿ ತಲೆ ಕಡ್ದವನ ಸುರು ಕರ್ದ್ "ಎಲ್ಲವ್ಕೂ ಕೊಟ್ಟನೆ, ಮೊದಲ್ ನೀ ಬಾ"ಂತ. ಆ ಸೈನ್ಯದವ ಕುಶಿಲಿ ಮುಂದೆ ಬಾಕನ ತಟಕ್ಕನೆ ಅವಂದೆ ಕತ್ತಿಲಿ ಕಚಕ್ಕ್‌ಂತೇಳಿ ಅವನ ತಲೆನ ಕತ್ತರ್ಸಿತ್. ಬೋಪು "ಇಗ್ಗುತ್ತಪ್ಪಾಂತ್" ಹೇಳ್ತ್‌ಗಡ. ಉಳ್ದ ಸೇನೆಯವು ಬದ್ಕಿರೆ ಸಾಕ್‌ಂತ ಅಲ್ಲಿಂದ ಓಡ್ದೊಗಡ. ಲೀ ಹಾರ್ಡಿ ಕೂಸಪ್ಪ ಗೌಡರ ತಲೆನ ಕೈಲಿ ಹಿಡ್ಕಂಡ್, ಮರ್ಲರಂಗೆ ಮಿಲ್ಟ್ರಿಯವನ ಕುತ್ತಿಗೆಂದ ಒಳ ಒಳಾಂತ ಹರಿವ ರಕ್ತನ ಕೂಸಪ್ಪ ಗೌಡ್ರ ಹಣೆಗೆ ಇಸಿ ಇಂಗ್ಲೀಷ್‌ಲಿ "ಓ, ವೀರಯೋಧ ಕ್ಷಮಿಸು, ನಿನ್ನ ಭವ್ಯತೆಗೆ ಇದಕ್ಕೆಂತ ಹೆಚ್ಚಿನ ಉಡುಗೊರೆ ಕೊಡಲು ನನ್ನಿಂದಾಗಲಿಲ್ಲ" ಎಂತ ಹೇಳಿಕಂಡತ್.

ಬೋಪು ದಿವಾನ ನಡ್ಗಿಕಂಡ್ ಇದರ ನೋಡ್ತಿತ್ತ್‌ಗಡ. ಅಲ್ಲಿಂದ ಓಡಿ ಹೋದ ಒಬ್ಬ ಮಿಲಿಟ್ರಿಯವಂದ ನಮ್ಮ ಸುಳ್ಯ ಸೀಮೆಗೆ ಈ ವಿಷಯ ಗೊತ್ತಾತ್. ಚಿಕ್ಕ ವೀರರಾಜ ಕಾಶಿಲಿ ಸತ್ತಾಕನ ಅವರ ನೆನಪುಗೆ ಮೈಸೂರು ರಾಜ ಕಾಶಿಲಿ ಒಂದು ಸ್ಮಾರಕ ಕಟ್ಟಿಸಿ ಉಟ್ಟು. ಅಲ್ಲಿ ಹೋದವು ವಿಚಾರಿಸಿ ಕೇಳಿರೆ ಆ ಕಟ್ಟಡನ ನೋಡಕ್. ಅಂದ್‌ನ ಕಾಲಲಿ ಯಾರಾದರೂ ಬರ್ದ್ ಇಸಿದರೆ ಸ್ವತಂತ್ರಕ್ಕಾಗಿ ಇಂಗ್ಲೀಸ್‌ರ ಎದ್‌ರ್ ಹೋರಾಡಿ ಸತ್ತ ಒಬ್ಬ ದಂಡ್‌ನ ವೀರ ಶೂರನ ಕಥೆಯಾಗಿ ಶಾಲೆಲಿ ಪಾಠಪುಸ್ತಕಲಿ ಕತೆಯಾತಿತ್ತ್. ಕಾಟಿಂದಾಗಿ ಈ ವಿಷಯ ನಾವ್ಗೆಲ್ಲ ಈಗ ಗೊತ್ತಾತ್.

14

ಅಂಗಳಲಿ ಹುಲಿ

ಒಂದು ಹೆಬ್ಬುಲಿ ಮತ್ತ್ ವರ್ಗಾಳ ಹಂದಿ ಸತ್ತ ಮಾರನೆ ರಾತ್ರಿ ನಾವು ಮಲಗುವ ಹೊತ್ತಿಗೆ ಮೀಯುವ ಕೊಟಗೆಂದ ಹಂದಿ ಅರ್ಚುದು ಕೇಳಿಕೆ ಸುರುಆತ್. ಅದು ನಮ್ಮ ಒಂದೇ ಒಂದು ಹಂದಿನ ಅರಮನೆ ಆಗಿತ್ತ್. ಪ್ರಾಯ ಆಗಿದ್ದರೂ ಅದ್ ಇನ್ನೂ ಸಣ್ಣ ಮರಿನ ಹಾಂಗೆ ಇತ್ತ್. ಅದ್ ಕಾಲು ಇರುವ ಸೂಟ್‌ಕೇಸ್‌ನಾಂಗೆ ಇತ್ತ್. ಪ್ರಾಣಿಗಳ ಮರಿಗಳು ಎತ್ತಿಕಂಡ್ ಕೊಂಡಾಟ ಮಾಡೋಕೂಂತ ಆದೆ. ಹಂದಿ ಮಾಂಸಾಂತ ಹೇಳ್ರೆ ಜೊಲ್ಲು ಸುರಿಸುವವೂ ಹಂದಿ ಮರಿನ ಎತ್ತಿಕಂಬುದು ಇಲ್ಲೆ. ಆ ಸಾಂಕುವ ಹಂದಿನ ನೋಡ್ರೆ ಗೌಡ್ರಿಗೆ ಎಲ್ಲಿಲ್ಲದ ಸಿಟ್ಟ್. ಆದ್ ಒಂದು ಸಂಪಾದನೆನ ಮೂಲಂತ ಸಾಂಕಿಕಂಡ್ ಇದ್ದೊ.

ಅಂದು ನಮ್ಮ ಮನೆಗೆ ಗೂಡಿಂಜ ಬೈಲ್‌ನ ಹುಕ್ರಪ್ಪ ಗೌಡರ ಅಪ್ಪ ಸೋಂಪಣ್ಣ ಬಂದಿದ್ದೊಗಡ. ಕೆಲವು ಗಂಡಸರ್ ಒಂದು ಮಿತಿಯೊಳಗೆ ತೀರ್ಥ ಸೇವನೆ ಮಾಡ್ದು ಉಟ್ಟು. ಹಳ್ಳಿಲಿ ಹೆತ್ತ ಪೆದ್ದೊಳ್ತಿಗಳಿಗೆ ಹಂಞ ಸರಾಯಿ ಕೊಡುವ ಕ್ರಮ ಉಟ್ಟು. ಸೋಂಪಣ್ಣ ಹೇಳ್ದ "ಹಿಂಬತ್ತಿಗೆ

ಹನೀಸ್ ಹಾಕಿರೆ ಲಾಯಕ್ಕಾದೇ"ಂತ. ಅವರ ಬಾಯಿಲಿ ಹಳ್ಳಿನ ಪದಗಳ ಕೇಳಿಕೆ ಭಾರಿ ಖುಶಿ ಆತಿತ್ತ್. ಜನ ತುಂಬಾ ಒಳ್ಳೆಯವು ಆಗಿದ್ದ್, ದೇವರ್ ದೆವ್ವಗಳಲಿ, ತುಂಬಾ ಭಕ್ತಿಯಿದ್ದ ಧರ್ಮಾತ್ಮ. ಹುಷಾರ್‌ನ ಬೇಟೆಗಾರಂತ ಗೌಡ್ರಿಗೆ ಅವರೊಟ್ಟಿಗೆ ತುಂಬ ಪ್ರೀತಿಯಿತ್ತ್ ಗಡ. ಹಂದಿ ಬೊಬ್ಬೆ ಕೇಳಿದ ಹಾಂಗೆ ಗೌಡ್ರು ಬೆಡಿ ತೆಕಂಡ್, ಸೊಂಪಣ್ಣ ಲೈಟ್ ಹಿಡ್ಕಂಡೊ. ಅವು ಹೋಕಂಡಿರ್ಕನ ಹಂದಿಕುರ್ಲೆನ ಬೊಬ್ಬೆ ಹೆಚ್ಚೆಚ್ಚ್ ಆತ್. ಲೈಟ್ ಹಾಕಿ ನೋಡಿರೆ ಹುಲಿ ಕುರ್ಲೆನ ಕುತ್ತಿಗೆಗೆ ಬಾಯಿ ಹಾಕಿದೆ. ಐದು ಬ್ಯಾಟರಿನ ಲೈಟ್‌ನ ಒಳ್ಳೆ ಬೆಳಕ್ ಹಾಕ್‌ಕನ ಅದರ ನೋಡಿ ಹುಲಿ ಅಂಗಳಕ್ಕೆ ಹತ್ತಿತ್. ಹುಲಿರಾಜಂಗೆ ಇರೋಕಾದ ಚುರುಕುತನ ಆಗಲಿ, ಘರಂ ಆಗಲಿ ಆ ಹುಲಿಗೆ ಇದ್ದ ಹಾಂಗೆ ಅವುಗೆ ಅನಿಸಿತ್‌ಲ್ಲೆ. ಅಂತೂ ಮೀವ ಕೊಟಗೆಂದ ಅಂಗಳಕ್ಕೆ ಸೀದಾ ಹತ್ತಿದ ಹುಲಿನ ಬುಡಿಕೆ ಆಗದೂಂತ ಗೌಡ್ರು ಟ್ರಿಗರ್ ಒತ್ತಿದೊ. ಗುಂಡುನ ಪೆಟ್ಟ್ ತಿಂದ ಹುಲಿ ಆರ್ಭಟನೂ ಕೊಟ್ಟಿತ್‌ಲ್ಲೆ, ಮೇಲೆಗೆ ಹಾರ್‍ತೂ ಇಲ್ಲೆ. ಕಂತ್ರಿ ನಾಯಿನ ಹಾಂಗೆ ಕೈ ಕಾಲ್ ಆಡಿಸಿ ಸತ್ತತ್. ಇಂಥ ಹುಲಿನ ಇಷ್ಟರವರೆಗೆ ನೋಡಿತ್‌ಲ್ಲೆಗಡ. ಬಿದ್ದ ಹುಲಿನ ಹಕ್ಕಲೆ ಹೋಗಿ ನೋಡ್ಕನ ಅದ್ ಮುದಿ ಮುದಿ ತೊಂಡಿ ಜಿಗುಡು ಹುಲಿ (ಹೆಣ್ಣು ಹುಲಿ). ಬಾಯಿ ಬುಡ್ಸಿರೆ ಬರೀ ಎರಡೇ ಹಲ್ಲ್‌ಗ ಇದ್ದೊ. ಮುಟ್ಟಿರೆ ಬೀಳುವ ಹಂಗೇ ಇದ್ದೊ. ಮುದಿತನಂದಾಂಗಿ ಓಡಿಕೆ ಆಗದೆ, ಅಂಗಳಲಿ ಹತ್ತಿ ಸಿಕ್ಕಿ ಹಾಕಣ್ತ್. ನಡೆಯಕೂ ಆತಿತ್ತ್‌ಲ್ಲೆ. "ಜೀವಗಳಿಗೆ ಬೇಡ ಬೇಡಾಂತೇಳ್ರೂ ಮುದಿತನ ಬಂದೇ ಬಂದದೆ. ಎಳೆ ಮಕ್ಕಳಿಗೆ ಕಾಯಿಲೆ ಬಂದರೆ ನೋಡಿಕೆ ಸಂಸಾರನೇ ಇದ್ದದೆ. ವಯಸ್ಸ್ ಆದವುಕೆ ಯಾರು ಒಳೊ? ದಿನಾ ಸಾಯುವವುಕ್ಕೆ ಮರ್ರುದು ಯಾರ್?" ಆ ಸರ್ತಿ ಪುತ್ತೂರು ತಾಲೂಕು ಆಫೀಸ್‌ಗೆ ಎರಡ್ ಹುಲಿಚರ್ಮದೊಟ್ಟಿಗೆ ಹೋಕನ 150 ರೂಪಾಯಿನೂ, ಒಂದು ಗೋಡೆ ಗಡಿಯಾರನೂ ಸಿಕ್ಕಿತ್‌ಗಡ. ಎಷ್ಟೇ ಹೇಳಿ ಅಪ್ಪಯ್ಯ ಗೌಡ್ರು **"ನದೈನ್ಯೇತೆ ಜೀವನಂ – ಅನಾಯಾಸೇನ ಮರಣಂ"**– ಇದ್ ಇಷ್ಟೇ ದೇವರೊಟ್ಟಿಗೆ ನಾವ್ ಕೇಳೋಕಾದ್ದ್‌ಂತ ಹೇಳಿದೊ.

ಹುಲಿ ಮೊದುವೆ

15

ಆಗ ಮಂಗಳೂರ್‌ಂದ ರಾಷ್ಟ್ರಬಂಧು ಎಂಬ ಪೇಪರ್ ಅಚ್ಚ್ ಹಾಕುತಿದ್ದೊ. ಆ ಕಾಲಲಿ ಸ್ವತಂತ್ರ ಸಿಕ್ಕಿಕೆ ನಮ್ಮ ದೇಶದವು ಸ್ವತಂತ್ರಕ್ಕಾಗಿ ಬಾವ ಕಷ್ಟ ಎಲ್ಲ ಅಪ್ಪಯ ಗೌಡ್ರಿಗೆ ಅದೇ ಪೇಪರ್‌ಂದ ಗೊತ್ತಾತ್ತಿತ್ತ್‌ಗಡ. ಅನುಭವಂದ ನಾವ್ ಪಡ್‌ಕಂಬ ಜ್ಞಾನವೇ ಸಂಪತ್ತ್. ಅದ್ಕೆ ಓದಿದ ಜ್ಞಾನಕ್ಕೆ ಸಂಪತ್ತ್ ಸೇರಿರೆ ಚಿನ್ನಕ್ಕೆ ಗಂಧದ ಪರಿಮಳ ಸೇರಿಕಂಡಾಂಗೆ ಆದೆ.

ಒಂದು ದಿನ ಪುತ್ತೂರ್‌ಲಿ ತಾಲೂಕು ಆಫೀಸ್‌ಲಿ ಒಬ್ಬ ಹೈದ ಸಿಕ್ಕಿತ್. ಗೌಡ್ರೊಟ್ಟಿಗೆ, 'ನಿಮ್ಮ ಬಗ್ಗೆ ಕೇಳಿಯೋಳೆ. ನಿವುಗೆ ಪುರುಸೊತ್ತು ಇದ್ದರೆ ವಿವರ ಹೇಳಿಂತ', ಹೇಳ್ತ್. ಮತ್ತೆ ಕಾಮತರ ಹೋಟೆಲಿಲಿ ಚಾಯ ಕುಡ್ಕಂಡ್ ಮಾತಾಡಿಕೆ ಸುರು ಮಾಡ್ದೊ. ಅಂವ ಏನೇನೋ ಬರ್ಕಂಡತ್. ಅಖೇರಿಲಿ ಅಂವ ಹೇಳ್ತ್. ನಾ ರಾಷ್ಟ್ರಬಂಧು ಪೇಪರಿಗೆ ಸುದ್ದಿ ಕಳ್ಸುವವ. ನಿಮ್ಮ ಬಗ್ಗೆ ಪೇಪರ್‌ಲಿ ಬರ್ದನೆ. ಇನ್ನು ಮುಂದೆ ಹುಲಿ ಬೇಟೆ ಆಡ್ಕನ ಪಟ ತೆಗ್ಸಿಕಣಿ, ಆಧಾರ ಇಲ್ಲದೆ ಜನ ನಂಬುದುಲ್ಲೆಂತ ಹೇಳಿತ್ತ್. ಒಂದು ತಿಂಗ ಕಳ್‌ದ್ ರಾಷ್ಟ್ರಬಂಧುಲಿ ಗೌಡ್ರ ವಿಷಯಲಿ ಬರವಣಿಗೆ ಒಂದು ಬಾತ್. ಆಗ ಗೌಡ್ರಿಗೆ ತಲೆಗೆ ಗಟ್ಟಿ ಆತ್. ಇಷ್ಟ್ ಮೃಗಗಳ ಕೊಂದದ್ಕೆ ಜವಾಬ್ದಾರಿನೇ ಕಾರಣ. ಎಷ್ಟೊಂದು ಜನಕ್ಕೆ ದುಷ್ಟ ಪ್ರಾಣಿಗಳ ಕೊಂದ್ ಉಪಕಾರ

ಮಾಡ್ಯೊಳೇಂತ ಅವುಕೆ ಅನ್ಸಿತ್‌ಗಡ. ಬರವಣಿಗೆ ಓದಿದ ಆಲೆಟ್ಟಿನ ರಾಮಣ್ಣ ಶಗ್ರಿತ್ತಾಯರಿಗೆ, ಈಶ್ವರ್ ಭಟ್ ಪಟೇಲರಿಗೆ, ರಾಮಚಂದ್ರ ಕಲ್ಲೂರಾಯರಿಗೆ (ವೆಂಕಟ್ರಾಜ ಮಾಸ್ತ್ರ ಅಪ್ಪ) ಇವುಕ್ಕೆಲ್ಲಾ ಭಾರೀ ಖುಷಿ ಆತ್. ಬೇಟೆನ ದೋಸ್ತುಗಳಿಗೆ ಗೌಡ್ರೇ ಓದಿ ಹೇಳ್ದೊಗಡ. ಆಗ ಚೋಯಂಬುನವು ಮುಂದೆನ ಹುಲಿ ಬೇಟೆಲಿ ಎಷ್ಟೇ ಕರ್ಚಾದರೂ ಆದು ಪಟ ತೆಗ್ಸೋಕೇಂತೇಳಿ ಎಂದ್ ಒತ್ತಾಯ ಮಾಡಿ ಹೇಳ್ತ್‌ಗಡ.

ಒಂದೆರಡ್ ದಿನ ಕಳಿಯಕನ ಕಲ್ಲೂರಾಯರ ಕೆಲಸದ ಆಳ್ ಬಾತ್ "ನೀವು ಬೆಡಿ ತಕಂಡೇ ಬರೊಂಕೂತ ಧನಿಗ ಹೇಳ್ಯೊಳೊ. ಅವರ ಒಂದು ದನನ ಹುಲಿ ಹಿಡ್ದುಟ್ಟೂಂತ" ಸುದ್ದಿ ಒಪ್ಪಿಸಿತ್. ಬೇಟೆಗೇಂತೇಳಿ ಅವರ ಹಕ್ಕಲೆ ಒಂದು ಅರೆ ತೋಳ್‌ನ ಶರ್ಟ್, ಚೆಡ್ಡಿ, ಶರ್ಟ್‌ನ ಮತ್ತ್ ಚಡ್ಡಿನ ಜೋಬುಲಿ ತೋಟೆಗಳ ಹಾಕಂಡಿದ್ದೊ. ಬೇಟೆಗೆ ಬೇಕಾದ ಸಾಮಾನು ಹಾಕಿಕಣಿಕೆ ಅದಕ್ಕೊಂದು ಚೀಲ ಹೊಲ್ಸಿದೊ. ಟೊಪ್ಪಿ ತಲೆಗಿಸಿ ನಡ್ದೊ. ಒಟ್ಟಿಗೆ ಹೆಗ್‌ಲ್‌ಲಿ ಬೆಡಿ.

ರಾಮಚಂದ್ರ ಕಲ್ಲೂರಾಯರ ಮನೆ ಎದ್‌ರ್‌ನ ಗುಡ್ಡೆಲಿ, ಮೇಯಕೇಂತ ಬಂದಿದ್ದ ದನವೊಂದ್ ಸತ್ತ್ ಬಿದ್ದದರ ನೋಡಿದೊ. ಸೂಕ್ಷ್ಮಲಿ ನೋಡಿಕನ ಬೇರೆ ಬೇರೆ ರೀತಿನ ಎರಡ್ ಹುಲಿಗಳ ಹೆಜ್ಜೆಗ ಕಾಣ್ಸಿದೊ. ಎರಡು ಪುಡೆಂದ ಬಿದ್ದು ಕೊಂದ್ ಕುತ್ತಿಗೆ ಹಕ್ಕಲೆಂದ ಹಂಞ ಮಾಸ ತಿಂದ್ ಹೋಗಿದ್ದೊ. ಎರಡ್ ಹುಲಿಗ ಒಳೋಂತಾತ್. ಹುಲಿ ಕಲ್ಲೂರಾಯರ ದನದ ಮಾಸ ತಿಂಬಕೆ ಬಂದೇ ಬಂದವೆ. ಒಬ್ಬರೇ ಎರಡ್ ಹುಲಿಗಳ್‌ನ್ ನೆಲಂದ ಎದುರಿಸುದು ಭಾರಿ ಅಪಾಯದ ಸಂಗತಿ ಆದು. ಮರಲಿ ಕುದ್ದೇ ಹೊಡೆಯಕಷ್ಟೇ. ಹಿಂಗೆ ಅಂದಾಜಿ ಮಾಡಿಕಂಡ್ ಸತ್ತ್ ಬಿದ್ದಿದ್ದ ದನದ ಜೀವ ಸರಿಯಾಗಿ ಕಾಂಬ ಹಾಂಗೆ, ಮರ ಒಂದರ ಮೇಲೆ ಹತ್ತಿ ಸುತ್ತದ ಆ ಜಾಗೆನೆಲ್ಲ ನೊಡ್ದೊಗಡ. ಬಯ್ಲಿಲಿ ಜನ ಏಣೆಲ್ ಕೊಯಿಲ್‌ನ ಕೆಲ್ಸ ಮಾಡ್‌ತಿದ್ದೊ. ಅಷ್ಟೊತ್ತಿಗೆ ಕಂತ್ರಿ ನಾಯಿ ಒಂದು ಬಗಳುದು ಕೇಳಿಕಾಕನ, ಇನ್ನೊಂದು ಕುಪ್ಳು ಹಕ್ಕಿ ಹಕ್ಕಲೆಂದ ಕುಟುರ್ ಹಾಕ್‌ಕನ, ದೂರಂದ ಕಾಡು ಕುರಿ, ಒಂದ್ ಕೂಗಿಕೆ ಸುರು ಮಾಡ್ತ್. ಅವುಕೆ ಹುಲಿನೋ ಚಿಟ್ಟೆ ಹುಲಿನೋ ಕಂಡಿರೊಕು. ಗುಡ್ಡೆನ ಎಡ್‌ದ್ ಭಾಗಂದ ಗಿಡ್ಡೆ ಹಂದಾಡ್ದು ಕಂಡತ್. ಇವು ಗುರಿ ಹಿಡ್ದ್ ಚುರುಕಾಗಿ ಅತ್ತಳೇ ನೋಡಿಕೆ ಸುರುಮಾಡ್ದೊ. ದೊಡ್ಡ ಹೆಬ್ಬುಲಿ ಬಂದ್ ಗಿಡ್ಡೆಂದ ರಪ್ಪನೆ ಹಾರಿ ರಾಜ ಠೀವಿಲಿ ಆಗಾಗ ಮೂಂಕುನ ಹೊಳ್ಳೆ ಅರಳಿಸಿಕಂಡ್ ಹಕ್ಕಲೆ ಎಲ್ಲಿನೂ ಅಪಾಯ ಇಲ್ಲೆಂತ ನಿಘಂಟ್ ಮಾಡಿಕಂಡ್ ಮುಂದೆ ಬಾಕೆ ಸುರು ಮಾಡ್ತ್. ಗಾಳಿ ವಿರುದ್ಧ ದಿಕ್ಕ್‌ಲಿ ಬೀಸಿಕಂಡಿದ್ದ್ ಇವರ ವಾಸನೆ ಅದಿಕ್ಕೆ ಸಿಕ್ಕಿತ್ತ್‌ಲ್ಲೆ. ಅದರ ಹಿಂದೆಂದ ಹೆಣ್ಣು ಹುಲಿ ಡ್ಯಾನ್ಸ್ ಮಾಡುವ ಹಾಂಗೆ ಸಮಧಾನಲಿ ಬರ್‌ತಿತ್. ಗಂಡು ಹುಲಿ ಹೆಣ್ಣ್ ಹುಲಿನೊಟ್ಟಿಗೆ ಸೇರಿಕಂಡ್, ಆ ದನನ ಕೊಂದೊಳೊ. ಈಗ ಲ್ಯಾಕ್‌ಲಿ ತಿಂಬಕೆ ಒಟ್ಟಿಗೆ ಬಂದೊಳೋ. ಗಂಡು ಹುಲಿಗೆ ಗುರಿ ಇಸಿ ಟ್ರಿಗರ್ ಒತ್ತಿದೊ. ಅಲ್ಲಿ ಅಪಾಯ ಬಾಕಿಲ್ಲೇಂತ ನೆನ್ಸಿದ ಹುಲಿ ಆಳೆತ್ತರಕ್ಕೆ ಹಾರಿ ಬಾರಿ ಗರ್ಜನೆನೊಟ್ಟಿಗೆ, ನೆಲಕ್ಕೆ

ಬಿದ್ದತ್. ಮರಂದ ಇಳ್ದರೆ ಹೆಣ್ಣ್ ಹುಲಿ ಇವರ ಮೇಲೆ ಹಾರಿದೇಂತ ಮರಲಿ ಇದ್ದೇ ಕೂಕುಳು ಹಾಕಿದೊ.

ತೋಟಲಿದ್ದ ಕೆಲಸದವುಕೆ ಕಲ್ಲೂರಾಯರ ಮನೆಯವುಕೆ ಕೇಳಿ ಕಲ್ಲೂರಾಯರ್, ಅವರ ಬೆಡಿ ಹಿಡ್ಕಂಡೇ ಬಂದೊ. ಕೆಲ್ಸದವ್ರೂ ಒಟ್ಟಿಗೆ ಬಂದೊ. ಅಬ್ಬ! ಏನು ಹುಲಿ ಅದ್! ತಲೆಂದ ಬಾಲದ ಕೊಡಿಗೆ 18 ಅಡಿ ಇತ್ತ್. ಕಲ್ಲೂರಾಯರು ತೋಟದ ಕೆಲ್ಸದವ ಒಬ್ಬಂಗೆ ಹೇಳಿ ಪೊಟೋ ತೆಗೆಯುವ ಒಬ್ಬನ ಕರ್ಕಂಡ್ ಬಾಕೆ ಹೇಳಿದೊ

ಚೋಯಂಬು ಮತ್ತ್ ರಾಮಣ್ಣ ನಾಯ್ಕಂಗೆ, ಬಾಕಿ ಇದ್ದವುಕೆ ಭಾರಿ ಯೋಚನೆ ಬಾತ್. ಹೇಂಗೂ ಪೊಟೋ ತೆಗೆವಂವ ಇಲ್ಲಿಗೆ ಮುಟ್ಟಿಕೆ ಸುಮಾರ್ ಹೊತ್ತ್ ಆದು. ಆಲೆಟ್ಟಿಗೆ ಮೆರವಣಿಗೆ ಪೋಯಿಂತ ಎಲ್ಲವೂ ಹೇಳಿಕಂಡೊ. ದೊಡ್ಡ ಅಡ್ಡಬಲಿಪ ಸತ್ತದರ ನೋಡಿಕೆ ಜನ ಇತ್ತಕ್ಕೆ ಬಾಕೆ ಸುರು ಮಾಡ್ದೊ. ನೆಡ್ಚಿಲು ಪಟೇಲರಲ್ಲಿಗೆ ಸಂಗತಿ ಹೇಳಿಕೆ ಮಾಡ್ದರ್ ನಾಯ್ಕಣ್ಣ ಓಡಿತ್. ಚೋಯಂಬು ಎರಡು ಉದ್ದದ ಬಡಿಗೆ ಚಟ್ಟದ ಹಾಂಗೆ ತಯಾರ್ ಮಾಡ್ತ್. ಹುಲಿನ ಕುದ್ದ ರೀತಿಲಿ ಚಟ್ಟದ ಮೇಲೆ ಬಿದ್ದ್ ಹೋಗದ ಹಾಂಗೇ ಭಾರೀ ಗಟ್ಟಿಲಿ ಕಟ್ಟಿದೊ. ದೂರಂದ ನೋಡಿರೆ ಜೀವ ಇದ್ದ ಹುಲಿನ ಹಾಂಗೆ ಕಾಂಬತ್ತಿತ್ತ್. ಹುಲಿ ಮೆರವಣಿಗೆ ಸುದ್ದಿ ಬಿಸ್ಮತ್ ಮಾಡುವ ವೀರ ಅದ್ರಾಮ ಗರ್ನಲ್‌ಗಳ ತೆಕಂಡ್ ಬಂದೊಗಡ. ಪೆರಾಜೆ ಕಡೆನ ಪೇರೆ ಅಬ್ದುಲ್ಲ ಸಾಹುಕಾರರ್, ಅಲ್ಲಿಂದ ಓಲಗವರ ಕರ್ಕಂಡ್ ಬಂದೊಗಡ. ಕಲ್ಲೂರಾಯರ ಹೂ ತೋಟಂದ ಚೆಂಡು, ರಥ ಹೂ, ದಾಸವಾಳ ಮಾಲೆ ಹಾಕಿಕೆ ಬಾಕನ "ಅಪ್ಪಯ್ಯಣ್ಣನ ಈಗಲೇ ಭೂತ ಮಾಡುದು ಬೇಡ"ಂತ ಚೋಯಂಬು ಅಣ್ಣ ಹೇಳ್ದೊಗಡ. ಅದ್ರಾಮ ಗರ್ನಾಲ್ ಹೊಡ್ಕಂಡ್ ಆ ಮೇಲೆ ಪೆರಾಜೆನ ವಾಲಗದವು, ಅಂತೂ ಗೌಡ್ರಿಗೆ ಒಂದು ಚೆಂಡು ಹೂನ ಮಾಲೆ ಹಾಕಿದ್ದೊ. ಮೆರವಣಿಗೆ ಹೊರ್ಟತ್ ಬಡ್ಡಡ್ಕಂದ– ಎರಡೂವರೆ ಮೈಲು ದೂರದ ಆಲೆಟ್ಟಿಗೆ.

ಆ ಮಣಗಟ್ಟಲೆ ಭಾರದ ಹುಲಿನ ಹೊರುವವು ಆಗಾಗ ಹೆಗಲ್ ಬದಲ್ ಮಾಡಿಕಣ್ತಿದ್ದೊ. ದಾರಿ ಉದ್ದಕ್ಕೂ ಜನ ಅಲ್ಲಲ್ಲಿ ಪಾನಕ, ಬಾಳೆಹಣ್ಣು ಅವುಲಕ್ಕಿ, ಬೆಂಡನೀರ್ ಕುಡಿಯಕೆ ಕೊಟ್ಟು ಸಂತೋಷ ಪಡೆಯತಿದ್ದೊ. ಆಲೆಟ್ಟಿ ಮುಟ್ಟಕನ ಮಧ್ಯಾಹ್ನ ಆಗಿತ್ತ್. ಅಲ್ಲಿ ಎಲ್ಲವ್ಕೂ ಆಲೆಟ್ಟಿ ರಾಮಣ್ಣ ಶಗ್ರಿತ್ತಾಯರ ಲೆಕ್ಕಲಿ ಬಾಳೆಹಣ್ಣು ಅವುಲಕ್ಕಿ–ಶರ್ಬತ್ತ್ ಸಿಕ್ಕಿತ್. ನೆಡ್ಚಿಲ್ ಈಶ್ವರ ಭಟ್ ಪಟೇಲರ್ ಸಣ್ಣ ಬಾಷಣ ಮಾಡ್ದೋ. ಹುಲಿ ಹೊಡ್ದವುಕೆ ಮದುವೆ ಮಾಡುವ ಕ್ರಮ ಉಟ್ಟುಗಡ. ನಮ್ಮ ಅಪ್ಪಯ್ಯ ನಲ್ವತ್ತೆರಡ್ ಮಿನಿ ಅಲ್ಲ, ಲೆಕ್ಕ ಹಾಕಿರೆ ನೂರು ದಾಟುದು, ಅಷ್ಟ್ ಹುಲಿಗಳ ಕೊಂದ್ ನಮ್ಮ ಜಾನುವಾರ್‌ಗಳ ರಕ್ಷಿಸುಟ್ಟು. ಅವಂಗೆ ಈ ಜರತಾರಿ ಶಾಲ್ ಮತ್ತ್ ಇಪ್ಪತ್ತೈದ್ ರುಪ್ಯಾ ಎಲ್ಲವರ ಪರ ಆಗಿ ನಾನೇ ಕೊಟ್ಟನೆ. ಇದರ ಅವ ಹುಲಿ ಮದುವೆಂತೇ ಮನಸ್ಸಿಗೆ ತೆಕಂಡ್ ನಾವುಗೆಲ್ಲ ಸಂತೋಷ ಕೊಡೊಕು ಎಂತ ಹೇಳಿ ಅವು ಶಾಲು ಹೊದಿಸಿ ಅಪ್ಪಯ್ಯ ಗೌಡ್ರ ಕೈಲಿ ದುಡ್ಡು ಇಸಿದೊಗಡ. ಗೌಡ್ರಿಗೆ ಎದೆ ತುಂಬಿ ಬಂದ್ ಅವರ ಕಾಲಿಗೆ ಅಡ್ಡ ಬಿದ್ದೊಗಡ. ಹುಟ್ಸ್‌ನ ಕಾರಣನ

ಎದುರ್ ತಂದ್ ಬಾಕಿ ಇದ್ದವರ ತಗ್ಗ್‌ಸ್‌ತಿದ್ದ ಜಾತಿವಾದಿಗ ಇದ್ದರೂ, ನೆಡ್ಚಿಲ್ ಪಟೇಲರು, ಆಲೆಟ್ಟಿ ಶಗ್ರಿತ್ತಾಯರ್, ಕಲ್ಲೂರಾಯರ್ ಇಂತ ಒಳ್ಳೆ ಗುಣ ಇಸಿಕಂಡೊವು ಆಗಿದ್ದೊ. ಹಿಂಬತ್ತಾಕನ ಪಟೋ ತೆಗೆವಂವ ಆಲೆಟ್ಟಿಗೆ ಬಾತ್. ಸತ್ತ ಹುಲಿನ ಮೇಲೆ ಒಂದು ಕಾಲಿಸಿ, ಸಡನ್‌ಡೆತ್ ಬೆಡಿನ ಕೈಲಿ ಹಿಡ್ಕಂಡ್ ಪಟೋ ಹೊಡ್ಸಿಕಂಡೊ. ಅಲ್ಲಿ ಇದ್ದವೆಲ್ಲಾ ಹುಲಿನ ಹಕ್ಕಲೆ ನಿತ್ತ್ ಪಟೋ ತೆಗ್ಸಿಕಂಡೊ. ಮರ್‌ದಿನ ಬೊಳ್ಪುಗೆ ಪಟೋ ತೆಗ್ದಂವ ಹೋಕನ ದುಡ್ಡುಲಿ ಅವನ ಜೋಬು ಎಲ್ಲ ಬರ್ತಿಯಾಗಿತ್ತ್. ಸುಳ್ಯಲಿ ಆಗ ಪಟ ತೆಗಿವವು ಇತ್ತ್‌ಲ್ಲೆ. ಹಾಂಗೆ ಎಲ್ಲವೂ ಪಟ ತೆಗ್ಸಿಕೊಂಡೊ. ಈ ಪಟ ಡಾ. ಪದ್ಮನಾಭರ ಅಪ್ಪ ಡಾ। ವೆಂಕಪ್ಪಯ್ಯರ ಕ್ಲಿನಿಕ್‌ಲಿ ಮತ್ತ್ ಕಟ್ಟೆಕಾರ್‌ರವರ ಅಮ್ಮನ ಅಪ್ಪ ಖಾದ್ರಿ ಸಾಹುಕಾರರ ಭಂಡಸಾಲೆಲಿ ಸುಮಾರು ವರ್ಷ ಇತ್ತ್.

16

ಬೈನಾಟಿ ದೈವದ ಒಪ್ಪಿಗೆ

ಬಡ್ಡಡ್ಕಕ್ಕೆ ಹಕ್ಕಲೆ ಗುಂಡ್ಯಂತ ಹೇಳುವ ಜಾಗೆ ಉಟ್ಟು. ಅಲ್ಲಿ ಒಂದು 'ವಯನಾಟ್ ಕುಲವನ್', ಎಂದ್ ಹೇಳುವ ಬೈನಾಟಿನ ಸ್ಥಾನ ಉಟ್ಟು. ಪರಿಶಿಣ ಕಡವು ಮುತ್ತಪ್ಪದೇವರ ಅಂಶನೇಂತ ಭಕ್ತರ್ ನಂಬಿಕಂಡವೆ. ಶಬರ ಶಂಕರ ವಿಲಾಸದ ಪುಸ್ತಕಲಿದ್ದ ಕತೆ ನೆನ್ಪಾದೆ. ವಯನಾಟ್ ಕುಲವನ್ ಅರ್ಜುನನ ಶಕ್ತಿ ಪರೀಕ್ಷೆ ಮಾಡಿಕೆ ಶಬರನ ವೇಷ ಹಾಕಿ ಮೂಕಾಸುರ ಎಂಬ ಹಂದಿ ರೂಪದ ರಾಕ್ಷಸನ ಕೊಲ್ಲಿಕೆ, ಹೊರಟ ಪರಮೇಶ್ವರ ದೇವರ್. ಆದ್ದರ್‌ಂದ ಬೈನಾಟಿ ಭೂತದ ಕೋಲ ಆಕನ, ಕೂಡು ಬೇಟೆ ಆಡೊಕೂಂತ ಲಾಗಾಯ್ತಿಂದ ಬಂದ ಕಟ್ಟಳೆ. (ಕ್ರಮ)

ಬೈನಾಟಿ ದೈವ ಕಟ್ಟುವವು ಬಣ್ಣರ. ಬೈನಾಟಿ ಭೂತದೊಟ್ಟಿಗೆ ಮಲೆಯಾಳಿ ಬೆಳ್ಚಪ್ಪಾಡರ್ ಬಂದು ಸಹಾಯ ಮಾಡುವೆ. ಭೂತದ ಒಟ್ಟಿಗೆ ಒಬ್ಬ ಮಲೆಯಾಳಿ ಪಾತ್ರಿ ಇರೊಕು. ಭೂತದ ಒಟ್ಟಿಗೆ ಅವಂಗೆ ದರ್ಶನ ಬಂದದೆ. ಮತ್ತ್ ಬೆಳ್ಚಪಾಡರ್‌ಂತ ಹೇಳುವವಕ್ಕೆ ಅಂದ್ ದರ್ಶನನೂ ಬಂದದೆ. ಅವರಲ್ಲಿ ಹಿರಿಯವುಕ್ಕೆ ಅನುಭವ ಹೆಚ್ಚ್ ಇದ್ದವು ಅಚ್ಚಮ್ಮಾರ್‌ಂತ ಹೇಳ್ಸಿಕಂಡವೆ. ಭೂತ ಮತ್ತ್ ಪಾತ್ರಿ ಪ್ರವಾಳ ಭಾಷೆಲಿ ನುಡಿಗಟ್ಟ್ ಹೇಳುವೆ. ದೆವ್ವ್ ಕಣ್ಣ್ ತಿರ್ಗಿಸಿ ಎದೆಗೆ ಭೂತದ

ಸುರಿಗೆಂದ ಹೊಡ್ಕಂಬದು. ಅಖೇರಿಗೆ ಅಲ್ಲಿ ಇದ್ದ ಭಕ್ತರ್‌ಗಳಿಗೆ ಅರಿಶಿನ ಪ್ರಸಾದಲಿ ಆಶೀರ್ವಾದ ಮಾಡಿ ಸುರಿಗೆನ ತಲೆ ಮೇಲೆ ಇಸುದು. ಎಲ್ಲವ್ಕೂ ಇದೊಂದು ಆಶೀರ್ವಾದ ಸಿಕ್ಕಿರೆ ಭಾರಿ ಕುಶಿಯಾದು.

ಬೈನಾಟಿ ಒಂದು ಶಕ್ತಿವಂತ ಶಿವಾಂಶದ ದೆವ್ವ. ಆ ಸಮಯಲಿ ಆಲೆಟ್ಟಿಲಿ ಅಂಗಡಿ ಇಸಿಕಂಡಿದ್ದ ಎಲ್ಲಾ ಮುಸ್ಲಿಂ ಬಾಂಧವು ಗುಡಿಗೆ ಬಂದ್ ಕಾಣಿಕೆ ಹಾಕಿ ಪ್ರಸಾದ ತೆಕಂಡ್ ಮತ ಸಾಮರಸ್ಯಲಿ ಇದ್ದೊ. ಗುಡ್ಡೆಗೆ ಹೋದ ದನಕರುಗ ವಾಪಾಸ್ ಹಿಂಬತ್ತಾಕನ ಬಾರದಿದ್ದರೆ, ಅವು ಹುಲಿಗಳ ಬಾಯಿಗೆ ಬಿದ್ದಿರೊಕು ಎಂಬ ದಿನಂಗ ಅದ್. ಹಂಞ ಜನ ಕೆಟ್ಟ ದುಷ್ಟ ಬುದ್ಧಿಯವು ದನಕರುಗಳ ಕಾಸರಗೋಡಿಗೆ ಸಾಗ್ಸಿ ಅದರ ಕೊಲ್ಲುವಕ್ಕೆ ಮಾರಾಟನೂ ಮಾಡ್ತಿದ್ದೊ. ಕಾಣೆಯಾದ ಜಾನುವಾರ್‌ಗ ವಾಪಾಸ್ ಬಾಕೆ ಬೈನಾಟಿಗೆ ಹರ್ಕೆ ಹೊತ್ತರೆ, ಒಂದು ವಾರ ಕಳ್ದ್ ಅವು ಊರ್‌ಲಿ ಕಾಂಬತಿದ್ದೊ. ಇಲ್ಲಿ ದೆವ್ವಕ್ಕೆ ಹರ್ಕೆ ಹೊತ್ತದ್ ಎಲ್ಲವ್ಕೆ ಪ್ರಚಾರ ಆದರೆ ಕಾಣೆ ಆದ ಕೋಳಿ ಹಂದಿಗಳಲ್ಲಿ ಕೆಲವು ಹೀಂಗೆ ವಾಪಾಸಾದ್ದೂ ಇತ್ತ್. ಅಂತಹ ಶಕ್ತಿ ಇದ್ದ ಬೈನಾಟಿ ಕೋಲದಂದ್ ಊರಜನ ಎಲ್ಲಾ ಒಟ್ಟಾಗಿ ಒಟ್ಟಿಗೆ ಇದ್ದ್ ಅವರ ಕಷ್ಟಗಳ ಹೆಳಿಕಂಡ್ ಪರಿಹಾರ ಕಂಡ್‌ಕಂಬತಿದ್ದೊ. ಬೈನಾಟಿ ಭೂತದ ಗುಡಿಂದ ಸುಮಾರ್ ಒಂದ್ ಮೈಲು ದೂರಲಿ ನೆಡ್ಚಿಲ್ ಪಟೇಲರ ಮನೆ ಇತ್ತ್. ಪಟೇಲ್ರ್ ಊರ್‌ಗೆ ಮುಖ್ಯಪಟ್ಟವು. ಆದರ್‌ಂದ ಅವುಕೆ ಹೆಚ್ಚಿಗೆ ಮರ್ಯಾದೆ ಇತ್ತ್. ಅಪ್ಪಯ್ಯ ಗೌಡರ ಮಗನಂಗೇಂತ ನೆನ್ಸುವ ಪಟೇಲರ್, ಒಳ್ಳೆ ಮನಸ್ಸ್ ಇದ್ದವು. ಅವರ ಮನೆಗೆ ಹುಲಿ ಕೊಂದರೆ ಶಿಫಾರಸ್ ಕಾಗದಕ್ಕೆ ಹೋಕೆ ಆಕನ ಒಗ್ಗರಣೆ ಹಾಕಿದ ಅವಲಕ್ಕಿ ಉಪ್ಪುಕರಿ, ನೀರೇ ಹಾಕದ ಚಾಯ ಕೊಟ್ಟು ಅಪ್ಪಯ್ಯಗೌಡರ ಉಪಚಾರ ಮಾಡ್ತಿದ್ದೊಗಡ. "ನಿನ್ನಿಂದಾಗಿ ಊರ್‌ನ ಬೆಳೆ ಜಾನುವಾರ್ ಉಳ್ದುಟ್ಟು. ನಿಂಗೊಂದು "ಹುಲಿ ಮದುವೆ ಮಾಡಿಯೇ ನಾ ಕಣ್ಣು ಮುಚ್ಚುದೂಂತ" ಹೇಳ್ತಿದ್ದೊಗಡ. ಪಟೇಲ್‌ರ ಮನೆಲಿ ಯಾರಾದರೂ ಸತ್ತರೆ ಸತ್ತವರ ನೆನ್ಪುಲಿ ಗಂಡು ಕರು ಒಂದರ ಬಸವ ಆಗಿ ಬುಡುದು ಹಿಂದೆಂದೇ ನಡ್ದ ಕಟ್ಟ್ ಪಾಡ್‌ಗಡ. ಅದರ ಕಟ್ಟಿ ಹಾಕಿಕೆ ಇಲ್ಲೆ. ಮಡೆ, ಎಂಜಿಲ್ ಅಕ್ಕೆ ತಿಂಬಕೆ ಕೊಡುವಾಂಗೆ ಇಲ್ಲೆ. ಅದ್ ಏನ್ ತೊಂದರೆ ಮಾಡಿರೂ ಯಾರೂ ದೂರ್ ಹೇಳುವಾಂಗೆ ಇತ್ತಲ್ಲೆ. ಬೈನಾಟಿನ ಹೆಸರ್‌ಲಿ ಆ ಹೋರಿನ ಬುಡ್ದು.

ಆ ಸರ್ತಿನ ಬೈನಾಟಿ ಕೋಲದ ಮುಂದೆನ ದಿನ ಬಸವ ಕಾಣೆ ಆಗಿತ್ತ್. ಆ ಬಸವ ತುಂಬ ದಪ್ಪ ಇದ್ದು ಒಳ್ಳೆ ಬಲವಾದ ಎತ್ತಾಗಿತ್ತ್‌ಗಡ. ಉರುಂಟುನ ಎರಡ್ ಕೊಂಬುಗ, ಮಿರಿ ಮಿರಿ ಮಿಂಚ್‌ತಿದ್ದ ಕಪ್ಪು ಕೆಂಪು ಮಿಶ್ರ ಆದ ಅದರ ಜೀವ, ತಲೆ ಎತ್ತಿ ನಡೆಯಕನ ಅದರ ದಸ್ತ್, ಕಣ್ಣ್‌ನ ನೋಡಿರೇನೆ ಬಸವಾಂತ ಗೊತ್ತಾತಿತ್ತ್‌ಗಡ. ಆಲೆಟ್ಟಿ ಗ್ರಾಮದವರ ಮನೆ ಮಾತಾಗಿತ್ತ್‌ಗಡ ಬಸವ.

ಗುಡಿನ ಮುಂದೆ ಜಾತಿ ಮತ ಲಿಂಗ ಭೇದ ಬುಟ್ಟು ಊರಿಗೆ ಊರೇ ಸೇರಿತ್ತ್, ಆಗ ಭೂತದ ಪಾತ್ರಿ ಮೇಲೆ ವಯನಾಟ್ ಕುಲವನ್ ದರ್ಶನ ಬಾತ್. ಅಂವ ಅತ್ತಂದ

ಇತ್ತ, ಇತ್ತಂದ ಅತ್ತ, ಓಲಾಡಿಕಂಡ್, ನಾಲ್ಕೈದು ಸರ್ತಿ ಕತ್ತಿಂದ ಎದೆಗೆ ಗುದ್ದಿಕಂಡ್ ಅಕನ ಪಟೇಲ್ರ್, ಊರ್‌ನ ಹಿರಿಯವು ಕೈ ಮುಗ್ದ್ ಅಕ್ಕಿ ಹಾಕ್‌ಕನ ಅಂವ ಮಾಮೂಲ್ ಸ್ಥಿತಿಗೆ ಬಾತ್. ಮತ್ತೆ ಯಾರಿಗೆ ಏನ್ ಸಂಕಟ ಉಟ್ಟು? ನಂಬಿದವುಕೆ ಇಂಬು ಕೊಟ್ಟನೇಂತ ಗಟ್ಟಿ ಆಗಿ ಹೇಳ್ತ್. ನೆಡ್ಚಿಲ್ ಪಟೇಲ್ರ್ ಕೈ ಮುಗ್ದ್ "ನೀ ಎಲ್ಲಾ ತಿಳ್ದಂವ. ನಿಂಗೆ ಗೊತ್ತಿಲ್ಲದ್ದ್ ಏನುಟ್ಟು? ನಿಂಗೆ ಬುಟ್ಟ ಬಸವ ಕಾಣೆ ಆಗುಟ್ಟು. ಅದು ನಿನ್ನದೇ. ಅದರ ಉಳಿಸಿಕಂಬ ಭಾರನೂ ನಿನ್ನದೇ" ಎಂದ್ ಹೇಳ್ತ್. ಪಾತ್ರಿ ಕಣ್ಣು ಕೆಕ್ಕರಿಸಿ ನೋಡಿ ಹೂಂಕರಿಸಿತ್. "ಕಷ್ಟ ಬಂದರೆ ಮಾತ್ರ ಬೈನಾಟಿನ ನೆನ್ಪು ಮಾಡಿಕಂಡರೆ ಎಲ್ಲಾ ಮುಗ್ದ್ ಹೋದ ಮೇಲೆ ಉಳ್ಸಿ ಎಂತ ಹೇಳ್ರೆ ಈ ಬೈನಾಟಿ ಏನು ಮಾಡೊಕು? ನೆನಪಿಸಿ ಕಣಿ ಅಳ್ದ್ ಹೋದ್ದಕ್ಕೆ ಎಂದುನೂ ಉಳಿಗಾಲ ಇಲ್ಲೆ." ಅವನ ಒಗಟನ ಮಾತ್‌ಗ ನಾವ್ಗೆ ಯಾರಿಗೂ ಅರ್ಥ ಆತ್‌ಲ್ಲೆ. ಪಟೇಲ್ರ್ ಚಪ್ಪೆ ಮೋರೆ ಹಾಕಿ ಹಿಂದೆ ಹೋದೊ.

ಕೂಡು ಬೇಟೆನ ಮುಖ್ಯಸ್ಥ ಆದ ಅಪ್ಪಯ್ಯ ಗೌಡ್ರು, "ನಿನ್ನ ಕಟ್ಟಳೆನ ಪ್ರಕಾರ ನಾವು ಈಗ ಕೂಡು ಬೇಟೆಗೆ ಹೊರ್ಟೊಳೊ. ದೈವದ ಹೆಸರ್ ಶಾಶ್ವತ ಆಗಿ ಉಳಿಯೊಕು. ನಾವ್ಗೂ ಸಮಾಧಾನ ಆಕು. ಬೇಟೆ ಆಡುವವಕ್ಕೂ, ದೈವಕ್ಕೂ ಸಂತೋಷ ಆವ ಹಾಂಗೆ ಒಂದು ಪ್ರಾಣಿ ಸಿಕ್ಕೊಕು. ಬೇಟೆಗೆ ನೀ ಅನುಮತಿ ಕೊಡೊಕು" ಎಂತ ಹೇಳ್‌ಕನ ಪಾತ್ರಿ ಜೋರಾಗಿ ಹೂಂಕರಿಸಿಕಂಡ್, ಏನೋ ಆವೇಶ ಬಂದ ಹಾಂಗೆ ಉದ್ದದ ಕೂದಲ್‌ನ ಚಕ್ರಾಕಾರಲಿ ತಿರ್‍ಗಿಸಿಕಂಡ್, ಬೆಳೆಗೆ ಜಾನುವಾರ್‌ಗಳಿಗೆ ತೊಂದರೆ ಆಗದಿರ್ಲೀಂತ ಮಾಡ್ದ ಕಟ್ಟಳೆ ಇದ್. ಆದರೆ ಇಂದ್ ಗಳಿಗೆ ಸರಿ ಇಲ್ಲೆ, ಕೆಟ್ಟ ಗಳಿಗೆಲಿ ಅಡ್ಡ ಬೇಟೆ ಸರಿ ಆಕಿಲ್ಲೆ. ಒಂದ್ ಸರ್ತಿ ಕಟ್ಟಳೆ ಮುರ್‌ದರೆ ತೊಂದರೆ ಏನೂ ಇಲ್ಲೆ. ಇಂದ್ ಬೇಟೆ ಬೇಡಾಂತ ಹೇಳ್ತ್‌ಗಡ. ಸೇರ್ದವುಕ್ಕೆ ಆಶ್ಚರ್ಯ ಆತ್! ಎಲ್ಲವುಕ್ಕೆ ಗೊತ್ತಿರುವ ಹಾಂಗೆ ಪಾತ್ರಿ ಒಂದೇ ಒಂದು ಸರ್ತಿ ಬೇಟೆ ಬೇಡಾಂತ ಹೇಳ್ದಂವ ಅಲ್ಲ. ಇಂದ್ ಇವಂಗೆ ಏನಾಗುಟ್ಟು? ಕಳ್ದ ವರ್ಷ ಇವಂಗೆ ಕೊಟ್ಟ ಮರ್ಯಾದೆಲಿ ಏನಾರು ಕಮ್ಮಿ ಆಗುಟ್ಟೊ? ಏನು ಮಾಡ್ದೂಂತ ಗೊತ್ತಾಗದೆ ಬೇಟೆಗೆ ಒಟ್ಟಿಗೆ ಬರುವವರ ಮೋರೆ ನೋಡ್ಕನ, ಭೂತನೇ ಬೇಡಾಂತ ಹೇಳ್ಕನ ಬೇಟೆಗೆ ಹೋವ ಮನಸ್ಸ್ ಅವುಕೆ ಇತ್‌ಲ್ಲೇಂತ ಕಂಡತ್. ಭೂತದ ಮಾತ್‌ಗೆ ಕಟ್ಟ್‌ಳೆ ಮುರಿಯಕೂ ಮನಸ್ಸಿತ್‌ಲ್ಲೆ. "ಎಲ್ಲರ ಕಾಯುವ ದೈವ ನೀನು. ನೀನೇ ಮಾಡಿದ ಕಟ್ಟೆಳೆನ ಮುರಿಯಕೆ ಮನುಷ್ಯರಾದ ನಾವ್ಗೆ ಮನಸ್ಸ್ ಬಾದುಲ್ಲೆ. ನಾವಂತೂ ನಿನ್ನ ಮೇಲೆ ಭಾರ ಹಾಕಿ ಬೇಟೆ ಆಡಿಕೆ ಹೋದವೆ. ಕಾಯುವ ಕೆಲಸ ನಿನ್ನದ್"-ಎಂದ್ ಹೇಳ್ಕನ, ಪಾತ್ರಿ ಇನ್ನೊಮ್ಮೆ ಥರಗುಟ್ಟಿ ಕಟ್ಟಳೆ ಹೇಳ್ತ್. "ನಿಶ್ಚಯ ನಿಮ್ಮದೂಂತ ಆದರೆ ದೈವಲಿ ಕೇಳುವ ಶಾಸ್ತ್ರ ಮಾಡ್ದು ಏಕೆ. ಹ್ಹುಂ, ಬೆಚ್ಚ ಬೇಡ ನೀವಿಗ ಹೊರ್ಟದ್ದಕ್ಕೆ ಒಂದು ಬೇಟೆ ಆದೆ. ಕಾಯುವ ಕೈ ಹೇಂಗಿದ್ದರೂ ಕಾಯೊಕಲ್ಲ ! ನಿಮ್ಮ ಸಂತೋಷನೇ ನನ್ನ ಸಂತೋಷ" ಎಂತ ಹೇಳಿ ಕೈ ಎತ್ತಿ ಪ್ರಸಾದ ಕೊಟ್ಟತ್. "ಹೇಂಗೂ ಬೇಟೆ ಆದೆ. ಆದರೆ ಅದ್ ನಂಗೂ ಆಗದ್ದ್, ನೀವ್ಗೂ ಆಗದ್ದ್. ಆದರೆ ಆ ಬೇಟೆಂದ ಎಲ್ಲವ್ಕೂ ಸಂತೋಷ ಆದೆ". ಅಂದ್‌ನ

ದಿನ ಕೂಡು ಬೇಟೆಗೆ ಹೊರ್ಟವು ಇಪ್ಪತ್ತ್ ಜನ. ಬಂದ ಇಪ್ಪತ್ತ್ ಜನರ ಪೈಕಿ ಕೋವಿ ಇದ್ದವು ಹನ್ನೊಂದು ಜನ. ಬಾಕಿ ಇದ್ದವರ ಹಕ್ಕಲೆ ದೊಡ್ಡ ಬಾಳ್‌ಕತ್ತಿಗ ಅಲ್ಲದೆ ಭೀಮನ ಗದೆ ಹಾಂಗೆ ಇದ್ದ ದೊಣ್ಣೆಗ ಇದ್ದೊ. ದೊಣ್ಣೆನ ಒಂದು ಪೆಟ್ಟಿಗೆ ಹುಲಿನೂ ಪ್ರಾಣ ಬುಡೊಕು. ಆದರೂ ಗುಂಪುನ ಕೆಲವುಕ್ಕೆ ಹೆದ್ರಿಕೆ ಇತ್ತ್, ಪಾತ್ರಿ ಹೇಳ್ತಲ್ಲಾ ಇಂದ್ ಕೂಡ್‌ಬೇಟೆ ಬೇಡಾಂತೇಳಿಂತ ಹೇಳಿಕೊಂಡೊ.

ಬೈನಾಟಿನ ಗುಡಿಗೆ ಕೈಮುಗ್ದ್ ಅಪ್ಪಯ್ಯ ಗೌಡ್ರ ಮುಂದಾಳ್ತನಲಿ ಕೂಡು ಬೇಟೆ ನಡ್ತ್. ಮುಂದೆಗೆ ಸಡನ್ ಡೆತ್ ಬೇಟೆಗಾರರಾಗಿ ಅವ್ವೋ ನಿತ್ತೊ. ಹಿಂದೆಂದ ಗುಂಡ್ಯ ಚೋಯಂಬು, ಕುಡೆಕಲ್ಲ್ ತ್ಯಾಂಪಣ್ಣ, ಶೇಷಪ್ಪಾಚಾರಿ, ತಲೆಪಳ ಐತ್ತು ನಾಯ್ಕ, ಕೂರ್ನಡ್ಕ ರಾಮಣ್ಣ (ಕುಟ್ಟಿ ನಾಯ್ಕರು), ಚಿಮ್ಮನ ಮೂಲೆ ವೆಂಕಪ್ಪ ನಾಯ್ಕ, ಕಲ್ಲಪಳ್ಳಿನ ಬೋಳ ಗೌಡ, ಮತ್ತೆ ಮುಂತಾದವು ಮತ್ತು ಹಂಞ ನಾಯಿಗ. ನಾಯಿಗ ಅಲ್ಲಲ್ಲಿ ಮೂಸಿಕಂಡ್, ಒಮ್ಮೊಮ್ಮೆ ಮೂಂಕುನ ಹೊಳ್ಳೆ ಅರಳಿಸಿ ಕಂಡ್ ಪತ್ತೆದಾರಿಕೆ ಮಾಡುವವರ ಹಾಂಗೆ, ಇದ್ದೊ ಹಾಂಗೆ ಬೊಗಳಿಕಂಡ್ ಮುಂದೆ ಹೋತಿದ್ದೊ. ಕಾಡ್‌ಲಿ ತುಂಬ ಚೀಮುಳ್ಳು ಬಲ್ಲೆಗ ಇದ್ದೊ. ಅಲ್ಲಿಎಲ್ಲ ಕಾಡ್ ಹಂದಿಗ ಇರ್ದು ಮಾಮೂಲು. ಹಂಗೆ ಹಂದಿಗ ಸಿಕ್ಕದೆ ಇರಿಕೆ ಸಾಧ್ಯ ಇಲ್ಲೇಂತ ಆತ್. ದೊಣ್ಣೆ ಮತ್ತ್ ತಲವಾರ್‌ನವು ಕಾಡ್‌ನ ಸೋವುದು, ಮತ್ತೆ ಬೆಡಿ ಇದ್ದವು ಗಂಡಿಲಿ ನಿಲ್ಲುದೂಂತಳೂ ಮಾತಾಡಿ ಕಂಡೊಗಡ. ಇನ್ನ್ ಏನ್, ಅವು ಬೇರೆ ಬೇರೆ ಆಕೂಂತ ನೆನ್ಸ್‌ಕನ ಒಂದು ಫರ್ಲಾಂಗ್ ದೂರಲಿ ನಾಯಿಗ ಬೊಗಳಿಕೆ ಸುರುಮಾಡ್ದೊ. ಬೇಡಿನ ಮುಂದೆ ಮಾಡಿಕಂಡ್ ಅವೆಲ್ಲ ಅಲ್ಲಿಗೆ ಬಾಕನ ಬಸವ ಸತ್ತ್ ಬಿದ್ದಿತ್ತ್. ಅದರ ಕುತ್ತಿಗೆ ಭಾಗಲಿ ಹುಲಿ ಕಚ್ಚಿದ, ಎಳ್ದ ಭಾಗಂದ ನೆತ್ತರ್ ಹೋಗಿ ಕಾಡು ನೊಣಂಗ ಕುದ್ದಿದ್ದೊ. ಹುಲಿ ಹಿಡಿಯಕನ ತುಂಬ, ಹ್ಯೊದಾಟ ಆದ್ದ್ ಅಲ್ಲಿ ಗೊತ್ತಾತಿತ್ತ್. ಬೇಟೆಗಾರರ್ ಮುಖ ಮುಖ ನೋಡಿಕಂಡೊ ಪಾತ್ರಿ ಹೇಳ್ದ ಮಾತ್ ನೆನ್ಪಾತ್. "ಎಲ್ಲಾ ಮುಗ್ಧ ಮೇಲೆ ಉಳಿಸಿಕೆ ಹೇಳ್ರೆ ಬೈನಾಟಿ ಏನು ಮಾಡೊಕು" ಬಸವನ್ನ ಜೀವ ಹೋದ್ದ್ ಪಾತ್ರಿಗೆ ಗೊತ್ತಾದ್ದ್ ಹೇಂಗೆ, ಬೈನಾಟಿನ ಶಕ್ತೀಂತ ಹೇಳ್ರೆ-ಅದಕ್ಕೆ ಬುಟ್ಟ ಬಸವನ ಉಳ್ಸಿಕಣಿಕೆ ಯಾಕೆ ಆತಲ್ಲೆ! ಈ ಬಸವನ ಕೊಂದ ಹುಲಿ ದೊಡ್ಡ ಹುಲಿಯೇ ಆಗಿರೊಕು. ಸಣ್ಣ ಹುಲಿ ಆಗಿದ್ದರೆ ಬಸವನೇ ಹುಲಿನ ಕುತ್ತಿ ಕೊಂದ್ ಬುಡ್ತಿತ್ತ್, ಹಾರುವ ಹುಲಿಗೆ ಕೊಂಬುಂದ ಕುತ್ತಿದ್ದರೆ ಇಲ್ಲಿ ಆ ಹುಲಿನ ಸತ್ತ ಜೀವ ಇರೊಕಾತ್. ಇಂದ್‌ನ ಊಟಕ್ಕೆ ಆ ಹುಲಿ ಬಾರದೆ ಇರಿಕಿಲ್ಲೆ. ಕಾಡ್‌ನ ಸೊಮು ಮಾಡ್ದೋ, ಎಲ್ಲಾವೂ ಸೇರಿ ಬಾಕೆ ಇರುವ ಹುಲಿಗೆ ಹೊಡಿಯಕೆ ಇಲ್ಲೆ ಕಾದು ಕುದ್ರುದೋ. ಎರಡ್ ನಿಮಿಷಲಿ ತೀರ್ಮಾನ ಮಾಡಿ ಕಂಡ್, ಮುಂದೆನೇ ನೆನ್ಸಿದ ಗಂಡಿಗಳ ಹಕ್ಕಲೆ ಕಾಲು ಹಾಕಿದೊ. ಹತ್ತ್ ಹೆಜ್ಜೆ ಹಾಕಿತ್‌ಲ್ಲೆ. ಅವರ ಒಟ್ಟಿಗೆ ಇದ್ದ ನಾಯಿಗ ಸಣ್ಣ ರೀತಿಲಿ ಕುಂಯ್‌ಗುಟ್ಟಿಕಂಡ್ ಬಾಲನ ಕಾಲ್ ಎಡೆಗೆ ಹಾಕಿಕಂಡ್, ಹೆದ್ರಿಕೆಂದ ಎಲ್ಲಿಯೋ ಬೇರೆ ಜಾಗೆಗೆ ಹೋಗಿ ಅಡಂಗಿಕಂಡೊ. ಹುಲಿನ ವಾಸನೆ ಮೂಗಿಗೆ ಬಾಕನ ಎಷ್ಟೇ ಧೈರ್ಯದ ನಾಯಿ ಆದರೂ ಹಾಂಗೇ ಮಾಡ್ದು

ಅವರ ಹುಟ್ಟು ಗುಣ. ಮುಚ್ಚಂಗ ಮರ್ದುವ ಸ್ವರ ಕೇಳ್ತ್. ಅವ್ಕೆ ತೊಂದರೆ ಇಲ್ಲದಿದ್ದರೆ ಮರದ ಮೇಲೆ ಇದ್ದು ಸಣ್ಣ ಸಣ್ಣ ಪ್ರಾಣಿಗಳಿಗೆ ಅಪಾಯ ಉಟ್ಟೂಂತ ಗೊತ್ತಾಗಲೀಂತ ಮರ್ದ್ದುದು ಅದರ ಧರ್ಮ. ಗೌಡ್ರ ಬಲದ್ದಿಗೆ ಹಂಞಾ ಕೆಳಗೆ ವೆಂಕಪ್ಪ, ಶೇಷಪ್ಪ ಮತ್ತ್ ಮಾಲಿಂಗರು ಇದ್ದೊ. ಎಡಭಾಗದ ಗಿಡ್ಡೆ ಹಕ್ಕಲೆ ಎಂತದೋ ನಡವ್ ಹಾಂಗೆ ಕೇಳ್ತಿತ್ತ್. ಗೌಡ್ರು ಬೆಡಿ ಹಿಡ್ದ್ ಟ್ರಿಗರ್ ಮೇಲೆ ಕೈ ಇಸಿ ತಯಾರಾದೊ. ಅಖೇರಿಗೆ ಕಂಡತ್, ರಕ್ಕಸ ದೇಹ ಇದ್ದ ಹುಲಿ ಬಸವನ ಹಕ್ಕಲೆ ಬಾತಿತ್ತ್. ಗೌಡ್ರು ಹುಲಿನ ನೋಡಿ ಕೈ ಟ್ರಿಗರ್ ಮೇಲೆ ಇದ್ದರೂ ಎಳೆಯಿದೆ ಸುಮ್ಮನೆ ಇದ್ದೊ. ಬಣ್ಣದ ದೈನ ಎಡೆಂದ ಕೆಂಪು ಮಿಶ್ರ ಆದ ಅರಸಿನ ಬಣ್ಣ, ಅಲ್ಲಲ್ಲಿ ಕಪ್ಪು ಗೆರೆಗಳ ಚಿತ್ರ, ಹೊಟ್ಟೆ ಭಾಗ ಬಿಳಿ ಬಣ್ಣ ಇತ್ತ್. ಅದರ ದೊಡ್ಡ ಜೀವ ನೋಡ್ಕನ ಎದೆನೆ ಒಡ್ದು ಹೋಕು ಹಾಂಗಿತ್ತ್. ಅದರ ಉದ್ದದ ಬಾಲ ಒಮ್ಮೆ ಅತ್ತ, ಮತ್ತೆ ಇತ್ತಕ್ಕೆ ಹೊಡ್ಕಂಡ್ ರಾಜನ ಗಂಭಿರತೆಂದ ಪೊರ್ಲು ಕಾಂಬತಿತ್ತ್.

ಕೆಳಗೆನ ಗಂಡಿಲಿ ನಿತ್ತ ವೆಂಕಪ್ಪ ನಾಯ್ಕ ರಾಕ್ಷಸ ಗಾತ್ರದ ಹೆಬ್ಬುಲಿನ ಕಂಡ್ ಯಮನ ಕಂಡ ಹಾಂಗೆ ಆಗಿ "ಓ ದೇವರೇ ಬೈನಾಟಿ ಎಂದು ದೊಡ್ಡ ಬೊಬ್ಬೆ ಹಾಕಿ ಅವನ ಬೆಡಿನ ಬಿಸಾಡಿ ಗೌಡ್ರ ಹಕ್ಕಲೆಗೆ ಬಾತ್. ವೆಂಕಪ್ಪನ ಅವತಾರಂದ ಹೆದ್ರಿದ, ಮಾಲಿಂಗ ಅಲ್ಲದೆ ಶೇಷಪ್ಪ ಆಚಾರಿನೂ ಬೆಡಿನ ಬಿಸಾಡಿ ಬೊಬ್ಬೆ ಹಾಕಿಕಂಡ್ ಓಡಿ ಹಕ್ಕಲೆ ಇದ್ದ ಮರಗಳ ಹತ್ತಿಕೆ ನೋಡ್‌ತಿದ್ದೊಗಡ. ಹುಲಿನ ಕಂಡಾಕನ ಮರಹತ್ತಿಕೂ ಆಗದೆ ಹಂಞಾ ಹತ್ತಿ ಆಗದೆ, ಕೆಳಗೆ ಜಾರ್‌ತಿದ್ದೊ. ವೆಂಕಪ್ಪನ ಬೊಬ್ಬೆ ಕೇಳ್ದ ಹುಲಿ ಅವನ ಓಟನೇ ನೋಡಿಕನ, ಗೌಡ್ರು ಹುಲಿನ ಕಣ್ಣಿಗೆ ಬಿದ್ದೊ. ಹುಲಿ ನಮ್ಮಂತ ಮನುಷ್ಯರ ನೋಡಿರಿಕಿಲ್ಲೆ. ಆ ಕ್ಷಣ ಮನುಷ್ಯರ ನೋಡ್ಕನ ಆಗಲೇ ಅದಕ್ಕೆ ಅದರ ಕಾರ್ಯಕ್ಕೆ ತೊಡಗಿಕೆ ಆತ್‌ಲ್ಲೆ. ಬೆಡಿನ ಮುಂದೆ ಮಾಡಿ ನಿತ್ತ ಗೌಡ್ರ ಹುಲಿ ನೋಡಿತ್. ಅದರ ಇನ್ನೊಂದು ಕಾರ್ಯ ಇವರ ಮೇಲೆ ಹಾರ್ದು. ಅದರ ಬೀಲ ಜೋರುಲಿ ಹಂದಾಡ್‌ತಿತ್ತ್. ಗೌಡ್ರು ತಡ ಮಾಡಿತ್‌ಲ್ಲೆ. ಸರಿಯಾಗಿ ಗುರಿ ಇಸಿ ಕುದುರೆ ಎಳ್ದೊ. ಗುಂಡುನ ದೊಡ್ಡ ಶಬ್ದಕ್ಕೆ ಹೆಬ್ಬುಲಿ ದೊಡ್ಡ ಆರ್ಭಟೆ ಕೊಟ್ಟ್, ಇನ್ನು ಮುಂದೆಗೆ ಹಾರುದೂಂತ ಆಕನ ಗೌಡ್ರ ಎರಡನೆ ಗುಂಡು ಹೊಡ್ದಾಕನ ದೊಪ್ಪಂತ ಕೆಳಗೆ ಬಿದ್ದ್ ಕೈ ಕಾಲ್ ಆಡಿಸಿ ಹಂಞಾ ಹೊತ್ತ್‌ಲಿ ಹುಲಿ ಸತ್ತತ್. ವೆಂಕಪ್ಪ ಅವನ ಮುಂದೆನ ಜಾಗೆಲಿಯೇ ನಿತ್ತಿದ್ದರೆ ಹುಲಿನೊಟ್ಟಿಗೆ ಅವನ ಕತೆನೂ ಮುಗಿತಿತ್ತ್.

ಬಿದ್ದ ಹುಲಿಂದ ಯಾವ್ದೇ ಶಬ್ದ ಬಾರದೆ ಇರ್ಕನ ಹೆಂಗಾರೂ ಜೀವ ಉಳ್ಸಿಕಣಿಕೆ, ನೋಡ್ದವು ಅವರ ದೊಡ್ಡ ಕಾರ್ಯನ ಬುಟ್ಟು ಗೌಡ್ರ ಹಕ್ಕಲೆಗೆ ಬಂದೊ. ಅವರ ಕಾಲ್‌ನ ಚರ್ಮ ಹೋಗಿ ನೆತ್ತೆರ್ ಬಾತಿತ್ತ್. ಕೂಕುಳು ಹಾಕಿ ಎಲ್ಲವರ ಕರ್ದೊ. ಬಂದವು ಆ ದೊಡ್ಡ ಹುಲಿನ ನೋಡಿ ಇಂದು ನಮ್ಮ ಆ ಬೈನಾಟಿಯೇ ಉಳ್ಸಿದ್, ಖಂಡಿತ ಎಂದ್ ಹೇಳಿಕೊಂಡೊ. "ನಿಮ್ಮ ಉತ್ತರನ ಪೌರುಷ ನೋಡಿ ನಿಮ್ಮೊಟ್ಟಿಗೆ ಬಂದ ನಾನು ಕೂಡಾ ಬೆಡಿನ ಬಿಸಾಡಿ ಮರ ಹತ್ತಿಕೆ ನೋಡಿದ್ದರೆ, ಏನಾತಿತ್ತ್‌ಂತ" ಗೌಡ್ರು ಕೇಳ್ಕನ ಅಂಥಾ

ಸಮಯಲಿ ನಮ್ಮ ಬುದ್ದಿನೇ ಓಡ್ತ್‌ಲ್ಲೆಂತ ಅವುಕೆ ಅವೇ ಬಯ್ಕಂಡೊ. ಸತ್ತ ಹುಲಿನ ಕ್ರಮದಾಂಗೆ ಮೀಸೆ ಸುಟ್ಟ ಹುಲಿಗೆ ಬಡಿಗೆ ಕಟ್ಟಿ ಬೈನಾಟಿ ಸ್ಥಾನಕ್ಕೆ ತಂದೊ. ಬೈನಾಟಿ ಸ್ಥಾನಲಿ ಜನ ಇನ್ನೂ ಇದ್ದೊ.

ಸತ್ತ ಹುಲಿ ಎಲ್ಲವರ ಕಣ್ಣಿಗೆ ಕಂಡ ಹಾಗೆ ಆತ್. ನೆಡ್ಚಿಲು ಪಟೇಲರ್ ಬಂದವು ಹುಲಿನ ಮೇಲೆ 1 ರೂಪಾಯಿ ಇಸಿ ಶಹಬ್ಬಾಸ್ ಗಿರಿ ಕೊಟ್ಟ್ ಹೊಗಳಿದೊ. ಹಾಂಗೆ ಸುಮಾರ್ 50 ರೂಪಾಯಿ ಹುಲಿ ಮೇಲೆ ಇತ್ತ್. ಅಂದಿಗೆ ಅದ್ ತುಂಬ ದೊಡ್ಡ ದುಡ್ಡೇ ಆಗಿತ್ತ್. ಹುಲಿನ ಚರ್ಮ ತೆಗಿಯಕನ ಇಪ್ಪತ್ತ್ನಾಲ್ಕ್ ಸೀಸದ ಗುಂಡು ಸಿಕ್ಕಿತ್. ಅಂದರೆ ಇದರ್‌ಂದ ಮುಂದೆನೇ ಯಾರೋ ಗುಂಡು ಹೊಡ್ದೋಳೊ. ಆದರೆನೂ ಅದರ ಸಾವು ಅಪ್ಪಯ್ಯ ಗೌಡ್ರ "ಸಡನ್ ಡೆತ್" ಬೆಡಿಲಿಂತ ಅದರ ಹಣೆಲಿ ಬರ್ದಿತ್ತ್‌ಂತ ಕಂಡದೆ.

ಹಿಂಬತ್ ಬೈನಾಟಿನ ಪಾತ್ರಿ ಸಿಕ್ಕಿ ಆಕನ ಅವನೊಟ್ಟಿಗೆ ಗೌಡ್ರು ಹೇಳಿದೊ. ಆ ಬಸವನ ಉಳಿಸಿಕಣಿಕೆ ಬೈನಾಟಿಂದ ಆತ್‌ಲ್ಲೆ, ನೀ ಹೇಳ್ದ್ ಸರಿ. ಆಗುಟ್ಟು ಬಸವನ ಕೊಂದ ಹುಲಿ ಸತ್ತದ್ ನಾವುಗೆಲ್ಲ ಸಂತೋಷ ಆಗುಟ್ಟು. ಆದರೆ ಒಂದು ಪ್ರಶ್ನೆ ಉಳುದುಟ್ಟು. ನಿಂಗೆ ಹಾಂಗೆ ಭವಿಷ್ಯ ಹೇಳಿಕೆ ಹೇಂಗೆ ಸಾಧ್ಯ ಆತ್? ಹೇಂಗೇಂತ ನಂಗು ಗೊತ್ತಿಲ್ಲೆ ಅಪ್ಪಯ್ಯಣ್ಣಾ, ಇದ್ ಆ ಸಮಯಲಿ ಬಂದ ಮಾತ್. ಈಗ ಹೇಳ್‌ಂತೇಳ್ರೆ ನಂಗೆ ಹೇಳಿಕೆ ಆಕಿಲ್ಲೆ. ಎಲ್ಲದ್ದೂ ಒಂದ್ ಸಮಯ ಸಂದಂಭರ್ಾಂತ ಇದ್ದದೆ –ಎಂದ್ ಹೇಳ್ತ್. ಏನು ಹೇಳಿರೂ ಅವನ ಮಾತ್‌ಲಿ ಕೃತ್ರಿಮ ಇತ್ತ್‌ಲ್ಲೆ. ಅವ ಹೇಳ್ದ್ ಸತ್ಯ ಆಗಿತ್ತ್‌ಂತ ಕಂಡದೇಂತ ಗೌಡ್ರಿಗೆ ಅನ್ಸಿತ್ ಗಡ.

17

ಹೆಬ್ಬುಲಿ ಮತ್ತ್ ಅದರ ಮರಿಗ

ನೀವೀಗ ನಂಬಿಕಿಲ್ಲೆ. ಆ ಕಾಲಲಿ ಊರ್‌ಲಿ ಮಾನ್ಯತೆಯ ಮಣೆ ಸಿಕ್ಕೊಕಾದರೆ ಒಂದೋ ರಾಜಕೀಯವಾಗಿ ಹೋರಾಡುವವು ಆಕಾಗಿತ್ತು. ಅಲ್ಲರೆ ಯಕ್ಷಗಾನದ ಆಟಲಿ ಉಷಾರಿರೊಕಾಗಿತ್ತ್. ತಪ್ಪಿರೆ ಬೇಟೆಗಾರ ಆಕಾಗಿತ್ತ್. ನಾಲ್ಕ್ ಜನ ನಮಸ್ಕಾರ ಮಾಡೊಕುಂತಾರೆ. ಒಂದು ಬೆಡಿ ಕೈಲಿದ್ದರೆ ಸಾಕಿತ್ತ್. ಒಳ್ಳೆ ಈಡುಗಾರಂಗೆ ಒಲಿಯದವೇ ಇತ್ತ್‌ಲ್ಲೆ. ಬಾಲ್ಯದ ನೆನಪುಗ ಯಾಗೊಳೂ ಹುರುಪು ಕೊಟ್ಟದೆ. ಯೌವನದ ದಿನಂಗ ಪ್ರಾಯ ಹೋಕಾಕನ ಶಕ್ತಿ ಕೊಡುವ ವಿಷಯಗ ಆದವೆ. ಕ್ಷಾತ್ರ ಧರ್ಮ ಕ್ಷತ್ರಿಯರ್‌ದ್. ಎದುರೆದುರೇ ಎದುರಿಸಿ ಹೊಡೆಯುವುದು, ಅಡ್ಡ ನಿತ್ತ್ ಹೊಡಿಯೊದು ಇಷ್ಟ ಆದುಲ್ಲೆ. ಕೆಲವು ಸಮಯಲಿ ಹೀಗೆ ಹಾಂಗೇಂತ ಲೆಕ್ಕ ಹಾಕಿಕೆ ಆದುಲ್ಲೆ. ಸಮಯಲಿ ಹೇಂಗೆ ಬೇಕೋ ಹಾಂಗೆ ನಡ್ಕೊಣಕಾದೆ. ಕಳೆಗಿ ಶೇಷಪ್ಪಾಚಾರಿಂತ ಒಬ್ಬ ಬೆಡಿ ಹಿಡಿವ ಜನ ಇದ್ದೊ. ಬೆಡಿಗಳ ರಿಪೇರಿನೂ ಮಾಡ್ತಿದ್ದೊ. ಧೈರ್ಯದವೂ ಆಗಿದ್ದೊ, ಹಾಂಗೇಂತ ಹುಲಿ ಹೊಡ್ದವು ಅಲ್ಲ. ಆದರೆ ಪ್ರಾಣಿಗ ನೀರು ಕುಡಿಯಕೆ ಬರುವ ಪಳ್ಳದ ಹಕ್ಕಲೆ ಮನೆ ಕಟ್ಟಿ

ಬದ್‌ಕಿಕಂಡ್ ಇದ್ದೊ. ಊರ್‌ಲಿ ಯಾರ ಕೋವಿಗೆ ತೊಂದರೆ ಆದರೂ, ಅವು ಸರಿಮಾಡ್‌ತಿದ್ದೊ. ಊರ್‌ಲಿ ಅವನ "ಬೆಡಿನ ವೈದ್ಯಂತ" ಹೇಳ್‌ತಿದ್ದೊ. "ಬಡ್ಡಡ್ಕ ಅಪ್ಪಯ್ಯ ಗೌಡರ್ ಗುಂಡುಲಿ ಬಿರ್ಸಂತ" ಅಂವ ಹೇಳ್‌ತಿತ್ತ್. ಶೇಷಪ್ಪಾಚಾರಿ ಯಕ್ಷಗಾನ ಪದ ಹೇಳುದರ್‌ಲಿ ಭಾರಿ ಜಾಣ ಆಗಿದ್ದೊ. ಒಂದು ದಿನ ಅಂವ ರುಕ್ಮಾಂಗದ ಯಕ್ಷಗಾನದ ಒಂದು ತುಂಡು ಪದ ಹೇಳಿಕಂಡ್ ಇತ್ತು. ಬೀಡಿ ಎಳ್ದ್ –ಅದರ ಅತ್ತ ಬಿಸಾಡಿ ಇನ್ನೊಂದು ಪದ ಹೇಳಿಕೆ ಸುರು ಮಾಡ್ಕನ ಕಪ್ಪಾದ ಗುರ್ತು ಇಲ್ಲದಂವ ಒಬ್ಬ ಓಡಿ ಬಾತಿತ್ತ್. ಇಪ್ಪತ್ತರ ಪ್ರಾಯದ ಹೈದ ಅಂಗಳದಲ್ಲಿ ಬಂದ್ ನಿಂತತ್. ಧೈರ್ಯ ಕಮ್ಮಿ ಆದರ್‌ಂದನೋ ಏನೋ ಅವ ನಡ್‌ಗ್‌ತಿತ್ತ್. ಹಸ್‌ದ್ ಕಂಡ್ ಹೆದರಿಕೆಲಿ ಬಚ್ಚಿದ್ ಅವ ಕಷ್ಟಲಿ ಉಸಿರ್ ಬುಟ್ಟ್‌ಕಂಡ್ ಇತ್ತ್. ಕೈ ಸನ್ನೆ ಮಾಡಿ ಊಟ ಬೇಕೂಂತ ಹೇಳ್ತ್. ದುಡು ದುಡು ಶಬ್ದ ಕೇಳಿದ ಅವರ ಹೆಣ್ಣ್ ಬಂದ್ ಅವಂಗೆ ಒಂದ್ ಹಾಳೆಲಿ ಗಂಜಿನೂ, ಹಂಙ ತೆಳಿನೂ, ಹ್ಯೊದು ಕೊಟ್ಟತ್. ಖಾರಕ್ಕೆ ಚಿದಿಮೆಣ್ಸ್ ಹುಳಿ–ಉಪ್ಪು ಕೊಟ್ಟೊ. ನಾಲ್ಕು ಜನ ಉಂಬಷ್ಟ್ ಕುಚ್ಚಲಕ್ಕಿ ಗಂಜಿನ ಗಬಗಬಾಂತ ತಿಂದ್ ಅವ ಅಂಗಳಲಿ ಕಾಲ್ ನೀಡಿ ಸುಧಾರಿಸಿ ಕಂಬತಿತ್ತ್. ಅವಂಗೊಂದು ಬೀಡಿ ಕೊಟ್ಟ್ ಶೇಷಪ್ಪಾಚಾರಿ ಬೀಡಿ ಹೊತ್ತಿಸಿಕಂಡ್ ಪುಸ್ಸ ಪುಸ್ಸ ಎಂದ್ ಹೊಗೆ ಬುಟ್ಟುಕಂಡ್ ಇರ್ಕನ ಮಾತಾಡ್ಸಿಕೆ ಸುರು ಮಾಡ್ದೊ. ಅಂವ ನೆಲ್ತಿಲದ ಬಡತನದ ಹೈದ. ನೆಡ್ಜಿಲ್ ಪಟೇಲರಲ್ಲಿಗೆ ಕೆಲಸಕ್ಕೆ ಹೋತಿತ್ತ್‌ಗಡ. ದಿನಾ ಮಾಡ್ವ ಕೆಲ್ಸನೇ ಮಾಡಿ ಬಿಡ್ದ್ ಹೋಗಿ ಕಾಡ್ ಜೇನು ಎಲ್ಲಿಯಾರ ಸಿಕ್ಕುದೋಂತ ಕಾಡು ನುಗ್ಗಿತ್ತ್. ಜೇನು ಗೂಡು ಹೆಚ್ಚಿಗೆ ಇದ್ದ ಕೆಳಗಿನ ಕಾನದ ತುಂಬ ಮರಕಾಡ್ ಇರುವಲ್ಲಿಗೆ ಹೋಗಿತ್ತ್. ಹಾಂಗೇ ಹುಡುಕಿಕಂಡ್ ಮುಂದೆ ಮುಂದೆ ಹೋದಹಾಂಗೆ ದೂರಲಿ ಒಂದು ಪ್ರಾಣಿನ ರೂಪ ಕಾಣ್ಸಿತ್. ಇವಂಗೆ ಅದು ಎಂತದೂಂದ ನೋಡಿಕೆ ಕೆಟ್ಟ ಆಸೆ ಬಾತ್. ಸರೀ ನೋಡಿಕನ ಅದೊಂದು ದೊಡ್ಡ ಹುಲಿ. ಅದ್ ಇವನ ದೂರಂದಲೇ ಏನು ಮಾಡ್‌ದೂಂತ ತೀರ್ಮಾನ ತೆಗಂಡ್ತ್. ಇಂವ ಹುಲಿನ ನೋಡಿ ಓಡಿಕೆ ಸುರು ಮಾಡ್ತ್. ಹುಲಿ ಗುರುಗುಟ್ಟಿಕಂಡ್ ಅವನ ಓಡ್ಸಿಕಂಡ್ ಹೋತ್. ಅಂವ ಮರಹತ್ತುದರ್ಲಿ ಭಾರಿ ಬಿರ್ಸ, ಹುಲಿನ ಬಾಯಿಗೆ ಬೀಳ್ದು ನಿಘಂಟ್‌ಂತ ಆಕನ ಸರಸರಾಂತ ಮರದ ಮೇಲೆ ಹತ್ತಿತ್ತ್. ನಾ ಬಚಾವಾಕಂಡೇಂತ ಇವ ನೆನ್ಸಿತ್. ಅವನ ಎದೆ ಮಾತ್ರ ಬಪ್ಪನಾಡಿನ ಡೋಲು ಹಾಂಗೆ ಹೆದರಿಕೆಲಿ ಡಬ ಡಬಂತ ಹೇಳ್ತ್‌ತ್. ಅಲ್ಲಿ ಮರದ ಬುಡಲಿ ಆ ಹುಲಿ ಆರಾಮಲಿ ಕುದ್ದು, ಇವನನೇ ನೋಡ್ತಿತ್ತ್. ಈ ಹುಲಿಗೇನ್ ಹುಚ್ಚು ಹಿಡ್ದುಂಟೂಂತ ದಲಿತ ಹೈದಂಗೆ ಸಂಶಯ ಬಾತ್.

ತಲೆ ಎತ್ತ್‌ತಿದ್ದ ಹುಲಿ ಬಚ್ಚ್‌ಕನ ತಲೆನ ಕೆಳಗೆ ಹಾಕ್‌ತಿತ್ತ್. ಆರಾಮಲಿ ಮಲ್ಕಂಡಿತ್ತ್. ಮತ್ತೆ ವಾಪಾಸ್ ಇವನ ನೋಡ್ತಿತ್ತ್. ಹೀಗೆ ಎಷ್ಟು ಸಲ ಆತೋ ಅವಂಗೆ ಗೊತ್ತ್‌ಲ್ಲೆ. ಎಷ್ಟು ಹೊತ್ತಾದರು ಮರದ ಬುಡಂದ ಹುಲಿ ಎದ್ರುದುಲ್ಲೆ. ದೂರದ ಬೈಲ್‌ಂದ ಜನ ಮಾತಾಡ್ದು ಕೇಳಿ ಹೈದ ಗಟ್ಟಿ ಬೊಬ್ಬೆ ಹಾಕಿತ್. ಅಷ್ಟೊತ್ತಿಗೆ ಅಂವ ಎಷ್ಟ್ ಹೆದರ್‌ತ್ತಂತ

ಹೇಳ್ತೆ ಹಂಞಾ ಹೊತ್ತುಲಿ ಅವನ ಗಂಟ್ಲ್‌ಂದ ಸ್ವರನೇ ಬಾತ್‌ಲ್ಲೆ. ಅಂವ ಕುದ್ದಲ್ಲೆ ಮರಕಟ್ಟಿದಾಂಗೆ ಆತ್. ಹುಲಿ ಅಲ್ಲಿಂದ ಎದ್ದತಿಲ್ಲೆ. ತುಂಬಾ ಹೊತ್ತಾಕನ ಹುಲಿನ ಮರಿಗ ಬೊಬ್ಬೆ ಹಾಕ್‌ಂಡ್ ಇದ್ದದ್ ಕೇಳ್ತ್. ಈಗ ಹೈದಂಗೆ ಅರ್ಥ ಆತ್. ಅದರ ಮರಿಗಳ ಇಂವ ತಕ್ಕೊಂಡು ಹೋದೂಂತ ಅದ್ ಇಂವನ ಕಾಯ್ದೂಂತ. ಅಂವ ಹುಲಿಗೆ ಕೈ ಮುಗ್ದು, ನಿನ್ನ ಮಕ್ಕಳು ನಂಗೆ ಬೇಡ. ನೀ ಅಲ್ಲಿ ಹೋಗಿ ಬುಡೂಂತ ಸನ್ನೆ ಮಾಡಿತ್. ಅದಕ್ಕೆ ಅರ್ಥ ಆಕೆ ಅದೇನ್ ಸರ್ಕಸ್ ಹುಲಿನಾ ! ಅಷ್ಟೊತ್ತಿಗೆ ಅದರ ಮಕ್ಕ ಗುಸುಗುಡುದ್ ಹೆಚ್ಚಾತ್. ಹಿಂಗೆ ಜೋರಾಕನ ಅವ್ವ ಹುಲಿಗೆ ಬೆಚ್ಚ ಆಗಿ ಅವು ಇದ್ದಲ್ಲಿಗೆ ಹೋಕೆ ಸುರುಮಾಡ್ತ್. ಹೈದ ನಾಲ್ಕು ಹೆಜ್ಜೆ ಮರಂದ ಇಳಿಯಕನ, ಅಂವ್ವಹುಲಿ, "ಇಳಿ ಕೆಳಗೆ ಮಾಡ್ನೆ ನಿಂಗೆ ತಿಥಿ ಕರ್ಮ" ಅಂತ ಹೇಳುವ ಹಾಂಗೆ ವಾಪಸ್ ಮರದ ಬುಡಕ್ಕೆ ಹೋತ್. ಇಂವ ಪುನಃ ಎತ್ತರದ ಮರದ ಗೆಲ್ಲ್‌ಲಿ ಕುದ್ದತ್. ಹೆದರಿಕೆಂದ ಬಾಯಿ ಪಸೆ ಆರಿಕಂಡ್ ಬಾತ್. ಯಾವುದರ್ಲಿ ಅವನ ಜೀವ ಹೋದೆ ಎಂದು ಅಂದಾಜಿ ಆತ್. ಮನೆ ಉಳ್ಳಾಳ್ತಿನ ನೆನೆಸಿಕಂಡತ್. ಆದರೆ ಅವನ ಭೂಮಿನ ಋಣ ಮುಗ್ತ್‌ಲ್ಲೆ. ಮರಿಗಳ ಗುಸುಗುಟ್ಟುದು ಜಾಸ್ತಿ ಆಕನ ಅವ್ವ ಹುಲಿ ಮರಿಗ ಇದ್ದಲ್ಲಿಗೆ ಹೋತ್. ಅದ್ ಹೋಗಿ ತುಂಬ ಹೊತ್ತು ಆದರೂ ಇವಂಗೆ ಕೆಳಂಗೆ ಇಳಿಯಕೆ, ಧೈರ್ಯ ಬಾತ್‌ಲ್ಲೆ. ವಾಪಾಸ್ ಆ ಮಾತೆ ಬಂದರೆ! ಇಂವ ಬಳ್ಳಿ ಹಬ್ಬಿ ಕಂಡ್ ಒಂದು ಮರಕ್ಕೆ ತೊಟ್ಟಿಲ್ ಕಟ್ಟುವ ಬಳ್ಳಿ ಹಂಗೆ ನೇಲಿಕಂಡ್ ಇದ್ದದರ ನೋಡ್ತ್. ಅಂತ ಬಳ್ಳಿಗಳ ಹಿಡ್ಕಂಡ್ ಒಂದು ಮರದ ಇನ್ನೊಂದು ಮರಕ್ಕೆ ಹಬ್ಬಿದ ಗೆಲ್ಲ್ ಮತ್ತೆ ನೇತಾಕಂಡಿದ್ದ ಬಳ್ಳಿಗಳಂದಾಗಿ ತುಂಬಾ ದೂರ ಹೋಗಿ ಮತ್ತೆ ಮರಂದ ಇಳ್ದ್ ಹಕ್ಕಲೆನೇ ಇದ್ದ ಶೇಷಪ್ಪ ಆಚಾರ್ರ ಮನೆಗೆ ಬಂದಿತ್ತ್. ಇವನ ಕತೆ ಕೇಳಿ. ಅವ್ರೂ ಬೆಚ್ಚ ಆತ್. ಈಗ ಹೈದನ ಶರೀರಕ್ಕೆ ಹಂಞಾ ಸುಖ ಆಗಿ ಅಲ್ಲಿಂದ ಹೋತು. ಆಚಾರಿ ಅಣ್ಣ ಬೊಳ್ಪುನ ಒಂಭತ್ತರ ಸುಮಾರಿಗೆ ಬಡ್ಡಡ್ಕಕ್ಕೆ ಬಂದ್ ನೆಲ್ತಿಲದ ಹೈದನ ಕತೆನೆಲ್ಲ ಗೌಡ್ರೊಟ್ಟಿಗೆ ಹೇಳಿ ವಿವರಿಸಿದೊ. ಬೊಳ್ಪುಗೇ ಹಕ್ಕಲೆನ ಬೆಡಿ ಇದ್ದವುಕೆಲ್ಲ ವಿಷಯ ಹೇಳಿಕಂಡೇ ಬಂದಿದ್ದೊ. ಆದರೆ ಮರಿ ಹಾಕಿದ ಹುಲಿನ ಎದ್‌ರ್ ಹಾಕಂಬುದು ಅದ್ ಸಾವುನೊಟ್ಟಿಗೆ ಆಡುವ ಆಟಂತ ಅವುಕೆ ಗೊತ್ತಿತ್ತ್. ಯಾವ ಒಬ್ಬನೂ ಕೆಳಗಿನ ಕಾನಕ್ಕೆ ಹೋಕೆ ಧೈರ್ಯ ಮಾಡ್‌ಕಿತ್ತ್‌ಲ್ಲೆ. ಅಪ್ಪಯ್ಯ ಗೌಡರಿಗೆ ಇದೊಂದು ಸಾಹಸಂತ ಹೇಳುವ ಬದಲ್ ಒಂದು ಖುಷಿನ ವಿಷಯ ಆಗಿತ್ತ್. ಮರಿ ಹಾಕಿದ ಹುಲಿ, ಅದರ ಸಂಸಾರ ನೋಡುದೇ ಅಪೂರ್ವ ಆಗಿತ್ತ್. ಗೌಡ್ರು ಆಗಲೇ ಕಾರ್ಯ ಸುರುಮಾಡ್ದೊ. ಸಡನ್ ಡೆತ್ ಬೆಡಿನ ಮುಟ್ಟಿ ಸರಿ ಉಟ್ಟೊಂತ ನೋಡಿಕಂಡ್, ಬೇಕಷ್ಟ್ ತೋಟೆನ ತೆಕಂಡ್ ಮನೆಂದ ಹೊರಟ್ ಬಾವ ದಾರಿಲಿ ರಾಮಣ್ಣ ನಾಯ್ಕರ್ ಮತ್ತ್ ಕೂಸಪ್ಪನವುಕೆ ವಿಷಯನ ಹೇಳಿ, ಹುಲಿನ ಸಂಸಾರ ನೋಡುವ ಆಸೆ ಒಂದು ಕಡೆ, ಜೀವನಕ್ಕೆ ಸವಾಲ್ ಹಾಕುವ ಹೆದ್ರಿಕೆ ಒಂದು ಕಡೆ. ಅರೆ ಮನಸ್ಸಲೇ ಅವಿಬ್ಬರೂ ಇವರೊಟ್ಟಿಗೆ ಬಂದೊ. ಗೌಡ್ರ ಬುಟ್ಟರೆ ಯಾರ ಕೈಲೂ ಬೆಡಿ ಇತ್ತ್‌ಲ್ಲೆ. ಆದರೆ ದೊಣ್ಣೆಗ

ಮಾತ್ರ ಕಡಿಮೆ ಇತ್ತ್‌ಲ್ಲೆ. ಇನ್ನೊಂದೂಂತ ಹೇಳಿರೆ ಗೌಡ್ರ ಒಟ್ಟಿಗೆ ಬಾಕೆ ಯಾರಿಗೂ ಹೆದ್ರಿಕೆ ಇತ್ತ್‌ಲ್ಲೆ. ಇವರ ಜೋಸ್ತಿಗಳ ಒಟ್ಟಿಗೆ ಎಲ್ಲವರ ಕೈಲಿ ಬಡಿಗೆ ಇತ್. ಗೌಡ್ರ ಪ್ರೀತಿನ ಸಡನ್ ಡೆತ್ ಹೊಟ್ಟೆ ತುಂಬಿಸಿಕಂಡಿತ್ತ್. ಒಟ್ಟು ಕೂಟ ಕೆಳಗಿನ ಕಾನಕ್ಕೆ ಎತ್ತಿತ್ತ್. ಕೆಳಗಿನ ಕಾನಕ್ಕೆ ಹೋದ ಜಾಗೆನ ನೆನ್ಪು ಇವುಕೆ ಇತ್. ನೆಲ್ತಿಲದಂವ ಹೇಳಿದ ಅಂದಾಜಿಂದ ಹುಲಿ ಇರುವ ಜಾಗ ಯಾದೂಂತ ಜಾಗೆ ಅಂದಾಜಿ ಮಾಡಿಕೆ ಸುಲಭ ಆತ್. ಆ ಜಾಗಕ್ಕೆ ಬಾಕನ, ಅವರ್ದ್ ಕಳ್ಳ ಹೆಜ್ಜೆ ಆಗಿತ್ತ್. ಒಟ್ಟಿಗೆ ಇದ್ದವರ ಹಿಂದೆಗೆ ಬುಟ್ಟು ಅವು ಒಬ್ಬನೇ ಮುಂದೆ ಮುಂದೆ ಹೋದೊ. ಹದ್ದ್‌ನ ಹಾಂಗೆ ಕಣ್ಣ್‌ನ ನೋಟ ಇಸಿಕಂಡ್, ಸೂಕ್ಷ್ಮಲಿ ಮೈಯೆಲ್ಲಾ ಕಣ್ಣು ಮಾಡಿಕಂಡ್ ಮುಂದೆ ಹೋದೊ. ಕೊಳ್ತ್ ಹೋದ ಮಾಸದ ವಾಸನೆಲಿ ಹೊಟ್ಟೆ ತೊಳ್ಸಿದ ಹಾಂಗೆ, ಕಕ್ಕಿಕೆ ಬಂದ ಹಾಂಗೆ ಆತಿತ್ತ್. ಅಂತೂ ಸಹಿಸಿಕಂಡೊ. ವಾಸನೆ ಬಂದರೂ ಹುಲಿ ಕಾಂಬಕೆ ಸಿಕ್ಕಿತ್ಲ್ಲೆ. ನಿನ್ನೆ ಒಬ್ಬ ಮನುಷ್ಯನ ಕಂಡ್ ಇವರ ಕಾಟನೇ ಬೇಡಾಂತ ಜಾಗೆನ ಬದಲಿಸಿಕಂಡಿರೊಕು. ಇನ್ನೂ ಹಂಞ ಮುಂದೆ ಹೋಕನ ಹುಲಿ ಮರಿಗ ಗುರುಗುಟ್ಟುದು ಕೇಳ್ತ್. ಮರಿಗಳ ಬೊಬ್ಬೆ ಕೇಳ್ಕನ ಹಿಂದೆ ಇದ್ದವುಕೆ ಮರ ಹತ್ತಿಕೆ ಹೇಳ್ದೊ. ಅದರ್ಲಿ ಆಚಾರ್ಯಂಗೆ ಮರ ಹತ್ತಿಕೆ ಸರಿ ಬಾತಿತ್ತ್‌ಲ್ಲೆ ಬಾಕಿ ಇದ್ದವು ಸರ ಸರಾಂತ ಮರ ಹತ್ತಿದೊ.

ಇವು ಜಾಗ್ರತೆಲಿ ಮುಂದೆ ಹೋಕನ ಒಂದು ಮರ ಬಿದ್ದ್‌ಕಂಡಿತ್ತ್. ಅದರ ಮೇಲೆ ಒಂದು ಜಾತಿನ ಬಳ್ಳಿ ಬೆಳ್ದಿತ್ತ್. ಆ ಬಳ್ಳಿ ದಪ್ಪಲಿ ಹಬ್ಬಿಕಂಡಿತ್ತ್. ಅದರ ಮೇಲೆ ಒಂದೊಂದೇ ಹೆಜ್ಜೆ ಇಟ್ಟ್‌ಕಂಡ್ ಭಾರಿ ಕಷ್ಟಲಿ ಮುಂದೆ ಹೋದೊ. ಮೂವತ್ತು ಗಜ ದೂರಲಿ ಒಂದು ಬಲ್ಲೆ ಹಂದಾಡಿದ ಹಾಂಗೆ ಕಂಡತ್. ಅಲ್ಲಿ ಹುಲಿ ಮರಿಗ ಇರೊಕು. ಮರಿಗಳ ಅವ್ವ ಎಲ್ಲಿಯೋ ಬೇಟೆಗೆ ಹೋಗಿರೊಕೂಂತ ನೆನೆಸಿಕಂಡೊ. ಹಾಂಗೆ ಯೋಚನೆ ಮಾಡ್ದ್ ತಪ್ಪಾಗಿತ್ತ್. ಎರಡ್ ಹೆಜ್ಜೆ ಮುಂದೆಗೆ ಕಾಲ್ ಇಸಿ ಆಕನ, ಒಮ್ಮೆಗೆ ಹುಲಿ ಅವರ ಎದುರಿಗೆ ಬಾತ್. ಅವರ ಉಸಿರ್‌ನ ನಿಲ್ಲಿಸುವಷ್ಟ್ ಭಾರಿ ಗರ್ಜನೆ ಮಾಡ್ತ್. ಹುಲಿ ಅವರ ಮುಂದೆನೇ ಕಂಡುಟ್ಟುಂತ ಅವುಕೆ ಆಗಲೆ ಗೊತ್ತಾದ್ದ್. ಮಕ್ಕಳ ಉಳಿಸಿಕಣಿಕೆ ಎಂತ ಸಂದರ್ಭನ ಎದುರಿಸಿಕೂ ಸಿದ್ದ ಆಗಿತ್ತ್ ಆ ಮರಣ ದೇವತೆ.

ತೂಗುವ ಉಯ್ಯಾಲೆನ ಹಾಂಗೆ ಹಬ್ಬಿದ್ದ ಬಳ್ಳಿಲಿ ಇವುಕೆ ಸರಿಯಾಗಿ ನಿಲ್ಲಿಕೂ ಆತಿತ್ತ್‌ಲ್ಲೆ. ಗುರಿ ಇಸಿ ಗುಂಡು ಹಾರ್ಸೊಕಾರೆ, ಸರಿಯಾದ ಆಧಾರ ಬೇಕಾಗಿತ್ತ್. ಇವರ ಮೇಲೆ ಹಾರಿಕೆ ತಯಾರ್ ಮಾಡ್ತಾ ಉಟ್ಟುಂತ ಅದರ ನಡವಳಿಕೆಂದ ಇವುಕ್ಕೆ ಅರ್ಥ ಆಗಿತ್ತ್. ಧೈರ್ಯ ಕಳ್ಕಂಡರೆ ಹುಲಿಗೆ ಬಲಿ ಆದು ತಪ್ಪ್‌ತಿತ್ತ್‌ಲ್ಲೆ. ಗುಂಡು ಹೊಡೆಯಕೆ ಸರಿ ನಿಂತ್‌ಕಣೊಕಾತ್. ಹೆಚ್ಚ್ ಯೋಚನೆ ಮಾಡಿಕೆ ಪುರುಸೊತ್ತೇ ಇತ್ತ್‌ಲ್ಲೆ. ಎದೆಮಟ್ಟಲಿ ಇದ್ದ ಹಬ್ಬದ ಬಳ್ಳಿನ ಆಧಾರಕ್ಕೆ ಹಿಡ್ಕಂಡ್, ಒಂದೇ ಕೈಲಿ ಬೆಡಿ ಹಿಡ್‌ಕಂಡ್, ಗುರಿ ಹಿಡ್ದೊ. ಅದು ಹೆಂಗೆ ಗುಂಡು ಹೊಡ್ದೊಂತ ಅವ್ರುಕ್ಕೆ ಮತ್ತೆ ವಿವರಿಸಿಕೆ ಕಷ್ಟ ಆದೆಗಡ. ಒಂದರ ಹಿಂದೆ ಇನ್ನೊಂದು, ಒಂದು ಹುಲಿನ ಹಣೆಗೆ ಇನ್ನೊಂದು ಎದೆಗೂಡಿಗೆ, ಹುಲಿ

ಎತ್ತರಕ್ಕೆ ಹಾರಿ ಭಾರೀ ಆರ್ಭಟೆ ಹೊಡ್ದ್ ನೆಲಕ್ಕೆ ಬಿದ್ದೇ ಹೋತ್. ಶಾಶ್ವತ ಆದ ನಿದ್ದೆಗೆ ಜಾರಿತ್. ಈಗ ಗೌಡ್ರ ಒಟ್ಟಿಗೆ ಬಂದಿದ್ದವರ ಸ್ಥಿತಿ ಹೇಂಗುಟ್ಟಂತ ತಿರುಗಿ ಹೋಗಿ ನೋಡಿರೆ, ಹುಲಿ ಸುದ್ದಿ ತಿಳಿಸಿಕೆ ಬಂದ ಆಚಾರ್ಯರ್, ಹುಲಿನ ಗರ್ಜನೆ ಒಟ್ಟಿಗೆ ಗುಂಡುನ ಶಬ್ದ ಕೇಳಿ ಥರ ಥರ ನಡ್ಗಿ ಮರನ ತಬ್ಬಿಕಂಡೇ ಜಾರಿ ಅವರ ಎದೆನ ಚರ್ಮ ಸುಲ್ದ್ ಹೋಗಿತ್. ಥರ ಥರ ನಡುಗಿಕಂಡೇ ಇದ್ದೊ. ಎದೆಲಿ ರಕ್ತದ ಹನಿಗ, ಹಣೆಲಿ ಬೆವರು, ಮುಖಲಿ ಸಾಯಕೆ ಹಕ್ಕಲೆ ಆದವರ ಹೆದರಿಕೆ ಇತ್ ಕಣ್ಣ್‌ಲಿ. ವಿಚಿತ್ರ ಆದ ನೋವು ಎದ್ದ್ ಕಾಂಬತಿತ್. ಆಚಾರಿ ಅಣ್ಣ 'ಅಣ್ಣನ ಬೆಡಿಲಾ, ಅಣ್ಣನ ಈಡ್‌ಲಾ ಇತ್‌ಜಂಟ ಎಂಕುಲೆ ಏರನೆಲಾ ಆಸೆ ಇಜ್ಜಾಂಡ್' ಎಂದ್ ಹೇಳ್ತ್. ಅವರ ಈಡ್‌ನ ಶಬ್ದಕ್ಕೆ ಕೆಳಗೆನ ಬೈಲ್‌ಂದ ಸುಮಾರು ಇಪ್ಪತ್ತು ಜನ ಕತ್ತಿ ದೊಣ್ಣೆ ಹಿಡ್‌ದ್‌ಕಂಡ್ ಓಡಿ ಬಂದೊ. ಅವರ ಆಸೆಗೆ ಬೇಕಾಗಿ ಹುಲಿನ ಬಡಿಗೆಲಿ ಕಟ್ಟಿ ಆಲೆಟ್ಟಿಗೆ ತಾವ ಅಂದಾಜ್ ಮಾಡಿದೊ. ಅವು ಆ ಕೆಲಸ ಮಾಡ್ಕನ, ಇವುನೂ ಶೇಷಪ್ಪಾಚಾರಿನೂ ಕಾಲಿಗೆ ಅಡ್ಡ ಇದ್ದ, ಬಳ್ಳಿ ಮುಳ್ಳುಗಳ್ನ ಕತ್ತಿಲಿ ಕಡ್ಕಂಡ್, ಕಷ್ಟ ಪಟ್ಟ್ ಹುಲಿಮರಿಗ ಇರುವ ಜಾಗೆಗೆ ಹೋದೊಗಡ. ಹುಲಿ ಮರಿಗ ಒಂದರ ಮೇಲೆ ಇನ್ನೊಂದು ಬಿದ್ದ್‌ಕಂಡ್ ಮೂರು ಹುಲಿ ಮರಿಗ ಆಟ ಆಡಿಕಂಡ್ ಇದ್ದೊ. ಅವ್ಕಕೆ ಇನ್ನೂ ಗೊತ್ತಾತ್‌ಲ್ಲೆ. 'ಅವು ಅನಾಥ ಆಗೋಳಾಂತ, ಇನ್ನು ಹಾಲು ಕೊಡುವ ಅವ್ವ ಇಲ್ಲೇಂತ'. ಆದರೆ ಮರಿಗ ಅವರ ಜಾತಿ ಸ್ವಭಾವ ಬುಟ್ಟವೆನೋ? ಕಚ್ಚಿಕೆ ಪರ್ಚಿಕೆ ಬಂದವೆ. ಆದರೆ ಆ ಸ್ಥಿತಿಲಿ ಅದರ ಅಲ್ಲೇ ಬುಟ್ಟು ಹೋಕೆ ಅವುಕೆ ಮನಸ್ ಬಾತ್‌ಲ್ಲೆ. ನೋಡಿಕೆ ಅವ್ವ ಇಲ್ಲದೆ ಮರಿಗ ಸತ್ತ್ ಹೋವೊಂತ ಅನ್ನಿತ್. ಕವಣೆ ಕೋಲು ಮಾಡಿ ಅದರಲ್ಲಿ ಮರಿಗಳ ಕುತ್ತಿಗೆ ಹಿಡ್ದ್ ಗೋಣಿಗೆ ಹಾಕಿ ಆಲೆಟ್ಟಿಗೆ ತಂದೊ. ಜನ ಎತ್ತಿದೊ. ಅದರ ಎಲ್ಲವುಕ್ಕೆ ನೋಡಿಕೆ ಆಲೆಟ್ಟಿಲಿ ಇಸಿದೊ. ಮರಿಗಳ ಗೋಣಿಂದ ಬುಟ್ಟ ಹಾಂಗೆ ಇನ್ನೂ ಏಳಿಕೆ ಬತ್ತದ ಹುಲಿನ ಮೊಲೆ ಚೀಂಪಿಕೆ ಸುರು ಮಾಡ್ದೊ. ಅಲ್ಲಿ ತುಂಬ ಜನ ಸೇರಿದ್ದೊ. ಹುಲಿನ ಹುಲಿ ಮರಿಗಳ ನೋಡಿಕೆ. ಜಮೀನ್ದಾರ್‌ಗ, ಊರ್‌ನ ಪಟೇಲ್‌ರ್ ಸೇರಿ ಸುಮಾರ್ ನಾಲ್ಕುನೂರು ಜನ ಸೇರಿದ್ದೊಗಡ. ಆಲೆಟ್ಟಿ ಗ್ರಾಮದ ಸೇವಾ ಸಂಘಲಿ ಮುಖ್ಯ ವ್ಯವಸ್ಥಾಪಕ ಆಗಿದ್ದ ಸುದಾಮಣ್ಣಂಗೆ 3 ವರ್ಷ ಪ್ರಾಯಗಡ. ಅವರ ಅಪ್ಪ ನಾರಾಯಣ ಮಣಿಯಾಣಿಯವು – ಹುಲಿ, ಮತ್ತೆ ಹುಲಿ ಮರಿಗಳ ಮಂಜಂಗೆ ತೋರಿಸಿಕೆ ಅವರ ಹೋಟೆಲ್‌ಲಿ ರಾತ್ರಿ ಮಲ್ಗಿಸಿಕಂಡಿದ್ದೊಗಡ. ಮತ್ತೆ ಎಬ್ಬಿಸಿ ಹುಲಿನ ಅವರ ಕೈಲಿ ಅವರಪ್ಪ ಮೈ ಪೂಜಿಕೆ ಬುಟ್ಟಿದ್ದೊಗಡ. ಈ ಸಂಗತಿನ ಸುದಾಮಣ್ಣ ಈಗಲೂ ನೆನ್ಸಿಕಂಡವೆ.

ಅವ್ವನ ಕೊಂದದ್ದರ್‌ಂದ ಮಕ್ಕ ಗತಿಯಿಲ್ಲದವು ಆಗೊಳೊ. ಅದರನೂ ಸಾಂಕೋಕಾದ್ ಕೊಂದವನ ಹೊಣೇಂತ ಗ್ರಹಿಸಿ, ಮೂರು ಮರಿಗಳ ಗೋಣಿಗೆ ತುಂಬಿಸಿಕೆ ಅವು ಶೇಷಪ್ಪಾಚಾರ್ಯರುಗೆ ಹೇಳಿದೊ. ಅಷ್ಟೊತ್ತಿಗೆ ಅಲ್ಲಿದ್ದ ಕಲ್ಲೆಂಬಿ ಶಿವರಾಮನವರ ಅಪ್ಪ ದಿ| ಕಲ್ಲೆಂಬಿ ದೇವಪ್ಪ ಗೌಡ್ರು ಹಟ ಮಾಡಿ ಒಂದು ಮರಿನ ಕೇಳಿಕೊಂಡು

ತೆಕೊಂಡೊಗಡ. ಉಳ್ದ ಎರಡು ಮರಿಗಳ ಗೋಣಿಗೆ ತುಂಬಿಸಿಕೊಟ್ಟೊ. ಯಾರೊ ಒಬ್ಬ ಹಿಡ್ಕಣಿಕೆ ಸೇರ್ದೊ. ಹಾಂಗೇ ಬಡ್ಡಡ್ಕದ ಮನೆಗೆ ಬಂದ್ ಮುಟ್ಟಿದೊ. ಒಟ್ಟಿಗೆ ಹುಲಿ ಚರ್ಮನೂ, ಹಲ್ಲುಗಳ ಮತ್ತ್ ಉಗುರುಗಳ ತೆಕಂಡ್ ಬಂದಿದ್ದೊ. ಬಂದ್ ಇದ್ದ ಕೋಣೆಲಿ ಗೋಣಿನ ಬಾಯಿ ತೆಗ್ದ್ ಮರಿಗಳ ಹೊರಗೆ ಬುಟ್ಟೊ. ಹೊಟ್ಟೆ ಹಸ್ದು ಬೊಬ್ಬೆ ಹಾಕ್‌ತಿದ್ದೋ. ಹಾಂಗೆ ಒಂದು ಪಾತ್ರೆಲಿ ಹಾಲ್ ತಂದ್ ಅವರ ಬಾಯಿನ ಅದಕ್ಕೆ ಒತ್ತಿ ಹಿಡ್ದಾಕನ ಅವುಕೆ ಹಾಲಿನ ರುಚಿ ಕುಶಿಯಾಗಿರೊಕು, ಅಂತೂ ದನದ ಹಾಲ್‌ನ ಅನುಭವ ಆತ್. ಒಂದೆರಡ್ ದಿನಲಿ ಹಾಲಿಗೆ ಹಂಞ ತೆಳಿ ಸೇರಿಸಿ ಕೊಡಿಗೆ ಸುರು ಮಾಡಿದೊ. ಅದೂ ಅಭ್ಯಾಸ ಆತ್. ಬೆಚ್ಚಂಗೆ ಕೋಣೆಲಿ ಅವರ ಮಲ್ಗಿಸುತ್ತಿದ್ದೊ. ಹೊರಗೆ ಬುಟ್ಟರೆ, ನಾಯಿಗಳೂ ಹುಲಿ ಮರಿಗಳೂ ಲಟಾಪಟಿ ಮಾಡಿಕಂಬೋಂತ ಹೆದ್ರಿಕೆ ಇತ್ತ್. ಮನೆಲಿದ್ದ ಕೊತ್ತಿಗ ನಮ್ಮ ಹಾಂಗೆ ಇರುವ ಇವು ಯಾರಪ್ಪಂತ ನೋಡ್ತಿದ್ದೊ. ಹಟ್ಟಿನ ದನಂಗ ಒಂದೆರಡ್ ದಿನ ಮೂಕುನ ಹೊಳ್ಳೆ ಅರಳಿಸಿ ಬಳ್ಳಿಂದ ಬಿಚ್ಚಿ ಓಡಿಕೆ ನೋಡ್ತಿದ್ದೊ. ಮನೆ ಹಕ್ಕಲೆನ ಹುಲಿ ಮರಿಗಳ ಬೊಬ್ಬೆಗೆ ಗದ್ದೆಲಿ ಹೂಡಿಕೆ ಕಟ್ಟಿದ ಎತ್ತ್‌ಗ ಪೆರ್ಚಿ ಆತಿದ್ದೊ. ನಂಗೆನೂ ಹುಲಿಗ ಮರಿಗಳ ಮೇಲೆ ಪ್ರೀತಿ ಇತ್ತ್‌ಗಡ. ನಾ ಆಗ ಸಣ್ಣ ಪ್ರಾಯ. ಅಂದರೆ ನಾಲ್ಕ್-ಐದು ವರ್ಷ ಆಗಿರ್ದು. ಮರಿಗಳ ಮುಟ್ಟಿ ಪೂಜುತಿದ್ದದ್ ನಂಗೆ ನೆನ್ಪುಟ್ಟು. ಕ್ರಮೇಣ (ನಿಧಾನಲಿ) ದನಗಳಿಗೆ, ನಾಯಿಗಳಿಗೆ ಹುಲಿಮರಿಗಳ ವಾಸನೆ ಅಭ್ಯಾಸ ಆಗಿ ಹೋತ್. ಹುಲಿ ಮರಿಗಳ ನೋಡಿಕೆ ದಿನಾ ಮನೆಗೆ ಜನ ಬಾತಿದ್ದೊ. ಮನೆನೇ ಮೃಗಾಲಯದ ಹಾಂಗೆ ಆತ್. ಸುದ್ದಿ ಕೇಳಿ ನೆಂಟರ್, ದೂರದ ಊರ್‌ನವು, ಊರೊಳಗೆನವು. ಬಾಕನ ಮಕ್ಕಳ ಕರ್ಕಂಡ್ ಅಪ್ಪಂದರ್ ಎಲ್ಲಾ ಬಾತಿದ್ದೊ. ಕೆಲವು ಜನ ಉಳ್ಕಂಬತಿದ್ದೊ. ಕೆಲವು ಮಕ್ಕ ಸಣ್ಣ ಸಣ್ಣ ಸಾಮಾನ್‌ನ ಮನೆಂದ ತಕಂಡೂ ಹೋತಿದ್ದೊ. ಎಲ್ಲದರ ತಾಳಿಕಂಡಿದ್ದ್, ಮರಿಗ ಹಂಞ ದೊಡ್ಡದಾದ ಮೇಲೆ ಮೈಸೂರಿಗೆ ಮೃಗಾಲಯಕ್ಕೆ ಕೊಡೊಕೂಂತ ನೆನ್ನಿದೊ. ಆದರೆ ಎಲ್ಲನೂ ನಾವು ನೆನ್ನಿದಾಂಗೆ ಆದುಲ್ಲೆ. ಇಪ್ಪತ್ತೇ ದಿನಲಿ, ಎರಡು ಹುಲಿಮರಿಗಳ ಪ್ರಾಣ ಹೋತು. ಕಲ್ಲೆಂಬಿಗೆ ಕೊಟ್ಟ ಒಂದು ಮರಿ ಅದರ್‌ಂದ ಮುಂದೆನೇ ಸತ್ತಿತ್ತ್‌ಗಡ. ತೆಳೆಲಿ ಎಲ್ಲಿಯೋ ಉಪ್ಪು ಸೇರಿಕೊಂಡಿರೊಕು, ಉಪ್ಪು ಒಗ್ಗದ ಮರಿಗಳ ಎಳ್ತ್ ಜೀವಕ್ಕೆ ಉಪ್ಪು ವಿಷ ಆಗಿರೊಕು. ಮರಿಗ ಸತ್ತದಿನ ಮನೆಲಿ ಎಲ್ಲವುಕ್ಕೆ ತುಂಬಾ ಬೇಜಾರ ಆಗಿ ಯಾರಿಗೂ ಅನ್ನ ನೀರ್ ಮುಟ್ಟಿಕೆ ಮನ್‌ಸ್ಸ್ ಬಾತ್‌ಲ್ಲೆ. ಒಂದು ಹುಲಿ ಕುಟುಂಬ ಅವರ ಕಣ್ಣ ಮುಂದೆನೇ ಹಾಳಾಗಿ ಹೋಗಿತ್ತು. ಮನಸ್ಸಿಗೆ ಬಾರಿ ಬೇಜಾರ ಆಗಿತ್ತ್‌ಗಡ.

ಆದರೆ ಒಂದು ಸುಮಾರ್ 45 ಮನೆಯವುಕ್ಕೆ ಭಾರಿ ಉಪಕಾರ ಆತ್. ಅವರ ಹಟ್ಟಿಂದ ಸುಮಾರು ನಡೆ ದನಂಗ ಹುಲಿನ ಬಾಯಿಗೆ ಹೋಗಿದ್ದೊ. ಮನುಷ್ಯರೂ ಹೊರಗೆ ಬಾಕೆ ಹೆದರಿ ಮನೆ ಬಾಗಿಲ್ ಹಾಕ್‌ಣ್‌ತಿದ್ದೊಗಡ. ಈ ಹುಲಿಹೊವ್ ಕಳಗಿಂದ ಹಿಡ್ದ್ ನಾಕೋರ್ಡು ನವುಗೆ ಸನ ಹುಲಿನ ಕಾಟ ಹೆಚ್ಚಾಗಿತ್ತ್. ಮರಿ ಹಾಕಿದ ಹುಲಿಗೆ

ಹೊಟ್ಟೆ ಹಸಿಯೊದು ಹೆಚ್ಚಿಗೆನೆ ಆಗಿತ್ತ್. ಮರಿಗಳಿಗೆ ತಿಂಬಕೂ ಆಕು. ಹಾಂಗಾಗಿ ಹುಲಿ ಇದ್ದಲ್ಲಿ ಆ ರೀತಿಲಿ ಕಕ್ಕಿಕೆ ಬರುವ ಹಂಗೆ ವಾಸನೆ ಬಾತಿದ್ದದ್. ಆ ಸಮಯಲಿ ಆಲೆಟ್ಟಿಲಿ ಸುಮಾರ್ 8 ಮುಸ್ಲಿಂ ಅಂಗಡಿಗ ಇದ್ದೊಗಡ. ಅವುಕೆಲ್ಲ ಕುಷಿಯೋ ಕುಶಿ. ಎಲ್ಲವೂ ನೋಡಿಕೆ ಬರುವವೆ. "ಅಪ್ಪ" ಹಾಕಿ ಹುಲಿನ ಹಿಡಿಯೊಮ್ಮೊಂತ ಅಲ್ಲಿನವು ಹೇಳ್‌ತಿದ್ದೊಗಡ. ಹಾಂಗೇಂತ ಹೇಳ್ರೆ ಕಾಡಿನ ಒಂದು ದನನ ಕಟ್ಟಿ ಹಾಕಿ ಬೇಟೆಗಾರರ್ ಮರೆಲಿ ಇದ್ದ್ ಕದ್ದ್ ಕುದ್ದ್‌ಕಂಡ್, ದನ ಕರಿಯಕನ ಹುಲಿಗೆ ದನದ ವಾಸನೆನೂ ಬಂದ್, ದನನ ಹಿಡಿಯಕೆ ಬಾಕನ ಗುಂಡು ಹೊಡೆಯೊದು. ಆದರೆ ಅಲ್ಲಿಗೆ ಹೋಕೆನೇ ಯಾರಿಗೂ ಧೈರ್ಯ ಬಾತಿತ್ತ್‌ಲ್ಲೆ. ಹಾಂಗೆ ಕಾರ್ಯ ಮಾತ್‌ಲೇ ಮುಗ್ತಿದ್ದ್ ಹುಲಿ ಮತ್ತು ಮರಿಗಳ ಆಲೆಟ್ಟಿಗೆ ತಂದ ದಿನ ಮೊರಂಗಲ್ಲ್ ಹುಕ್ರಪ್ಪ ರೈಗ ಆಗ ಕಟ್ಟಿಸಿದ್ದ ಸಮಾಜ ಸೇವಾ ಸದನ ಇದ್ದ್, ಅದರ ಎದುರು ಈ ಹುಲಿನ ಮಲ್ಗಿಸಿ ಬಂದವ್ಕೆಲ್ಲ ಚಾಯ ತಿಂಡಿ ಹಂಚಿದೊಗಡ. ಅದರ ನೆನ್ನಿ ಅಪ್ಪಯ್ಯ ಗೌಡ್ರಿಗೆ ನಾ ಎಷ್ಟೊ ಮನೆಯವುಕೆ ಉಪಕಾರ ಮಾಡ್ದೆ ಎಂಬ ತೃಪ್ತಿನೂ ಆತಿತ್ತ್‌ಗಡ. ಕುಡೆಕಲ್ಲು ದೇವಯ್ಯ ಗೌಡ್ರ ಮಂಞ ಆಗಿ ಇಷ್ಟೊಂದು ಸಾಧಿಸಿಕೆ ಆತಲ್ಲ, ಮಹಾವಿಷ್ಣುನ ಕೃಪೆನೂ, ಪಂಚಭೂತಗಳ ಆಶೀರ್ವಾದನೂ ಇತ್ತಲ್ಲಂತ ನೆನೆಸಿಕೊಂಡೊಗಡ.

18

ಹುಲಿ ಬಾತ್ ಜ್ವರ ತಾತ್

ಆಲೆಟ್ಟಿ ಶಗ್ರಿತ್ತಾಯರ್ ನಡ್ಸ್‌ತಿದ್ದ, ಅಪ್ಪಯ್ಯ ಗೌಡ್ರ ಒಟ್ಟಿಗೆ ಬಾತಿದ್ದ ಚೋಯಂಬಣ್ಣ ಶಿಕಾರಿ ಉದ್ದಕ್ಕೂ ಅವರ ನೆರಳಿನ ಹಾಂಗೆ ಒಟ್ಟಿಗೆ ಇದ್ದವು. ಒಂದು ಸರ್ತಿ ಆಲೆಟ್ಟಿನ ನೆಲ್ಲಿಕೋಡಿಗೆ ಮೇಯಕೆ ಹೋಗಿದ್ದ ಅವರ ಎರಡ್ ಎತ್ತ್‌ಗ ಮತ್ತ್ ಒಂದು ಹಸು ಹಟ್ಟಿಗೆ ಬಾತ್‌ಲ್ಲೆಗಡ. ಅವರ್ನ ಹುಡ್ಕಿಕೆ ಹೋದ ಚೋಯಂಬುಗೆ ಹುಲಿ ಕಚ್ಚಿ ಕೊಂದ ಸ್ಥಿತಿಲಿ ಮೂರು ನಡೆಗಳೂ ಕಾಂಬಕೆ ಸಿಕ್ಕಿದ್ದೊ. ಬೇಸಾಯ ಮಾಡ್ತಿದ್ದ ಅವರ ಆಸ್ತಿ ಹುಲಿ ಪಾಲಾದಾಂಗೆ ಆತ್. ಅವರ ಮಕ್ಕಳ್‌ಂದಲೊ ಹೆಚ್ಚಿಗೆ ಅವು ದನಗಳ ಪ್ರೀತಿ ಮಾಡ್ತಿದ್ದೊ. ದನಗಳ ಕೊಂದದ್ದಕ್ಕೆ ಆ ಹುಲಿನ ಕೊಲ್ಲುದೇ ಸರೀಂತ ಎಂಬ ಅಭಿಪ್ರಾಯಕ್ಕೆ

ಬಂದ್ ಅವು ಗೌಡ್ರ ಹಕ್ಕಲೆ ಬಂದಿದ್ರೊ. ಅಂವ ದನಗಳ ವಿಷಯ ಎಲ್ಲ ಹೇಳಿ ಮುಗ್ಸಿ ಗೋಳಾಡಿತ್ "ಆಯಣ್ಣಾ ಎಂಡೆದೆಲ್ಲಾಂ ಪೋಯಣ್ಣ" (ನನ್ನ ಸರ್ವಸ್ವನೂ ಹೋತ್") ಇವು ಅವನ ಸಮಾಧಾನ ಮಾಡಿಕೆ ಸುರು ಮಾಡಿತಿಲ್ಲೆ. ಅದರ ಬದಲ್ ಕೋವಿನ ಒಮ್ಮೆ ನೋಡಿಕಂಡೊ. ಚೀಲಕ್ಕೆ ಬೇಕಾಗುವಷ್ಟು ತೋಟೆ ತುಂಬಿಸಿಕಂಡ್, ಇಬ್ಬರೂ ಮನೆಂದ ಹೊರಟೊ. ಇವಿಬ್ಬರೂ ದಾರಿಲಿ ಹೋಕನ ಪಿಂಡಿ ಬನ ಮುತ್ತಪ್ಪ ಗೌಡರ್ ದಾರಿಲಿ ಬಾಕನ ಸಿಕ್ಕಿದೋ. ವಿಷಯ ಹೇಳ್ಕನ "ಈಗ ಬನ್ನೆ" ಎಂದು ಓಡಿದೋ. ಅವರ್ ಕೈಲಿ ಬೆಡಿ ಹಿಡ್ಕಂಡಿದ್ದೊ. ಯಾವ ಕಾರ್ಯಕ್ಕೂ ಮೂರು ಜನ ಹೋಕೆ ಆಗದ್ ಅಂತ ನಮ್ಮ ಶಾಸ್ತ್ರ.

ನೆಲ್ಲಿಕೋಡಿ ಗುಡ್ಡೆಗೆ ಬಾಕನ ಖಂಡಿ ಭಾರ ಹೊರುವ ಸತ್ತ ದನದ ಶರೀರ ಕಂಡತ್. ಭಾರಿ ಬೇಸರ ಆತಿತ್ತ್ ನೋಡಿಕೆ. ಹಂಞ ಮುಂದೆ ಹೋಕನ ಇನ್ನೊಂದು ಎತ್ತ್‌ನ ಜೀವ ಹಾಂಗೇ ಬಿದ್ದ್‌ಕಂಡಿತ್ತ್. ಅದ್ ಕಳ್ದ್ ಹಸುನ ಜೀವ ಬಿದ್ದದರ ನೋಡ್ದೊ. ಎರಡ್ ಅಲ್ಲರೆ ಮೂರು ಹುಲಿಗ ಈ ಕಾರ್ಯದ ಹಿಂದೆ ಒಳೊಂತಾತ್. ಚೋಯಂಬುಗೆ ಎರಡು-ಮೂರು ದಿನಂದ ಜ್ವರ ಮತ್ತೆ ಸುಸ್ತು ಇತ್ತ್‌ಗಡ. ಹಂಗಾಗಿ ನೀವಿಬ್ಬರೂ ಮರ ಹತ್ತಿ. ಮರದ ಕೊಂಬೆಲಿ ಕುದ್ದ್ ಗುಂಡು ಹೊಡಿನೀಂತ ಹೇಳ್ದೊ. ಮುತ್ತೇ ಗೌಡ್ರು ಅವರ ಬೆಡಿಗೆ ಹುಲಿ ಸಿಕ್ಕಿಯೇ ಸಿಕ್ಕಿದೇಂತ ಕುಶಿಲಿ, ಮರಕ್ಕೆ ಹತ್ತಿ ಒಳ್ಳೆ ತಯಾರಾದೊಗಡ. ಆದರೆ ಚೋಯಂಬುನಂಥ ಜ್ವರದವನ ನೆಲದ ಮೇಲೆ ಬುಟ್ಟು ಅಪ್ಪಯ್ಯ ಗೌಡ್ರಿಗೆ ಮರ ಹತ್ತಿಕೆ ಮನ್ಸ್ ಬಾರದೆ ಹುಲಿಗಳ ಎದುರೆದುರೇ ಕೊಲ್ಲೊಕೂಂತ ಮನಸ್ಸ್ ಇದ್ದ ಚೋಯಂಬುನ ಹಠಂದಾಗಿ ಅವನ ಒಟ್ಟಿಗೆ ಒಂದು ಗಿಡ್ಡೆ ಬಲ್ಲೆಲಿ ಅಡಂಗಿ ಕುದ್ದೊ. ಎಷ್ಟ್ ಹುಲಿಗ ಒಳೋಂತ ಗೊತ್ತಿಲ್ಲದ್ದರ್‌ಂದ ಅಡಂಗಿ ಕುದ್ರೊಕಾತ್. ನಡು ಮಧ್ಯಾಹ್ನದ ಹೊತ್ತು ಪರ ಪರ ಸದ್ದ್ ಕೇಳಿ ದನ ಬಿದ್ದಲ್ಲಿ ಕಣ್ಣ್ ಹಾಕ್‌ಕನ ಹುಲಿ ಒಂದು ಇಳ್ಕಂಡ್ ಬರ್‍ತಾ ಉಟ್ಟು. ಭಾರೀ ಗಾತ್ರದ ಆ ಹುಲಿ, ಚರ್ಮಲಿ ಬಿಳಿ, ಕಪ್ಪು, ಕೆಂಪು ಪಟ್ಟಿಗಳ ಚಿತ್ರ ಇತ್ತ್. ಅಂತ ಹುಲಿನ ನಮ್ಮಲ್ಲಿ "ಮಡಲ್ ಬಲಿಪ್ಪ" ಎಂದ್ ಹೇಳುವೆ. "ಇದರ ನೋಡಿರೇ ಜ್ವರ ಬಾದು, ಅಡಂಗಿ ಕುದ್ದ್‌ಕಂಡ್ ಗುಂಡು ಹಾರ್‍ಸುವಾಂಗೆ ಇಲ್ಲೆ. ಚೋಯಂಬುನ ಕೈ ಹಿಡ್ದು ಆ ಗಿಡ್ಡೆಂದ ಹೊರಗೆ ಇಬ್ಬರೂ ಬಂದೊ. ಹುಲಿ ಇವರ ಸರಿಯಾಗಿ ನೋಡಿತ್ತ್. ಒಂದ್ ಕ್ಷಣ ತಡ ಮಾಡ್ರೆ ನಮ್ಮ ಇಬ್ಬರ ಉಳ್ಸಿಕಿಲ್ಲೆಂತ ಸರಿಯಾದ ಗುರಿ ನೋಡಿ ಗುಂಡು ಹಾರ್‍ಸಿದೊ. ಗೌಡ್ರು ಬಿದ್ದ ಹುಲಿನ ಹಕ್ಕಲೆಗೆ ಹೋಕೂಂತ ಇರ್ಕನ ಚೋಯಂಬ "ಓ ದೇವರೇ" ಎಂದ್ ಬೊಬ್ಬೆ ಹಾಕಿತ್. ಹಿಂದೆ ತಿರ್‌ಗಿ ನೋಡಿರ ಗಡ ಗಡ ನಡ್ಗಿಕಂಡ್ ಮಾತಾಡಿಕೆ ಸ್ವರ ಬಿದ್ದು ಹೋದ್ದರ್‌ಂದ ಅವನ ಕೈ ಬೆರಳ್ ಮುಂದಗೆ ತೋರ್‍ಸಿತ್. ಅತ್ತ ನೋಡಿರೆ ಇನ್ನೊಂದು ಹುಲಿ ಕಣ್ಣ್ ಕೆಕ್ಕರಿಸಿಕಂಡ್ ಕ್ಷಣಲಿ ಗುರುಗುಟ್ಟಿಕಂಡ್ ಬಾತ್. ಗೌಡ್ರು ಬೆಡಿನ ಮುಂದೆಗೆ ಒಡ್ಡಿ ಅದರ ನೆತ್ತಿಗೆ ಗುಂಡು ಹೊಡ್ದೊ. ಅದೋ ಭಯಂಕರ ಹುಲಿ. ಗುಂಡು ತಾಂಗಿಕೆ ಮುಂದೆನೇ ಮೇಲೆಗೆ ಹಾರಿ ಬುಟ್ಟು ತಪ್ಪಿಸಿಕಂಡ್ತ್. ಇವು ಅತ್ತ

ಇತ್ತ ನೋಡದೆ ಬಲ್ದಿಗೆ ಹಾರ್‍ದೊ. ಹುಲಿನ ಅಡಿಗೆ ಸಿಕ್ಕಿಕೆ ಆಗದೂಂತ. ಬಲಕಾಲ್ ನೆಲಕ್ಕೆ ತಾಂಗಿಕೆ ಮುಂದೆನೇ ಪಿಕ್ಕಾಸ್‌ನಂತ ದೈನ ಕುತ್ತಿ ಪಾದಂದ ಮೇಲೆ ಬಾತ್. ನೆತ್ತರ್ ಹಾರ್‍ತ್ ಆತಿದ್ದ ಬೇನೆನ ಸಹಿಸಿಕಂಡ್, ಹುಲಿನ ನೋಡ್ದೊ. ಗುಂಡ್‌ನ ಪೆಟ್ಟ್‌ಂದ ತಪ್ಪಿಸಿಕಂಡ್ ಹಾರ್‍ದ ಹುಲಿ ಅದು ಅಡ್ಡ ಬೀಳದಾಂಗೆ ಜಾಗ್ರತೆ ಮಾಡಿತ್ತ್. ಗುಂಡು ಹಾರ್‍ಸಿದ್ ಈ ಮನುಷ್ಯಂತಾ ಗೊತ್ತಾಗಿ ಗುರುಗುಟ್ಟಿಕಂಡ್ ಗೌಡ್ರ ಮೇಲೆ ಹಾರಿಕೆ ಬಾತ್. ಕಾಲ್ ನೋವುಂದ ಪ್ರಾಣ ಮುಖ್ಯಾಂತ ಅಂದ್‌ಕಂಡ್ ಒಂದರ ಹಿಂದೆನೇ ಇನ್ನೊಂದು ಗುಂಡು ಹಾರ್‍ಸಿದೊ. ಈಸರ್ತಿ ಮೇಲೆಗೆ ಹಾರ್‍ಕನ ಹುಲಿನ ಜೀವದ ಜಾಗೆಗೆ ಎರಡ್ ಗುಂಡುಗ ತಾಂಗಿತ್. ಕಾಡೇ ನಡ್‌ಗುವ ಹಂಗೆ ಭಾರಿ ಅಟ್ಟಹಾಸಲಿ ಒಟ್ಟಿಗೆ ದೊಪ್ಪನೆ ಕೆಳಗೆ ಬಿದ್ದ ಹುಲಿ ಹೊರ್‍ಳಿಕಂಡ್ ಮತ್ತೆ ತಣ್ಣಂಗೆ ಆತ್. ಅಪ್ಪಯ್ಯ ಗೌಡ್ರು ಬಲ ಕಾಲಿಗೆ ಕುತ್ತಿದ ಗಿಡದ ಕುತ್ತಿನ ಕೀಳಿಕಾಕನ ತುಂಬರಕ್ತ ಬಾತ್‌ಗಡ. ರಕ್ತ ಹೋವಲ್ಲಿಗೆ ಉಚ್ಚೆ ಹೊಯ್ಕಂಡ್ ತಲೆನ ರುಮಾಲ್‌ನ ಗಾಯಕ್ಕೆ ಕಟ್ಟಿ ಚೋಯಂಬುನಗತಿ ಏನೂಂತ ನೋಡಿದೊ. ಅವ ನಿತ್ತಲ್ಲೆ ಮರಕಟ್ಟಿದಾಂಗೆ ಆಗಿತ್ತ್. ಬಾರೀ ಕಷ್ಟಪಟ್ಟ್ ಕುಂಟಿಕಂಡ್ ಚೋಯಂಬು ಇದ್ದಲ್ಲಿಗೆ ಹೋದೊ. ಚೋಯಂಬುಂತ 2–3 ಸರ್ತಿ ಕರೆಯಕನ ಅವಂಗೆ ಸೊಯೆಬಾತ್. ಕೂಕ್‌ಳು ಹಾಕಿ ಮುತ್ತಪ್ಪ ಗೌಡರ ಕರ್‍ದೊ. ಅವು ಬೆಡಿ ಸಮೇತ ಬಂದೊ. ಎರಡ್ ಹುಲಿಗ ಅವು ಕುದ್ದ ಮರಂದ ಕೆಳಗೆಂದಳೇ ಬಂದಿದ್ದೊ ಆದರೆ ಗುಂಡು ಹಾರ್‍ಸಿಕೆ ಅವುಕೆ ಆಗಿತ್ತ್‌ಲ್ಲೆ.

ಮತ್ತಪ್ಪ ಗೌಡ್ರ ಪಟೇಲರಲ್ಲಿಗೆ ವಿಷಯ ತಿಳಿಸಿಕೆ ಕಳ್ಸಿದೊ. ಗುಂಡುನ ಸಬ್ದ ಕೇಳಿ ಚೋಯಂಬುನ ಮನೆಯವು ಅಲ್ಲಿಗೆ ಬಂದ್ ಹೇಂಗೂ ಕರ್‍ಕಂಡ್ ಹೋದೊ. ಚೋಯಂಬು ಮಂಞ ಬೊಳ್ಳುಕುಂಞ ಮರಾಟಿ ಬಂಧುಗಳಿಗೆ ವಿಷಯ ಹೇಳಿ ಅವರ ಕರ್‍ಕಂಡ್ ಬಾತ್. ನಡೆಯಕೆ ಆಗದ ಅವಸ್ಥೆಲಿ ಇದ್ದ ಗೌಡ್ರ ಅವು ಹೊತ್ತ್‌ಕಂಡೇ ಅವರ ಮನೆಗೆ ಬುಟ್ಟೊ. ಅವುಕೆ ಸುಧಾರ್‍ಸಿಕಣಿಕೆ ಅಂದರೆ ಕಾಲ್ ಗುಣ ಆಕೆ ಒಂದು ತಿಂಗಳೇ ಬೇಕಾತ್. ಚೋಯಂಬುಗೆ ಹುಲಿ ಜ್ವರಂದ ಮಲ್ಗಿದವಂಗೆ, ದೇಹ ಮತ್ತ್ ದುಡ್ಡುನ ಸ್ಥಿತಿಗತಿ ಸುಧಾರ್‍ಸಿಕೆ ಒಂದ್ ವರ್ಷ ಬೇಕಾತ್. ಮೂರು ಒಳ್ಳೇ ದನಂಗ ಸತ್ತ್ ಅವಂಗೆ ತುಂಬ ಸೋಲು ಆಗಿತ್ತ್.

19

ಮೇದಿನಡ್ಕ ಬೇಟೆ

ಅಪ್ಪಯ್ಯ ಗೌಡರ ಬೇಟೆ ಸ್ನೇಹಿತ ಚೋಯಂಬುಗೆ ಕೆಟ್ಟ ಶಕ್ತಿನ ಬಗ್ಗೆ ತುಂಬ ನಂಬಿಕೆ ಇತ್ತ್. ದೇವರು, ದೈವ ಭೂತಗಳ ನೀವು ಒಳ್ಳೆ ಶಕ್ತಿಗಂತ ನಂಬುಕನ, ಒಳ್ಳೆ ಶಕ್ತಿಗ ಇದ್ದರೆ ಕೆಟ್ಟ ಶಕ್ತಿನೂ ಯಾಕೆ ಇರಿಕೆ ಆಗದ್? ಎಂದ್ ಅಂವ ಪ್ರಶ್ನೆ ಹಾಕ್‌ತಿತ್ತ್. ಪ್ರಪಂಚಲಿಯೇ ಇಂಥ ನಂಬಿಕೆ ಇರ್‌ಕನ ಅವನ ತರ್ಕನ ಪೂರಾ ಅಲ್ಲಂತ ಯಾರಿಗೆ ಹೇಳಿಕೆ ಆದು!

ಲೈಟು ಶಿಕಾರಿನೇ ಒಂದು ಕಳ್ಳ ಬೇಟೆಂತ ಗೌಡ್ರಿಗೆ ಇತ್ತ್. ರಾತ್ರಿನ ಹೊತ್ತ್‌ಲಿ ತಲೆಗೆ ಭಾರಿ ಬೊಳ್ಪುನ ಲೈಟ್ ಕಟ್ಟಿಕಂಡ್ ಆಡುವ ಬೇಟೆ ಅದ್. ಕಣ್ಣಿಗೆ ಬೆಳಕ್ ಬೀಳ್ಕನ ಮಿಟಿ ಮಿಟಿಂತ ಬುಡುವ ಕಣ್ಣ್‌ಗಳ

ಮಧ್ಯಕ್ಕೆ ಗುರಿ ಇಟ್ಟು ಗುಂಡು ಹಾರ್ಸಿರೆ ಪ್ರಾಣಿಗ ಸತ್ತು ಹೋದವೆ. ಹಗಲು ಹೊತ್ತ್‌ಲಿ ಪ್ರಾಣಿಗಳಿಗೆ ಹೊಡ್ದರೂ ಆದಂತೂ ನಿಂತ್‌ಕಂಬದುಲ್ಲೆ, ಓಡುವೆ. ಆಗ ಪ್ರಾಣಿಗಳ ಒಟ್ಟಿಗೆ ಓಡಿ ಗುಂಡು ಹೊಡೆಯೊದು ಬಹಳ ಕುಶಿ ಇದ್ದದೆ.

ಆದರೂ ಅಂದ್ ಚೋೀಯಂಬುನ ಒತ್ತಾಯಲಿ ಹೊರಟ್ ಬುಟ್ಟೊ. ಚೋೀಯಂಬು ರಾತ್ರಿ ಬೇಟೆಗೆ ರಾಮಣ್ಣ ನಾಯ್ಕರ ಕರ್‌ದ್‌ಕಂಡ್ ಬಾತ್. ರಾಮಣ್ಣನಾಯ್ಕರ್ ಐತುನಾಯ್ಕರ ಕರಕಂಡ್ ಬಾತ್. ಯಾಕೇಂತೇಳ್ರೆ ಮೂರು ಜನ ಆಗಿ ಎಂಥ ಕಾರ್ಯಕೂ ಹೊರಡಿಕೆ ಆಗದೂಂತ ಐದ್ ಜನ ಆದರೆ ಭಾರಿ ಒಳ್ಳೆದು ಮೂರರ್‌ಂದ ನಾಲ್ಕು ಒಳ್ಳೆದು ಎಂತ ಇವನ ಹೊರಡಿಸಿದೆಂತ ಹೇಳ್ತ್. ಅಂದ್ ಅವು ಮೇದಿನಡ್ಕ ಕಾಡ್‌ಗೆ. ಆ ಜಾಗೆ ಬಡ್ಡಡ್ಕಂದ ಸುಮಾರು ನಾಲ್ಕು ಮೈಲು ದೂರ ಇತ್ತ್. ಆಗ ಅದ್ ಭಯಂಕರ ಕಾಡ್. ಹಂಞ ಜಾಗೆ ಹುಲ್ಲು ಕುಮೇರಿ ಇತ್ತ್. ಕಾಡ್‌ನ ಮಾಸ ತಿನ್ನದ ಹುಲ್ಲು ತಿಂಬ ಪ್ರಾಣಿಗಳ ಜಾಗೆ. ಹಾಂಗೇಂತ ಚೋೀಯಂಬು ಆ ಜಾಗೆಗೆ ಪೋಯಿಂತ ಒತ್ತಾಯ ಮಾಡ್ತ್. ಗೌಡ್ರು ಐದು ಸೆಲ್ಲ್‌ನ ಲೈಟ್‌ನ ತಲೆಗೆ ಕಟ್ಟಿಕಂಡಿದ್ದೊ. ಇಬ್ಬರ ಕೈಲಿ ದೊಣ್ಣೆ, ಸಣ್ಣ ಲೈಟ್‌ಗ ಅಲ್ಲದೆ ತಲವಾರ್‌ಗ ಇದ್ದೊ. ಚೊಯಂಬುನ ಕೈಲಿ ದೊಡ್ಡ ಬಡಿಗೆ ಇತ್ತ್. ಗೌಡ್ರ ಸಡನ್‌ಡೆತ್ ಬೆಡಿ ಎಡ್ದ್ ಭುಜಲಿ ಮೇಲೆಗೆ ಇತ್ತ್. ಲೈಟ್ ಇದ್ದವು, ಲೈಟ್ ಹಾಕಿಕೆ ಇತ್ತ್‌ಲ್ಲೆ. ಬೇಟೆ ಆದರೆ ಮಾತ್ರ ಅವುಕೆ ಕೆಲಸ.

ಮೇದಿನಡ್ಕ ಕಾಡ್‌ಲಿ ಎರಡ್ ಪ್ರಾಣಿಗ ಲೈಟಿಗೆ ಕಣ್ಣು ಕೊಟ್ಟೊ. ಇವು ರಾತ್ರಿ ಹುಲ್ಲು ಮೇಯಕೆ ಬಂದ ಕಾಡು ಕೋಣಗ ಆಗಿರೋಕೂಂತ ನೆನ್ಸಿದೊ. ಕೋಣಂಗಳಿಗೆ ಬುದ್ಧಿ ಎಲ್ಲಿ ಇದ್ದದೆ. ಕುತ್ತಿಕೆ ಬಂದರೆ ತ್ತೊಂದರೆಂತೇಳಿ ಗೌಡ್ರು ಒಂದು ಕೋಣಕ್ಕೆ ಗುರಿಯಿಟ್ಟೊ. ಇನ್ನು ಎಂತದ್ ಕುದುರೆ ಒತ್ತೊಕುಂತ ಆಕನ ಮರದ ಒಣಗಿಲ್ ಕೊಂಬೆ ಒಂದು ಬೀತ್. ಇದು ಪಿಶಾಚಿದ್ದೆ ಕಣ್ಣು, ಎಂತ ಹೇಳಿ ಹೆದರ್ದ ಚೋೀಯಂಬು ಅಪ್ಪಯ್ಯಣ್ಣಾಂತ ಗೌಡ್ರ ತಬ್ಬಿಕಂಡತ್. ಗುಂಡೇನೋ ಹಾರ್ತ್. ಚೋೀಯಂಬುಂದಾಗಿ ಗುರಿ ತಪ್ಪಿತ್. ಗುಂಡ್‌ನ ಸದ್ದ್‌ಗೆ ಪ್ರಾಣಿಗ ಞೋಯ್‌ಂತ ಒಡ್ಡೊ. ಆಗ ಗೊತ್ತಾತ್ ಅವು ಯಾರದೋ ಕೋಣಂಜ ಅಂತ. ಕೆಲವು ಜನರ ಬೆಡಿಗೆ ದನಂಗ – ಕೋಣಗ ಹೀಂಗೆ ಸತ್ತ ಸಂಗತಿಗಳ ವಿಷಯ ಊರ್‌ಲಿ ಸುದ್ದಿ ಆದೆ. ಕೆಲವು ದಿನ ಇಂತಹ ಸಂಗತಿಗಳಿಗೆ ನನ್ನ ಮೇಲೆ ದೂರು ಹಾಕುವವೂ ಇದ್ದೊ. ಕೆಲವು ಸರ್ತಿ ರಾಜಿ ಪಂಚಾತಿಕೆಗಳೂ ಆತಿದ್ದೊ. ಮರದ ಗೆಲ್ಲ್ ಬಿದ್ದ್ ಚೋೀಯಂಬು ತಬ್ಬಿಕಣದೆ ಇದ್ದಿದ್ದರೆ ಗೌಡ್ರು ದೊಡ್ಡ ಸಂಗತಿಲಿ ಸಿಕ್ಕಿ ಹಾಕಂಬತಿದ್ದೊ. ಗೌಡ್ರುಗೆ ರಾತ್ರಿ ಬೇಟೆಗೆ ಹೋಕೆ ಇಷ್ಟ ಇಲ್ಲದೆ ಇದ್ದದ್‌ಕ್ಕೆ ಇದೂ ಒಂದು ಕಾರಣ. ಅಲ್ಲದೆ ರಾತ್ರಿ ಬೇಟೆಲಿ ಚಿರತೆಗ, ಸಂಕಬಳ ಹಾವುಗ ಎದುರಾಗಿ ಸಂಕಷ್ಟ ತಂದ್ ಹಾಕುವೆ. ಅವು ತೀರ ಅಪಾಯದವು. ರಾತ್ರಿ ಬೇಟೆಲಿ ಬೀಡಿ ಎಳಿಯಕೆ ಇಲ್ಲೆ. ಬೀಡಿನ ಬೊಳ್ಪು ಹೊಗೆನ ವಾಸನೆಲಿ ಮನುಷ್ಯರ್ ಒಳೋಂತ ಪ್ರಾಣಿಗಳಿಗೆ ಬೇಗ ಗೊತ್ತಾದೆ. ಸೊಳ್ಳೆ ಉಂಬುರುಗಳ ಉಪದ್ರ ಬೇರೆ. ಗಟ್ಟಿಯಾಗಿ ಮಾತಾಡುವ ಹಾಂಗೆ ಇಲ್ಲೆ. ನಿದ್ದೆ ಕೆಡೊಕಾರೆ ಒಳ್ಳೆ ಚಾಯ

ಕುಡ್ದ್ ಬರೋಕು. ಹೆಚ್ಚಿಗೆ ರೇಶನ್ ಸಿಕ್ಕದಿದ್ದರೆ ಚಾಯಕ್ಕೂ ತತ್ವಾರ. ಇಷ್ಟು ಎಲ್ಲ ಕಷ್ಟ ಬಂದರೂ ರಾತ್ರಿ ನಷ್ಟ, ಮರ್‌ದಿನ ಹಗಲಿಡೀ ಕಷ್ಟ.

ಏನೋ ಪುಣ್ಯ ಇತ್ತ್. ಗುಂಡು ಸಿಕ್ಕಿ ಸಾಯದೆ ಕೋಣ ಬದ್ಕಿತ್. ಮನಸ್ಸ್ ಸರಿ ಇಲ್ಲೆ ಮನೆಗೆ ಪೋಯಿಂತ ಗೌಡ್ರು ಹೇಳ್ಕನ ಚೋಯಂಬು ಹೂಂಗುಟ್ಟಿತ್. 'ಸಕುನ ಸರಿ ಇಜ್ಜಿ ಅಪ್ಪಯ್ಯಣ್ಣಾ ವಾಪಾಸಾಕ" ಎಂದ್ ರಾಮಣ್ಣ ನಾಯ್ಕ ಒಪ್ಪಿತ್. ಮಾತಾಡದೆ ನಡ್ದೊ. ಬಾಕನ ಅಲ್ಲಿ ಒಂದು ದಿಡ್ಡೆ ಇದ್ದ್. ಅದು ಪಿಶಾಚಿ ಒಂದರ ಜಾಗೇಂತ ಬೇರೆಯವ್ಕೆ ನಂಬಿಕೆ ಇತ್ತ್. ಅದ್ ಬೇಟೆಯವರ ಲೈಟಿಗೆ ಕಣ್ಣು ಕೊಟ್ಟ್ ಆಟ ಆಡ್ಸಿದೆ. ಅಲ್ಲದೆ, ಬೇಟೆಯವರ ದಾರಿ ತಪ್ಪಿಸಿದೇಂತ ಹಿಂದೆ ಒಮ್ಮೆ ಚೋಯಂಬು ಹೇಳ್ದ ನೆನ್ಪು. ಬಾಯಿ ಬುಟ್ಟು ಹೇಳದಿದ್ದರೂ ಎಲ್ಲವೂ ಮನಸ್ಸ್‌ಲಿ ಅದರ್ನೇ ನೆನ್ಸಿಕಂಡ್ ಇದ್ದಿರೊಕು. ದಿಬ್ಬಂದ ಇಳ್ಕಂಡ್ ಇದ್ದೊ. ತಲೆ ಎತ್ತಿ ನೋಡಿರೆ, ಮರದ ಮೇಲೆಂದ ಎರಡು ಕೆಂಪಾಗಿದ್ದ ಕಣ್ಣುಗ ಕಂಡೋಗಡ. ಕೆಳಗೆ ಇರುವ ಕಾಡ್ ಕುರಿಗಳ್‌ಂದ ಅಪಾಯ ಬಾಕೆ ಸಾಧ್ಯ ಇಲ್ಲೆ. ಮೇಲೆ ಒಳದ್ ಮೇದಿನಡ್ಕದ ಪಿಶಾಚಿನೇಂತೇಳಿ ಪರೀಕ್ಷೆ ಮಾಡಿದ ಹಂಗೆ ಆತ್‌ಂತ ಕೆಂಪು ಕಣ್ಣ್‌ನ ನಡೂಗೆ ಗೌಡ್ರು ಗುಂಡು ಹಾರ್ಸಿದೊ. ಒಮ್ಮೆಗೆ ನೆತ್ತರ್ ಗಟ್ಟಿಯಾಗುವ ಹಾಂಗೆ ಬೊಬ್ಬೆ ಹೊಡ್ದು ಚಿಟ್ಟೆ ಹುಲಿ ಒಂದು, ಮೇಲೆಂದ ಕೆಳಗೆ ಬೀತ್‌ಗಡ. ಕೆಳಗೆ ಇದ್ದ ಎರಡು ಬೇರೆ ಪ್ರಾಣಿಗ ಇದ್ದವು ಜೋರಾಗಿ ಓಡ್ದೊ. ಅವರ ಓಟದ ದಾರಿಲಿ ಬೆಳಕ್ ಹಾಕ್‌ಕನ, ಗೊತ್ತಾತ್. ಅವು ಸೀಳ್‌ನಾಯಿಗಂತ, ಆಗ ರಾಮಣ್ಣ ನಾಯ್ಕೆ ಹೇಳಿತ್ "ದಮ್ಮಯ್ಯ ಇಲ್ಲಿಂದ ಒಮ್ಮೆ ಬಚಾವಾಗೊಮ್ಮೊಂತ'. ಆವ ಹೇಳಿಕ್ಕೆ ಕಾರಣ ಇತ್ತ್. ಈ ಚಿಟ್ಟೆ ಹುಲಿನ ಆ ನಾಯಿಗ ಓಡ್ಸಿಕಂಡ್ ಬಂದಿರೊಕು. ಸೀಳ್ ನಾಯಿಗ ಅವೇ ಆಗಿ ಮನುಷ್ಯರ ಹಾಂಗೆ ಎದುರು ಹಾಕಿಕಂಬೊದು ಇಲ್ಲೆ. ಸಿಟ್ಟ್ ಬಂದ್ ಅವ್ಕೆ ತೊಂದರೆ ಆದೇಂತ ಆದರೆ ಅವು ಏನು ಮಾಡುವೊಂತ ಹೇಳಿಕೆ ಆಕಿಲ್ಲೆ. ಸಿಗ್ದೇ ಹಾಕುವೆ. ಸಿಟ್ಟ್ ಬಂದರೆ, ಆನೆ, ಹುಲಿ, ಚಿಟ್ಟೆ ಹುಲಿ, ಯಾವುದಕ್ಕೂ ರಿಯಾಯ್ತಿ ಇಲ್ಲೆ. ಅದರಂದಾಗಿ ಎಲ್ಲ ಪ್ರಾಣಿಗ ಇವುಕೆ ಹೆದ್ರುವೆ. ಸೀಳು ನಾಯಿಗ ಕಮ್ಮಿ ಇದ್ದರೆ ವಿರೋಧಿನ ಕಂಡ ಹಾಂಗೆ, ಹುಡಿ ಇರುವ ಮಣ್ಣ್‌ನ ಮೇಲೆ ಉಚ್ಚೆ ಹೊಯ್ದ್ ಮಣ್ಣಿಗೆ ಬಾಲನ ಉಜ್ಜಿಕಂಡ್, ಬಾಲನ ಬೀಸ್‌ಕನ ಎದುರಾಳಿ ಕಣ್ಣ್‌ಗೆ ಹೊಯಿಗೆ ಬೀಳ್ಕನ ಎದುರಿಗೆ ಬಂದ ಪ್ರಾಣಿ ಕಣ್ಣು ಮುಚ್ಚಿಕಂಡದೆ. ಆಗ ಇವು ಧಾಳಿ ಮಾಡುವೆಗಡ. ಹಂದಿಗಳ ಬೇಟೆಲಿ ನಾಯಿಗ ಅದರ ಕಣ್ಣುಗೇನೆ ಕಚ್ಚುವೆಗಡ. ಕಚ್ಚಿದೇ ಸುರು. ಆಗ ಹಂದಿಗಳ ಕತೆ ಮುಗ್ದ ಹಾಂಗೆನೆ.

ಅಂತೂ ಮನೆಗೆ ಬಾಕನ ಎದುರಿಗೆ ಚಿಪ್ಪು ಹಂದಿ ಒಂದು ಕಂಡತ್. ಸಡನ್‌ಡೆತ್ತ್ ಬೆಡಿ ವಾಪಾಸಾಕನ ಅದರ ಕೊಂದತ್. ಚೋಯಂಬು ಅದರ ಎತ್ತಿಕಂಬಕನ ಗೌಡ್ರು ಹೇಳ್ದೊ "ಅಂಚನೆ ಜೆಪ್ಪುನಾಯಿಗ್ ಅರ್ಧ ರೊಟ್ಟಿ"

20

ಹಂದಿನ ಪಿಟ್ಟ್‌ನ ಗೌಜಿ

ಹಿಂದೆ ಹಿರಣ್ಯ ರಾಕ್ಷಸಂದ ಭೂಮಿನ ಕಾಪಾಡಿಕೆ, ಹಂದಿಯಾಗಿ ಅವತಾರ ಮಾಡ್ದ ವಿಷ್ಣು ದೇವರ "ಭೂ ವರಾಹ ಸ್ವಾಮಿ"ಂತ ತುಳುನಾಡ್‌ನವು ಪಂಜಿರ್ಲಿಂತ ಭೂತ ಆಗಿ ಪೂಜಿಸುವೆ. ಹಾಂಗೆಂತ ಮುಸ್ಲಿಂರ ಹೊರ್ತಾಗಿ ಬಾಕಿ ಮಾಸ ತಿಂಬ ಪೈಕಿ ಇಷ್ಟ ಇದ್ದವು ದೇವರ ಅವತಾರಂತ ಯಾವ ರಿಯಾಯಿತಿನೂ ಕೊಡ್ತುಲೆ. ಹೆಚ್ಚಿನವುಕ್ಕೆ ಹಿರಣ್ಯ ಅಮಾಸ್ಯೆಗೆ, ಹದಿನಾರರ ಕೊಲೆಗೆ ಇಸುವ ಕಾರ್ಯಕ್ರಮಲಿ ಹಂದಿಮಾಸಕ್ಕೆ ವಿಶೇಷ ಮರ್ಯಾದೆ ಉಟ್ಟು. ಹಂದಿ ಗೈಪು ಅಪ್ಪದ ಹಿಟ್ಟು ಎಂದರೆ ಕೋಳಿ ಸಾರ್ ಮತ್ತು ರೊಟ್ಟಿ ಇದ್ದಾಂಗೆಂತ ನಮ್ಮ ಸೀಮೆಲಿ ಪ್ರಖ್ಯಾತಿ ಪಡೆದುಟ್ಟು. ಅದರ ಗೈಪು ಕೊಟ್ಟರೆ ಮಾತ್ರ ನೆಂಟರಿಗೆ ಮರ್ಯಾದೆ ಕೊಟ್ಟಂಗೆ ಆದೆ.

ಅಂದ್ ಗುಂಡ್ಯದ ಕಾಡ್‌ಲಿ ಅಪ್ಪಯ್ಯ ಗೌಡ್ರುನವು ಇಪ್ಪತ್ತ್ ಜನ

ಜೊತೆ ಸೇರಿ ಕೂಡು ಬೇಟೆ ಆಡ್ತಿದ್ದೊಗಡ. ಹತ್ತು ಜನ ಗಂಡಿಲಿ ಕಾದರೆ ಉಳ್ದವು ಕಾಡ್ ಸೋಂಕಿಕೆ (ಸೋವಲು). ನಾಯಿಗಳ ಮತ್ತ್ ಮನುಷ್ಯರ ಬೊಬ್ಬೆಗೆ ಸುಮಾರು 15–20 ಹಂದಿಗ ಚೀಮುಳ್ಳು ಬಲ್ಲೆಗಳ್‌ಂದ ಹೊರಗೆ ಬಂದ್ ದಿಕ್ಕುಪಾಲಾಗಿ ಓಡಿಕಂಡಿದ್ದೊ. ಬೆಡಿ ಹಿಡ್ದವು ನೋಡಿಯೇ ಬಾಕಿ. ಅಪ್ಪಯ್ಯ ಗೌಡ್ರ 'ಸಡನ್ ಡೆತ್' ಗರ್ಜನೆ ಮಾಡಿ ಕಿಡಿ ಹಾರ್ಸಿತ್. ಒಂದು ದೊಡ್ಡ ವರ್ಗಾಳ ಹಂದಿ ಆಳೆತ್ತರಕ್ಕೆ ಹಾರಿ ಮರದ ಬೊಡ್ಡೆನ ಕಚ್ಚಿಕಂಡ್ ಪ್ರಾಣ ಬುಟ್ಟತ್. ಹತ್ತ್ ಬೆಡಿ ಇದ್ದರುನೂ ದಕ್ಕಿದ್ ಒಂದೆ ಹಂದಿ. ಹಂದಿಗ ದಿಕ್ಕಾಪಾಲಾಗಿ ಓಡ್ಕನ ಅವರ ನಾಯಿಗ ಅವರೊಟ್ಟಿಗೆ ಪಂದ್ಯಲಿ ಓಡ್ದಾಂಗೆ ಓಡ್ದೊ. ಕೆಳಗಡೆಗೆ (ಕೆಳಗೆ) ಓಡ್ದ ಬಾಡು ಅಲ್ಲಿಂದ ಒಂದೇ ಸಮ ಅದರ ಪೂರಾ ಶಕ್ತಿನ ಸೇರ್ಸಿಕಂಡ್ ಬಗುಳುದು ಕೇಳ್ತಿತ್ತ್. ಅಲ್ಲಿ ಏನೋ ವಿಶೇಷ ಉಟ್ಟುಂತ ಗೊತ್ತಾಗಿ ಗೌಡರು ಕೆಳಗೆ ಇಳ್ದೊ. ಚೀಮುಳ್ಳು ಬಲ್ಲೆನ ನೋಡಿಕಂಡ್ ಬಾಡು ನಾಯಿ ಬೊಗಳ್ತಿತ್ತ್. ಅದರೊಳಗೆ ಒಂದು ಹಂದಿ ಉಟ್ಟು. ಹೌದೋ ಅಲ್ಲನೋ ಎಂಬ ಹಾಂಗೆ ಕಾಣ್‌ತಿತ್ತ್. ಇದರ ಬುಡಿಕೆ ಆಗದ್‌ಂತ ಬೆಡಿನ ಮುಂದೆಗೆ ಒಡ್ಡಿ ಗುರಿ ನೋಡಿ ಗುಂಡು ಹೊಡ್ದೊ. ಆಗ ಹೊರೆಗೆ ಬಾತ್. ದೊಡ್ಡ ಗರ್ಜನೆ ಒಟ್ಟಿಗೆ ದೊಡ್ಡ ಹಂದಿ. ಅದರ ಅವತಾರಕ್ಕೇ ಹೆದರಿ ಬಾಡು ನಾಯಿ ಬಾಲ ಕೆಳಗೆ ಹಾಕಿ ಚುರ್ ಚುರ್ ಉಚ್ಚೆ ಹೊಯ್ಕಂಡ್ ಹಿಂದೆಗೆ ಓಡ್ತ್. ಗುಂಡ್‌ನ ಪೆಟ್ಟ್‌ಂದ ಹಂದಿನ ಸೊಂಟ ಮುರ್ದಿತ್ತ್. ಅದರ ನೋವುಂದಾಗಿ ಕೋಪಲಿ ಬಾಯಿ ಬುಟ್ಟ್‌ಕಂಡೇ ಬೇಗ ಬಂದ್ ಗೌಡ್ರ ಹಕ್ಕಲೆ ಎತ್ತಿ ಕಾಲಿಗೆ ಕಚ್ಚಿತ್. ಪೆಟ್ಟ್ ತಿಂದ ಹಂದಿ ಹುಲಿಂದಳೂ ಅಪಾಯ. ಹಣೆಗೆ ಗುಂಡು ಹೊಡೆಯಕಾಕನ ಅದರ ಕೆಳಗಿನ ದವಡೆಗೆ (ಬಾಯಿ) ಪೆಟ್ಟ್ ಬಿದ್ದ್ ಭಯಂಕರ ಆಗಿ ಕಾಂಬತ್ತಿತ್ತ್‌ಗಡ. ಹಂದಿ ಮತ್ತೊಮ್ಮೆ ಕಾಲಿಗೆ ಕಚ್ಚಿಕೆ ಬಾಕನ ಇನ್ನೊಂದು ಗುಂಡು ಹೊಡ್ದೊಗಡ. ಹಂದಿ ಬೀತ್.

ಹಂದಿ ಬಲ ಹಾಕಿ ಕಚ್ಚಿದರ್‌ಂದ ಎಡ ಕಾಲ್‌ಂದ ನೆತ್ತ್‌ರ್ ಬಾಕೆ ಸುರು ಆತ್. ಚೋಯಂಬು ಹಂಞ ಹಸುರು ಸೊಪ್ಪು ಗುದ್ದಿ ಕಾಲಿಗೆ ಕಟ್ಟಿತ್. ಆಗ ಚುರುಕ್ಕೆಂತೇಳಿ ಉರಿ ನೆತ್ತಿಗೆ ಹತ್ತಿತ್‌ಗಡ. ಮತ್ತೆ ಅವನ ಹೆಗಲ್ ಮೇಲೆ ಕೈ ಇಸಿ ಕುಂಟಿಕಂಡ್ ಬಂದೊಗಡ. ಪಂಜುರ್ಲಿಗೆ ಕೋಳಿ ಕೊಡುದು ಕ್ರಮ ಇದ್ದ್. ಇದ್ ನಿಮ್ಮ ಕಾಲಿಗೇ ಕಚ್ಚಿತ್‌ಂತ ಹೇಳ್ತ್. ಎಲ್ಲವೂ ನೆಗಾಡ್ದೊಗಡ.

21

ತಲೆಪಳ್ಳ ಕೂಡು ಬೇಟೆ

ಹುಲಿನ ಎದುರೇದುರೆ ಹೊಡೆಯೊಕೂಂತಾರೆ ತಲೆಪಳ್ಳ ಗುಡ್ಡೆಲಿ ಕೂಡು ಬೇಟೆ ಮಾಡ್ದುಂತ ನಿಗಂಟ್ ಮಾಡ್ಡೊ. ಅಲ್ಲಿ ಹೆಚ್ಚು ಹುಲಿಗ ಇರುವ ಸಂಗತಿ ಗೊತ್ತಾಗಿತ್ತ್. ಅಪ್ಪಯ್ಯ ಗೌಡ್ರೂ ಚೋಯಂಬುನೂ ಸೇರಿ ಒಂಬತ್ತ್ ಜನ ಇದ್ದೊ. ಮಧ್ಯಾಹ್ನದ ಊಟ ಬಡ್ಡಡ್ಕಲಿ ತೀರ್ಸಿ ತಲೆಪಳ್ಳ ಗುಡ್ಡೆ ಬುಡಕ್ಕೆ ಹೋದೊ. ಗುಡ್ಡೆಲಿ ಒಂದು ಜಾಗಲಿ ದನಂಗ ನಡೆವ ದಾರಿ ಇತ್ತ್. ಅಲ್ಲಿಂದ ಹುಲಿ ಉಸಿರು ಬುಡುವ ಸದ್ದ್ ಕೇಳಿ ಬಾಕೆ ಸುರುವಾತ್. ನಾಲ್ಕ್ ಹೆಜ್ಜೆ ಕೆಳಗೆ ಹೋಕನ ಹುಲಿ ಹೊಟ್ಟೆ ತುಂಬಿಸಿಕಂಡ್ ಮೇಲೆಗೆ ಹತ್ತಿಕಂಡ್ ಬಾದು ಗೊತ್ತಾತ್. ಅಪಾಯದ ಅಂದಾಜಿ ಆಕನ ಒಟ್ಟಿಗೆ ಇದ್ದವ್ಕೆ ಸನ್ನೆ ಮಾಡಿ ಎಚ್ಚರ ಕೊಟ್ಟಾಕನ ಅವೆಲ್ಲ ತೊಂದರೆ ಇಲ್ಲದ ಜಾಗೆಲಿ ನಿತ್ತ್‌ಕಂಡೊ. ಗೌಡ್ರು ನಡ್ಕಂಡ್ ಮೆಲ್ಲ ಕೆಳಗೆ ಇಳ್ಕಂಡ್ ಬಂದೊ. ನೋಡ್ಕನ ದೊಡ್ಡ ಜೀವದ ಹೆಬ್ಬುಲಿ ರಾಜನ ಹಾಂಗೆ ಮೇಲೆ ಹತ್ತಿಕಂಡ್

ಬರ್‍ತಾ ಇತ್ತ್. ಹೊಟ್ಟೆ ತುಂಬಿದ ಹುಲಿ ಸಂತೋಷಲಿ ಬರ್‍ತಿತ್ತ್. ಗೌಡ್ರು ಹಕ್ಕಲೆಂದ ಹುಲಿನ ನೋಡುದು ಅದೇ ಸುರುನ ಸರ್ತಿ ಆಗಿತ್ತ್. ಹುಲಿ ಒಮ್ಮೆ ತಲೆ ಎತ್ತಿ ನೋಡ್ಕನ ಇವು ಅದರ್‍ನೇ ನೋಡ್ದೊ. ಹುಲಿ ಬಾಲನ ಅತ್ತ ಇತ್ತ ಬೀಸಿಕಾಕನ ಇವರ ಮೇಲೆ ಹಾರಿ ಬುಟ್ಟದೇಂತ ಗಾಬರಿ ಆಗಿ, ಹುಲಿಂದ ಹದ ದೂರಲಿದ್ದ ಇವು ತಡ ಮಾಡ್ತ್‌ಲ್ಲೆ. ಅವರ ಅಪ್ಪನ ಸಡನ್‌ಡೆತ್ ಬೆಡಿನ ಮುಂದೆಗೆ ನೀಂಡಿ ಹಿಡ್ದ್ ಹುಲಿ ತೀರ್ಮಾನ ತೆಕಂಬಕೆ ಮುಂದೆನೇ ಇವರ ಬೆಡಿ "ಢಾಂ"ಂತೇಳಿ ಅದರ ಕೆಲಸ ಮಾಡ್ತ್. ಬೆಡಿನ ಸದ್ದ್‌ನು, ಹುಲಿನ ಆರ್ಭಟೆನೂ ಸೇರ್‌ಕನ ತಲೆಪಳ್ಳ ಗುಡ್ಡೆನೇ ಅದ್ರುವ ಹಾಂಗೆ ಅನ್ಸಿತ್. ಆರ್ಭಟೆ ಕೊಟ್ಟ್ ಮೇಲೆ ಹಾರಿ ಬೀಳ್‌ಕನ ಇನ್ನೊಂದು ಗುಂಡು ಹೊಡ್ದೊ. ಎರಡ್ ಗುಂಡು ತಾಂಗಿದ ಹುಲಿ, ನೆತ್ತರ್ ಕಕ್ಕಿಕಂಡ್ ಭಾರಿ ಬರೆ ಇದ್ದದ್‌ಕ್ಕೆ ಇಳಿಜಾರ್ ಜಾಗೆಲಿ ಜಾರಿಕಂಡೇ ಹೋಗಿ ಕೆಳಗೆ ಚೋಡಿಗೆ ಬೀತ್. ಅಲ್ಲೇ ಸೌಖ್ಯಲಿ ಒರಗಿತ್. ಹತ್ತಿರಂದ ಮೈ ಮೇಲೆ ಬೀಳಿಕೆ ತಯಾರಾದ ಹೆಬ್ಬುಲಿ ಎದುರೆದುರಿಗೆ ಕೊಂದ ಗೌಡ್ರಿಗೆ ಕುಶಿ ಆತ್. ಕಲ್ಲುರಾಯರು "ಈ ಆಣ್ ಮಗೆ" ಎಂದ್ ಹೇಳಿಕಂಡ್ ಭುಜ ತಟ್ಟಿದೊ. ಒಟ್ಟಿಗೆ ಇದ್ದವೂ ಎಲ್ಲವೂ ಹೊಗಳಿಕೆ ದನಿ ಕೊಟ್ಟೊಗಡ. ಹೆಬ್ಬುಲಿ ಬಲಿ ಆದ ಸುದ್ದಿ ಕೇಳಿ ಊರ್‌ನವು ಎಲ್ಲಾ ಬಂದೊ. ಹುಲಿನ ದಂಡು ಕಟ್ಟಿ ಬಡ್ಡಡ್ಕಕ್ಕೆ ತಂದೊ. ನೋಡಿಕೆ ಬಂದವು ಎಲ್ಲ, ಮದುಮಕ್ಕಳಿಗೆ ಕೈಲಿ ಏನಾರೂ ಇಸುವ ಹಾಂಗೆ ಹುಲಿನ ಮೇಲೆ ದುಡ್ಡು ಇಸಿಕೆ ಸುರು ಮಾಡ್ದೊ. ಮತ್ತೆ ಮಾಮೂಲ್‌ನ ಹಾಂಗೆ, ಮೀಸೆ ತೆಗೆದ್ ಸುಟ್ಟು ಉಗುರು, ಚರ್ಮ ತೆಗ್ದ್ ಒಳ್ದದರ ಗುಂಡಿಗೆ ಹಾಕಿದೊ. ಆ ಸಮಯದಲ್ಲಿ ಅಪ್ಪಯ್ಯ ಗೌಡ್ರ ಹೆಸರು ಕಾಗದದ ಬರ್‍ದ್ ಎಡ್ರಸ್‌ಲಿ "ಪಿಲಿ ಅಪ್ಪಯ್ಯಣ್ಣ"ಂತ ಇತ್ತ ಒಬ್ಬ ಪೋರೆಸ್ಟರ್ ಹಂಗೆ ಬರ್‍ದಿದ್ದೊ.

22

ಹುಲಿ ಎದ್ರು ನಿತ್ತ ಅಪ್ಪಯ್ಯ ಗೌಡ್ರು

ಇಲ್ಲೊಂದು ಸ್ವಾರಸ್ಯ ಅನುಭವ ಉಟ್ಟು. ಬಡ್ಡಡ್ಕಲಿ ಶುರೂಗೆ ಬತ್ತ ಬೆಳೆಯತಿದ್ರೊ. ಸ್ವಲ್ಪ ಎತ್ತರ ಜಾಗದ ಗದ್ದೆಲಿ ಅಡಿಕೆ ಕೃಷಿ ಮಾಡಿಕೆ ಶುರು ಮಾಡ್ರೊ. ಹಾಂಗೆ ಒಂದು ದಿನ ಗದ್ದೆ ಹೂಡಿ ಆಗಿ ಕೋಣಗಳ ಮೀಸಿ ಆಗಿ ಗುಡ್ಡೆಗೆ ಮೇಯಕೆ ಬುಟ್ಟಿದ್ರೊ. ತೋಟಲಿ ಹುಲ್ಲು ಕಾಡು ಬೆಳ್ದರೆ ಹಾವುಗ ಸೇರಿ ಕೊಂಬೋಂತೇಳಿ, ಅದರ ಕೀಳುವ ಕೆಲಸ ಮಾಡ್ತಿದ್ರೊ. ಗುಡ್ಡೆಗೆ ಹೋದ ಕೋಣಗಳಿಗೆ ಬೆದ್ರುನ ಮೆಂಟೆ ಕಟ್ಟಿದ್ರೊ. ಅದ್ ಹಂದಾಡಿಕಂಡ್ ಇದ್ದರೆ, ಆಗ ಕೋಣಗ ಎಲ್ಲಿ ಮೇದ್‌ಕಂಡ್ ಒಳೋಂತ ಗೊತ್ತಾಕಂಡ್ ಇದ್ದದೆ. ಅದ್ ಒಳ್ಳೆ ತಡಿ ಇದ್ದ ಕೋಣಂಗ. ಹುಲಿನ ಎದ್‌ರ್‌ಲಿ ಬದುಕಿ ಬರುವಷ್ಟು ಉಷಾರು ಇದ್ರೊ. ಹಂಞ ಹೊತ್ತಿಗೆ ಮೆಂಟೆಗಳ ಸ್ವರಲಿ ವ್ಯತ್ಯಾಸ ಕೇಳಿ ಬಾತ್. ತೋಟಕ್ಕೆ ಬಾಕನ ಮನೆಂದ ದೊಣ್ಣೆ ತಕಂಡ್ ಬಂದಿದ್ರೊ. ನಮ್ಮ ಬೇಟೆ ನಾಯಿಗ ಗೌಡ್ರ ಮುಂದೇನೆ ತೋಟಂದ ಓಡಿ ಗುಡ್ಡೆ ಹತ್ತಿ ಆಗಿತ್ತ್. ಗೌಡರೂ ಗುಡ್ಡೆ ಹತ್ತಿ ನೋಡ್ಕನ 'ಹುಲಿ'. ಬೆಡಿ ಕೈಲಿ

ಇಲ್ಲದೆ ಒಮ್ಮೆ ಮಂಡೆ ಬೆಚ್ಚ ಆತ್. ಹುಲಿ ಕೋಣನ ಕಾಲಿಗೆ ಕಚ್ಚಿಕೆ ನೋಡ್ದೆ, ಆಗ ಇನ್ನೊಂದು ಕೋಣ ವಾಪಾಸ್ ಹುಲಿಗೆ ಕುತ್ತಿದೆ. ಬಿರ್ಸ ಹುಲಿ ಅದರ ಮೈಗೆ ಕೊಂಬು ತಾಗದಾಂಗೆ ಜಾಗ್ರತೆ ಮಾಡ್ತಿತ್. ಗೌಡ್ರು ಅಲ್ಲಿಗೆ ಬೊಬ್ಬೆ ಹೊಸ್ಕಂಡ್ ಹೋಕನ ಇವರ ಬೊಬ್ಬೆಗೆ ನಾಯಿಗಳ ಬೊಗಳಾಟಕ್ಕೆ ಹುಲಿ ಕೋಣಗಳಿಗೆ ಕಚ್ಚುದು ನಿಲ್ಸಿತ್. ಹುಲಿನ ಕೊಲ್ಲಿಕೆ ಕೈಲಿ ಬೆಡಿ ಇಲ್ಲೆ. ಹುಲಿನ ಮೂಕಳ್ಮೆ ಸಿಕ್ಕಿರೆ ಓಡಿ ಹೋವ ನಾಯಿಗ ಇಂದ್ ಇಷ್ಟೊಂದ್ ಹೊತ್ತ್ ನಿಂತದ್ ಪುಣ್ಯ. ಕೋಣಂಗಳ ಮೇಲೆ ಕಣ್ಣ್ ಹಾಕಿದ ಹುಲಿ ಅವು ಅಲ್ಲಿಂದ ಹೋದ ಮೇಲೆ ಅದೂ ಇವರ ನೋಡಿಕಂಡೇ ಸುಮ್ಮನೆ ನಿತ್ತತ್. ಬಹುಶಃ ಹುಲಿ ಮನ್ಸನ ನೆತ್ತರ್‌ನ ರುಚಿ ಹಿಂದೆ ನೋಡಿದ್ದಿದ್ದರೆ ಅದ್ ಗೌಡ್ರ ಮೇಲೆ ಹಾರ್ತಿತ್. ಐದಾರ್ ನಿಮಿಷ ಅತ್‌ಗಡ. ಗೌಡ್ರು ಅದರ ನೋಡಿಕಂಡ್ ಸುಮ್ಮನೆ ನಿತ್ತ್‌ಕಂಡಿದ್ದೊಗಡ. ಏನ್ ದೇವರ ಮಾಯೆನೋ. ಹುಲಿ ಇಪ್ಕೆ ಕುಂಡೆ ತಿರ್ಗಿಸಿ ನಡ್‌ಕಂಡು ಹೋಕೆ ಸುರು ಮಾಡ್ತ್. ಒಂದೊಂದು ಸರ್ತಿ ತಿರುಗಿ ನೋಡಿ ಗುರ್ರ್ ಎಂತ ಹೇಳಿಕಂಡ್ ಹೋತಿತ್. ಬಹುಷ ಅಂದ್ ಗೌಡ್ರ್ ಅವರ ಸಡನ್‌ಡೆತ್ ಅವರ ಕೈಲಿ ಇಲ್ಲದ್ ಒಳ್ಳೆದಾತ್. ಅಂದ್ ಹುಲಿನ ಮುಖಾಮುಖಿ ನೋಡಿಕಂಡ್ ನಿಂತಾಂಗೆ ಆತ್. ಹುಲಿಗೆ ಪಾಪ ಕೋಣಗಳೊಟ್ಟಿಗೆ ಚೆನ್ನಾಟ ಆಡಿಕಂಡ್ ಸಾಕಾಗಿರೋಕು. ಮನೆಗೆ ಬಂದು ನೋಡ್ಕನ ಹಟ್ಟಿಲಿ ಕೋಣಂಗ ಉಷಾರ್‌ಲಿ ಇದ್ದೊ. ಕೋಣಗಳ ಗಟ್ಟಿತನ ನೋಡಿ ಎಲ್ಲವುಕೆ ಕುಶಿ ಆತ್.

23

ಅಪ್ಪಯ್ಯ ಗೌಡ್ರ ಮನಸ್ಸ್‌ನ ಮಾತ್

ಕಾಲಿಗೆ ಕುತ್ತಿ ತಾಂಗಿ ಬೇಟೆಗೆ ಹೋಕೆ ಆಗದೆ ಇದ್ದ ಆ ತಿಂಗಳ್ಲಿ ನಾ ಇನ್ನ್ ಬೇಟೆಗೆ ಬೇಟೆ ಆಡಿಕೆ ಆಗದ್ ಎಂಬ ಮನಸ್ಸ್ ಬಾತ್. ಸುರು ಸುರು ಬೇಟೆ ಆಡ್‌ಕನ ಬೆಳೆಗಳ, ಜಾನುವಾರುಗಳ ಕಾಪಾಡಿನೆ ಎಂದು ಒಳಗಿನ ಮನಸ್ಸ್ ಹೇಳ್‌ತಿತ್ತ್. ಆಕೇರಿಗಾಕನ, ಕಾಡು ಪ್ರಾಣಿಗಳ ಮನುಷ್ಯ ಹೆಚ್ಚಿನ ಬೇಡದ ಆಸೆಂದ, ಕಾಡ್ ಪ್ರಾಣಿಗಳ ಬದುಕುವ ಜಾಗೆಲಿ ಕೃಷಿ ಮಾಡಿಕೆ ಸುರು ಮಾಡ್‌ದ್ದೇ, ಬೆಳೆ ಮತ್ತ್ ನಾಕ್ ನಡೆಗ ಅವರಂದಾಗಿ ನಾಶ ಆಕೆ ಕಾರಣಾಂತ ಯೋಚಿಸಿಕೆ ಸುರು ಮಾಡ್ದೆ. ಮನುಷ್ಯರು ಸಂಖ್ಯೆ ಹೆಚ್ಚಿಸಿಕಂಡದೇ ಈ ಪಾಪಕ್ಕೆ ಮುಖ್ಯ ಕಾರಣ ಎಂಬ ಸತ್ಯನ ತಿಳ್ಕಂಡೆ. ಜನಸಂಖ್ಯೆನ ಹದ್ದು ಬಸ್ತ್‌ಲಿ ಇಸಿಕಂಡ್, ಪರಿಸರನ ಉಳ್ಸಿಕಣದಿದ್ದರೆ, ಮನುಷ್ಯರಿಗೆ ಒಳ್ಳೆದಾದುಲ್ಲೆ ಎಂಬ ಸತ್ಯನ ಮುಂದೆನ ಮಕ್ಕಳಿಗೆ ತಿಳ್ಸೊಕು. ಅದಕ್ಕೆ ಬೇಕಾಗಿ ಬಡ್ಡಡ್ಕಲಿ ಒಂದು ಶಾಲೆ ಮಾಡೊಕು, ಮಕ್ಕ ವಿದ್ಯೆ ಕಲಿಯೋಕೂಂತ ತೀರ್ಮಾನ ತೆಕಂಡೆ.

ಇದ್ ನನ್ನ ಆಖೇರಿನ ಬೇಟೆ. ಅಂದ್ ನಾ ಹಳೆದರ ಎಲ್ಲಾ

ನೆನ್ನಿಕಂಡ್, ಕುದ್ದ್‌ಕಂಡ್ ಇರ್ಕನ ಬಾಟೋಳಿ ಗುಡ್ಡೆಂದ ವಿಚಿತ್ರ ಸ್ವರ ಕೇಳಿಕೆ ಸುರು ಆತ್. ಮಾಮೂಲು ಅಭ್ಯಾಸನ ಬುಡಿಕೆ ಆಗದೆ "ಸಡನ್ ಡೆತ್" ಬೆಡಿನ ಹಿಡ್ಕಂಡ್ ಹೊರಗೆ ಹೊರ್ಟೆ. ಈ ಬೆಡಿ, ಕೊಡಗ್‌ನ ನಾಪೊಕ್ಲುನ ಒಂದು ರೈತನ ವಿಧವೆನ ನೆಂಟರ್‌ಂದ 1939ಇಸವಿಲಿ ನಮ್ಮ ಅಪ್ಪನ ಕೈ ಸೇರಿತ್. ನಮ್ಮ ಅಪ್ಪನ ಅವಧಿಲಿ ಕುಟುಂಬಲಿ ಆಸ್ತಿ ಆಗಿ ಬಂದ ಆರನೆಯ ಬೆಡಿ ಆದ್ ಇದ್ ತಯಾರಾದ್ದ್ ಇಂಗ್ಲೆಂಡ್ ದೇಶದ ಬರ್ಮಿಂಗ್‌ಹ್ಯಾಂ ಜಾಗೆನ ಮಿಡ್‌ಲೇಂಡ್ ಕಂಪೆನಿಲಿ. ಇದು ಒಂದು ಜೀವ ಇಲ್ಲದ ಸಾಮಾನ್‌ಂತ ನಾ ನೆನ್ನಿತ್‌ಲ್ಲೆ. ನನ್ನ ಎಷ್ಟೋ ಸರ್ತಿ ರಕ್ಷಣೆ ಮಾಡ್ದ ಈ ಬೆಡಿ ನನ್ನ ಜೀವನದ ದೋಸ್ತಿಂತ ನೆನ್ನಿಯೊಳೆ.

ಅಲ್ಲಿ, ತಟ್ಟ್ ಜಾಗೆ ಒಂದು ಇತ್ತ್. ಬಾಟೋಳಿ ಗುಡ್ಡೆನ ಕೆಳಗಿನ ಭಾಗ. ಅಲ್ಲಿಂದ ಮತ್ತೆ ಅದೆ ಬೊಬ್ಬೆ ಕೇಳ್‌ತ್ತಿತ್ತ್. ಜಾಗ್ರತೆಲಿ ಮುಂದೆ ಹೋಕನ ಒಂದು 'ಕಡೆ'ನ ನಾಲ್ಕ್ ಸೀಳು ನಾಯಿಗ ಸುತ್ತುಗಟ್ಟಿ ಕಟ್ಟಿ ಕಚ್ಚಿ ಎಳೆಯುತಿದ್ದೊ. ಒಂದು ಹಿಂದೆನ ಕಾಲ್‌ನ, ಮತ್ತೊಂದ್ ಮುಂದೆನಾ ಕಾಲ್‌ಂದ, ಇನ್ನೊಂದು ಭುಜನ, 4ನೇ ನಾಯಿ ಕುತ್ತಿಗೆನ ಮಾಂಸ ಎಳ್ದ್ ಕಚ್ಚಿಕಂಡ್ ಇದ್ದೊ. 'ಕಡೆ' ಜೀವ ಹೋವ ತರಲಿ ಕೂಗಿದೆ. ತುಂಬ ಅಪಾಯದ ಸೀಳ್ ನಾಯಿಗಳಂದ 'ಕಡೆ'ನ ಕಾಪಾಡ್ದು ಹೇಂಗೇಂತ ನಾ ಮುಂದೆ ಯೋಚನೆ ಮಾಡೊಕಾತ್. ಅವು ಎಷ್ಟು ಸೂಕ್ಷ್ಮ ಬುದ್ದಿಯವೂಂತ ಹೇಳ್ರೆ, ಗುಂಡು ಒಂದ್ ಹಾರ್ಸಿ ಆಕನ ಇನ್ನ್ ಮೂರು ನಾಯಿಗ ಕ್ಷಣಲಿ ನನ್ನ ಮೇಲೆ ಹಾರುವೊ. ನನ್ನ ಮಾಸ ಎಳಿಯಕೆ ಸುರು ಮಾಡುವೊ. ಬೇರೆ ಎಂತ ದಾರಿನೂ ಇಲ್ಲದೆ, ಎತ್ತರದ ಮರ ಹತ್ತಿದೆ। ಒಂದು ನಾಯಿಗೆ ಗುಂಡು ಹೊಡ್ದೆ. ಗುಂಡುನ ಸದ್ದ್ ಕೇಳಿ ಗಡಿಬಿಡಿ ಆಗಿ ಸುತ್ತಲೂ ನೋಡ್ತಿದ್ದೊ. ಗುಂಡು ತಿಂದ ನಾಯಿ ಕೆಳಗೆ ಬೀಳ್ಕನ ಇನ್ನೊಂದಕ್ಕೆ ಹೊಡ್ದೆ. ಅದೂ ಬೀಳ್ಕನ, ಇನ್ನೊಂದಕ್ಕೆ ಹೊಡ್ದೆ. ನಾಲ್ಕನೇ ನಾಯಿ ಓಡಿ ಹೋತ್.

ನಾನು ಮರಂದ ಇಳ್ದ್ ನೋಡ್ದೆ, ಸೀಳ್ ನಾಯಿಗಳೊಟ್ಟಿಗೆನ ಪೆಟ್ಟ್‌ಲಿ ಕಡೆ, ಜೀವ ಉಳಿಸಿ ಕಣಿಕೆ ಬೊತ್ತದೆ ಸತ್ತ್ ಹೋಗಿತ್ತ್. ನಂಗೆ 'ಕಡೆ'ಂದಲೂ ಲಾಭ ಇಲ್ಲೆ, ಸೀಳ್‌ನಾಯಿಗಳ್ನ ಕೊಂದೂ ಪ್ರಯೋಜನ ಇಲ್ಲೆ. ಕಡೆ ಬದ್ಕಿದ್ದರೆ, ನಾಯಿಗಳ ಕೊಂದದ್ ಸಾರ್ಥಕ ಆದರೂ ಆತಿತ್ತ್. ಸುಮ್ಮನೆ ವಿಷಯಕ್ಕೆ ಕೈ ಹಾಕಿ ನಾಯಿಗಳ ಕೊಂದದೂ ತಪ್ಪು. ಇನ್ನ್ ಮುಂದೆ ಕಾಡಿಗೆ ಬಾಕನ ಬೆಡಿ ತಾಕೆ ಆಗದ್‌ಂತ ತೀರ್ಮಾನ ಮಾಡಿಕಂಡೆ.

ನಾ ಹಂಗೇ ಯೋಚನೆ ಮಾಡಿಕಂಡಿರ್ಕನ ಗುಂಡುನ ಶಬ್ದ ಕೇಳಿ ತೋಟಲಿ ಕೆಲ್ಸಲಿ ಇದ್ದವು ಓಡಿಕಂಡ್ ಬಂದೊ. 'ಕಡೆ'ನ ನೋಡಿ ಅವುಕೆ ಬಾರೀ ಕುಷಿ ಆತ್. ನಾಯಿಗಳ ಅಲ್ಲೇ ಗುಂಡಿ ತೋಡಿ ಹಾಕಿ ಸತ್ತ 'ಕಡೆ'ನ ಒಳ್ಳೆ ಜಾಗೆಗೆ ಕಟ್ಟಿ ಹೊರ್‌ಕನ ಅವು ಸುರೂಲಿ ನಾ 'ಕಡೆ' ಕೊಂದದರ ನೆನ್ನಿಕಂಡ್ ಬಂದೊ.

ನಾ ನೆನಪುನಃ ಆಳಲಿ, ಭಾರಿ ಹಿಂದೆದ್ದ್ ಯೋಚನೆ ಮಾಡ್ದೆ. ಹನ್ನೆರಡು ವರ್ಷದ

ಚಡ್ಡಿ ಹೈದ ಆದೆ. ಮಂಗಗಳ ಒಟ್ಟಿಗೆ ಮಸ್ಕಿರಿ ಮಾಡವಂವ ಆದೆ. ಮೊಲದೊಟ್ಟಿಗೆ ಪಂಥ ಕಟ್ಟಿ ಓಡುವ ಹೈದ ಆದೆ. ಚರೆಗಳ ಓಟೆಲಿ ತುಂಬಿಸಿಕಂಡ್ ಗುಂಡು ಹೊಡಿಯವ ಹಾಂಗೆ ಮಾಡುವ ಪೋಕರಿ ಆದೆ. ಹೀಂಗೆ ಒಂದೊಂದೆ ನೆನ್ಸಿಕಂಡ್ ಹೋದೆ. ಗಂಡನ ಕಳ್‌ಕಂಡ ಹೆಣ್ಣುಹುಲಿ, ಅವ್ವನ ಕಳ್‌ಕಂಡ ಮರಿ ಕಾಟಿ, ಸತ್ತ ಅವ್ವನ ಮೊಲೆ ಹೀಂಪುವ ಹುಲಿ ಮರಿಗ, ಹೀಂಗೆ ಎಲ್ಲ ಮತ್ತೆ ಮತ್ತೆ ಕಣ್ಣಿಗೆ ಕಂಡಾಂಗೆ ಆತಿತ್. ಕೊಲ್ಲ್ ಬೇಡಂತ ಹೇಳಿ ಬೇಡಿಕಂಡಾಂಗೆ ಆತಿತ್.

ಮನೆಗೆ ಬಂದಂವ ನನ್ನ ಬೆಡಿನ ಗೋಡೆಗೆ ನೇತುಹಾಕಿದೆ. ಆಮೇಲೆ ಕೋವಿಂದ ಒಂದೇ ಒಂದು ಮೃಗನ ನಾ ಕೊಂದ್‌ತ್‌ಲ್ಲೆ. ಅಲ್ಲಿಗೆ ಅಡ್‌ಗಿತ್ತು ನನ್ನ ಬೆಡಿನ ಸಬ್ದ.



ಅಪ್ಪಯ್ಯ ಗೌಡ್ರು ಬೇಟೆನ ಬಿರ್ಸ ನಿಜ. ಆದರೆ ಆ ಬೇಟೆನ ಅನುಭವನ ಅವು ಅಕ್ಷರ ರೂಪಲಿ ಬರ್‍ದ್ದಿವು ಅಲ್ಲ. ಅವ್ಕೆ ಬೇಟೆ ಆಡುವ ಮನ್ಸ್ ಸುರುವಾದ್ ಬಾಲ್ಯದ ಕುತೂಹಲಂದ. ಕ್ರಮೇಣ ಕೃಷಿಕರಾದ ಆದ ಅವು ಕೃಷಿನ ಪ್ರಾಣಿಗಳ್‌ಂದ ರಕ್ಷಣೆ ಮಾಡಿಕೆ ಬೇಕಾಗಿ ಬೇಟೆ ಆಡ್ತಾ ಆಡ್ತಾ ಅದ್ ಅವ್ಕೆ ಹವ್ಯಾಸ ಆತ್. ಸಸ್ಯಾಹಾರಿ ಆಗಿದ್ದ ಅವು ತಿಂಬಕೆಂತ ಹೇಳಿ ಪ್ರಾಣಿಬೇಟೆ ಆಡ್ದಿವು ಅಲ್ಲ . ಅಪ್ಪಯ್ಯ ಗೌಡ್ರ ಬದ್ಕೇ ಒಂದು ರೀತೀಲಿ ಬೇಟೆ. ಹಿಂಗಾಗಿ ಹುಲಿ, ಕಾಟಿ, ಹಂದಿಗಳ ಹೆಜ್ಜೆನ ಗುರ್ತ್ ಹಿಡ್ದ್ ಹೊಂಚು ಹಾಕಿ ಅವುಗಳ ಹೊಂಚಿದವು.

ಅಂದ್ ಬೇಟೆ ಒಂದು ಮೋಜ್ ಆಗಿದ್ದ ಕಾಲ. ಆದರೆ ಇಂದ್ ಬೇಟೆ ಜೀವಾಧಿ ಶಿಕ್ಷೆ ಅನುಭವಿಸುವ ಕಾಲ. ಗೌಡ್ರು ಬೇಟೆಯಾಡ್ದ ಕಾಲಲಿ 'ಹುಲಿಮದುವೆ'ನಂಥ ಸಾಮಾಜಿಕ ಮಾನ್ಯತೆ; ಬ್ರಿಟಿಷ್ ಅಧಿಕಾರಿಗಳ್‌ಂದ ದುಡ್ಡು ಸಮೇತ ಪಾರಿತೋಷ ಸಿಕ್ತಿತ್. ಆದರೆ ಇದ್ಕೆ ಬೇಕ್ಕಾಗಿ ಗೌಡ್ರು ಬೇಟೆಯಾಡ್ದವಲ್ಲ. ಅವು ಬೆಳೆಗಳ, ಜಾನುವಾರುಗಳ ಕಾಪಾಡ್ನೆ ಅಂತೇಳಿ ತನ್ನೊಳಗಿನ ತುಡ್ತಕ್ಕಾಗಿ ಬೇಟೆ ಆಡ್ದವು. ಅಕೇರಿಗಾಕನ ತನ್ನ ಬೆಡಿಂದ ಅವ್ವನ ಕಳ್ಕಂಡ ಮರಿ ಕಾಟಿ, ಸತ್ತ ಅವ್ವನ ಮೊಲೆ ಹೀಂಪುವ ಹುಲಿ ಮರಿಗ, ಇದರೆಲ್ಲ ನೆನಸಿಕಂಡ್ ತನ್ನ ಡಬ್ಬಲ್ ಬ್ಯಾರೆಲ್ ಗನ್ನಿನ ಸಬ್ದನ ಅಡ್‌ಗಿಸಿದೊ.

ಬೇಟೆನ ಬಿರ್ಸ ಎಂದ್ ಹೆಸ್ರ್ ಪಡ್ದ ಗೌಡ್ರ ಪುಗಾರ್ತೆ ಕೇಳಿ ಸುರೂಗೆ ಬರ್‍ದ್ದಿವು ಡಾ. ಚಿನ್ನಪ್ಪ ಗೌಡ್ರು. ಇದೇ ಚಿನ್ನಪ್ಪ ಗೌಡ್ರು 'ಗುಂಡು ಕೋವಿ ಅಲ್ಲ ಗಂಡು ಕೋವಿಯ ಬಡ್ಡಕ್ಕ ಅಪ್ಪಯ್ಯ ಗೌಡರು' ಎಂಬ ಲೇಖನ ಒಂದರ 1985ರ ಗೌಡ ಸಮ್ಮೇಳನ್‌ದ ಸ್ಪಂದನ ಸ್ಮರಣ ಸಂಚಿಕೆಯಲ್ಲಿ ಬರ್‍ದ್ದೊಳ. ಇವು ಬರ್‍ದ ಮೇಲೆ 'ಶಿಕಾರಿಯ ಸೀಳು ನೋಟ'ದ ಶೀರ್ಷಿಕೆಲಿ, ಜೀವ ಇರ್‌ಕನ ಗೌಡ್ರು ನಿರೂಪಿಸಿದಾಂಗೆ ಡಾ. ಪ್ರಭಾಕರ ಶಿಶಿಲ ಬೇಟೆನ ಅನುಭವ ಕಥನ ಪುಸ್ತಕ ಬರ್‍ದ್ದೊ. ಮತ್ತೆ ಅದೇ ಶಿಶಿಲರ್ ಭಾವನಾತ್ಮಕ ಸ್ಪರ್ಶಲಿ 'ಸದ್ದಡಗಿದ ಶಿಕಾರಿ ಕೋವಿ' ಅಂತೇಳ್ವ ಕೃತಿನ ಪುನರ್ರಚನೆ ಮಾಡ್ದೊ. ಇದರ ಆಧರಿಸಿದ ಈ ಬೇಟೆನ ಬಿರ್ಸ - ಅಪ್ಪಯ್ಯ ಗೌಡ್ರ ಅನುಭವ ಕಥನನ ಅವರ ಮೋಕೆನ ಮಗ್ಳ್ ನಿಡ್ಯಮಲೆ ವೇದಾವತಿ ಅನಂತ ಬಡ್ಡಕ್ಕ ತನ್ನ ಗ್ರಹಿಕೆಯಲ್ಲಿ ಬರ್‍ದ್ದೊಳ.

ಇಂದ್ ಬೇಟೆ ನಿಷಿದ್ಧ. ಪ್ರಾಗ್‌ನ ಬೇಟೆನ ಅನುಭವ ಈ ಅರೆಭಾಷೆನ ಕೃತಿಲಿ ಒಡಮೂಡಿ, ಇಂದ್‌ನ ಪೀಳಿಗೆಗೆ ಸ್ಮೃತಿಯಾಗುಳಿವ ಅನನ್ಯತೆ ಪಡ್ದುಟು. ಇಲ್ಲಿ ಅನುಭವ ಕಥನವಾಗುವ ವೇಗದ ನಡೆಲಿ, ಅದರ ವಿಸ್ತೃತವಾಗುವ ಸೂಕ್ಷ್ಮ ವಿವರಗ ಮಾಯ ಆದಂಗೆ ಕಂಡದೆ...........

ಡಾ. ಪೂವಪ್ಪ ಕಣಿಯೂರು